## ಅಧ್ಯಾಯ 12

# ಕಾನಾನಿಗೆ ಹೋಗುವಂತೆ ಅಬ್ರಹಾಮನನ್ನು ಕರೆದದ್ದು

ಲೋಕದಲ್ಲಿದ್ದ ಪಾಪ ಮತ್ತು ಪ್ರಳಯದ ಮೂಲಕವಾಗಿ ದೇವರಿಂದ ದಂಡನೆಯು ಇಳಿದು ಬರುವದರ ಕಥನಗಳ ತರುವಾಯ (ಅಧ್ಯಾಯಗಳು 1-11), ಆದಿಕಾಂಡದಲ್ಲಿನ ಎರಡನೆಯ ವಿಭಾಗವು ಮುಖ್ಯವಾದ ದೃಷ್ಟಿಯನ್ನು ಸಂಕುಚಿತಗೊಳಿಸುತ್ತದೆ (ಅಧ್ಯಾಯಗಳು 12-50). ತೋಟದಲ್ಲಿ ಪಾಪ ಮಾಡಿದ್ದರಿಂದಾಗಿ ಮಾನವರ ಮೇಲೆ ತಾನು ಘೋಷಣೆ ಮಾಡಿದ್ದ ಶಾಪವನ್ನು ರದ್ದುಗೊಳಿಸುವ ತನ್ನ ಯೋಜನೆಯನ್ನು ಜಾರಿಗೆ ತರುವದಕ್ಕೆ ಆರಂಭಿಸುತ್ತಾನೆ. ಆತನು ಅಬ್ರಹಾಮ, ಇಸಾಕ, ಯಾಕೋಬರ ಮೂಲಕವಾಗಿ ತನ್ನ ಒಡಂಬಡಿಕೆಯ ಜನರಾದ ಇಸ್ರಾಯೇಲ್ ಜನಾಂಗವನ್ನು ಸ್ಥಾಪಿಸುವ ಕೆಲಸವನ್ನು ಆರಂಭಿಸಿದನು. ಈ ವಂಶದಿಂದ, ಮೆಸ್ಸೀಯನು ಅಂತಿಮವಾಗಿ ಇಳಿದು ಬರಲಿದ್ದನು.

12ನೇ ಅಧ್ಯಾಯವು ಅಬ್ರಹಾಮನಿಗೆ ದೇವರು ನೀಡಿದ ಕರೆ ಮತ್ತು ಆರಂಭದಲ್ಲಿ ಆತನಿಗೆ ಮಾಡಿದ ವಾಗ್ದಾನದ ಕುರಿತಾಗಿ ಹೇಳುತ್ತದೆ. ಅಲ್ಲದೆ ಇರು ಆ ಕರೆಗೆ ಅಬ್ರಹಾಮನು ಪರವಾದ ಪ್ರತಿಕ್ರಿಯೆಯನ್ನು ನೀಡಿದ್ದರ ಬಗ್ಗೆ ಮತ್ತು ವಾಗ್ದಾನ ದೇಶವಾದ ಕಾನಾನಿಗೆ ಬಂದು ತಲುಪಿದ್ದರ ಕುರಿತು ಸಹ ಹೇಳುತ್ತದೆ. ಅಧ್ಯಾಯದ ಮುಕ್ತಾಯವು ಸೂಚಿಸುವದೇನೆಂದರೆ, ಬರಗಾಲದ ನಿಮಿತ್ತವಾಗಿ ಅಬ್ರಹಾಮನು ಐಗುಪ್ತಕ್ಕೆ ಪ್ರಯಾಣಿಸಿದನು ಎಂಬುದೆ. ಮೂಲಪಿತೃವಿನ ವಂಚನೆಯ ಹೊರತಾಗಿಯೂ, ದೇವರು ಆತನ ಕುಟುಂಬವನ್ನು ಸಂರಕ್ಷಿಸಿದನು ಮತ್ತು ದೈವಿಕ ವಾಗ್ದಾನಗಳನ್ನು ಸುರಕ್ಷಿತವಾಗಿ ಕಾಪಾಡಿದನು.

## ಅಬ್ರಹಾಮನ ಕರೆಯುವಿಕೆ (12:1-3)

**1ಯೆಹೋವನು ಅಬ್ರಾಮನಿಗೆ - ನೀನು ಸ್ವದೇಶವನ್ನೂ ಬಂಧು ಬಳಗವನ್ನೂ ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟುಹೋಗು. 2ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು. 3ನೀನು ಆಶೀರ್ವಾದನಿಧಿಯಾಗುವಿ. ನಿನ್ನನ್ನು ಹರಸುವವರನ್ನು ಹರಸುವೆನು; ನಿನ್ನನ್ನು ಶಪಿಸುವವರನ್ನು ಶಪಿಸುವೆನು. ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು ಎಂದು ಹೇಳಿದನು.**

**ವಚನ 1.** ಆದಿಕಾಂಡದ ಲೇಖಕನು ಅಬ್ರಹಾಮನನ್ನು ದೇವರು ಈ ಮುಂಚೆ ಕರೆದಿದ್ದನು ಎಂಬುದಾಗಿ ಭಾವಿಸಿಕೊಂಡಿದ್ದನು (ನೋಡಿರಿ 11:31): ಆತನು ಅವನನ್ನು ದಕ್ಷಿಣ

ಮೆಸಪೊಟೇಮ್ಯದಲ್ಲಿನ ಊರ್ ಪಟ್ಟಣದೊಳಗಿಂದ ಹೊರಗೆ ಬರುವಂತೆ ಕರೆದಿದ್ದನು. ಇದು ಆದಿಕಾಂಡ 15:7ರಲ್ಲಿ, ಮಾತ್ರವಲ್ಲದೆ ನೆಹಮೀಯ 9:7 ಮತ್ತು ಅಪೊಸ್ತಲರ ಕೃತ್ಯಗಳು 7:2-4ರಲ್ಲಿ ಹೇಳಲ್ಪಟ್ಟಿರುತ್ತದೆ. ಹಾರಾನನ್ನನು ಬಿಟ್ಟು ಬರಬೇಕೆಂದು ಯೆಹೋವನು ಅಬ್ರಹಾಮನಿಗೆ ಕರೆಯನ್ನು ನೀಡುವ ಹೊತ್ತಿಗೆ, ಮೂಲಪಿತೃವು ಅಲ್ಲಿ ಬಹಳಷ್ಟು ವರ್ಷಗಳಿಂದಲೂ ಜೀವಿಸಿದ್ದರಿಂದ ಅದನ್ನು ತನ್ನ ಸ್ವದೇಶವೆಂದು ಪರಿಗಣಿಸಿಕೊಂಡಿದ್ದನು. ಆದದರಿಂದ, **ಅಬ್ರಹಾಮನಿಗೆ** ದೈವಿಕ ಆಜ್ಞೆಯು ಆತನ **ಸ್ವದೇಶವನ್ನೂ** [ಆತನ] **ಬಂಧು ಬಳಗವನ್ನೂ** ಮತ್ತು ಆತನ **ತಂದೆಯ ಮನೆಯನ್ನೂ ಬಿಟ್ಟು** ಯೆಹೋವನು ಆತನಿಗೆ **ತೋರಿಸುವ ದೇಶಕ್ಕೆ ಹೊರಟುಹೋಗ**ಬೇಕು ಎಂದಾಗಿತ್ತು. ಈ ಕರೆಯುವಿಕೆಯಲ್ಲಿ, ಅಬ್ರಹಾಮನ ನಿರ್ಗಮನದ ವಿಷಯದಲ್ಲಿ ದೇವರು ನೀಡಿದ ಅಪ್ಪಣೆಗಳಲ್ಲಿ ಎಲ್ಲವೂ ಸೇರಿತ್ತು. ಕರೆಯುವಿಕೆಯ ಶಬ್ದಗಳು ಸಾಮಾನ್ಯವಾದದ್ದರಿಂದ ಸಾಗಿ ನಿರ್ದಿಷ್ಟವಾದದ್ದರ ಕಡೆಗೆ ಹೋಗುತ್ತದೆ, ಕುಟುಂಬದ ಸಂಬಂಧಗಳನ್ನು ಸಂಪೂರ್ಣವಾಗಿ ಕಡಿದುಕೊಳ್ಳಬೇಕು ಎಂಬುದನ್ನು ಸೂಚಿಸುತ್ತದೆ. ಮೊದಲನೆಯದಾಗಿ, ಆತನ "ದೇಶ" ಎಂಬುದರಲ್ಲಿ ಹಾರಾನಿನ ಸುತ್ತಮುತ್ತಲಿನಲ್ಲಿದ್ದ ಇಡೀ ಪ್ರಾಂತ್ಯವನ್ನು ಸೇರಿತ್ತು. ಎರಡನೆಯದಾಗಿ, "ಬಂಧು ಬಳಗ" ಎಂಬುದು ಆತನು ಯಾವ ಸೇರ್ಪಡೆಗೊಂಡಿದ್ದ ಬೃಹತ್ ಜನಾಂಗೀಯ ಗುಂಪನ್ನು ಪ್ರತಿನಿಧಿಸುವದಾಗಿತ್ತು. ಅಂತಿಮವಾಗಿ, ಆತನ "ತಂದೆಯ ಮನೆ" ಎಂಬುದು ತೆರಹನ ವಿಸ್ತರಿತ ಕುಟುಂಬವನ್ನು ಸೂಚಿಸುತ್ತದೆ, ಅದು 11:27-32ರಲ್ಲಿನ ವಂಶಾವಳಿಯಲ್ಲಿ ಗುರುತಿಸಲ್ಪಟ್ಟಿರುತ್ತದೆ. ಆತನ ದೇಶವನ್ನು, ಬಂಧು ಬಳಗವನ್ನು, ಮತ್ತು ತಂದೆಯ ಮನೆಯನ್ನು ಬಿಟ್ಟು ಹೋಗುವದೆಂದರೆ ಅಬ್ರಹಾಮನು ತನ್ನ ಬಾಧ್ಯತೆಯ ಹಕ್ಕುಗಳನ್ನು ತ್ಯಜಿಸಬೇಕಾಗಿತ್ತು, ಅದರೊಳಗೆ ಕುಟುಂಬ ಸ್ವತ್ತು ಸೇರಿತ್ತು.

ಆಜ್ಞಾರ್ಥಕವಾದ "ಹೋಗು" ಎಂಬುದು ಒಂದು ಆತ್ಮಾರ್ಥಕ ಸರ್ವನಾಮವಾಗಿ (לֶךְ־לְךָ, *ಲೆಕ್-ಲೆಕಾ*) ಬಳಸುವ ಮೂಲಕ ಒತ್ತಿ ಹೇಳಲಾಗಿರುತ್ತದೆ, ಹೀಗಿರುವದರಿಂದ ಹೇಳಿಕೆಯ ಅಕ್ಷರಶಃ ಅರ್ಥವು "ನೀನೊಬ್ಬನೇ ಹೋಗು" ಎಂದಾಗಿರುತ್ತದೆ.[1] ಇದು ಅಬ್ರಹಾಮನಿಗೆ ಒಂದು ಜ್ಞಾಪಕಪಡಿಸುವಿಕೆಯಾಗಿತ್ತು, ಏನೆಂದರೆ ಮೊದಲ ಸಾರಿ ಕರೆ ನೀಡಿದ ವೇಳೆ ಊರ್ ಪಟ್ಟಣದಲ್ಲಿರುವ ತನ್ನ ಬಂಧುಗಳನ್ನೆಲ್ಲಾ ಬಿಟ್ಟು ಹೊರಡಬೇಕೆಂದು ಆತನಿಗೆ ಹೇಳಿದ್ದನು, ಆದಾಗ್ಯೂ ಅವರು ಆತನ ಜೊತೆಯಲ್ಲಿ ಬಂದಿದ್ದರು. ಆಜ್ಞೆಯನ್ನು ಇನ್ನೂ ನಿಖರವಾಗಿ "ನೀನೊಬ್ಬನೇ ಹೋಗು"[2] ಎಂದು ಅನುವಾದಿಸಬಹುದಾಗಿದೆ. ಈ ವಿವರಣೆಯು ಆತನಿಂದ ಹುಟ್ಟಿ ಬರಲಿರುವ "ದೊಡ್ಡ ಜನಾಂಗ"ಕ್ಕಾಗಿ ಮೀಸಲಿಡಲ್ಪಟ್ಟಿರುವ ದೇಶವೇ ಆತನು ಮುಟ್ಟಬೇಕಾದ ಗುರಿ ಎಂಬ ಘೋಷನೆಗಾಗಿ ಮೂಲಪಿತೃವನ್ನು ಸಿದ್ಧಗೊಳಿಸಿರಬೇಕು (12:2, 7).

ಅಷ್ಟುಮಾತ್ರವಲ್ಲದೆ, ಅಬ್ರಹಾಮನು ತನ್ನ ಬಂಧು ಬಳಗದವರ ಸಂಬಂಧವನ್ನು ಸಂಪೂರ್ಣ ಕಡಿದುಕೊಳ್ಳಬೇಕು ಎಂಬುದಾಗಿ ದೇವರು ಎದುರು ನೋಡಿದನೆಂಬುದು ಈ ಆದೇಶವು ಸೂಚ್ಯಾರ್ಥವಾಗಿ ತಿಳಿಸುತ್ತದೆ, ಹೀಗೆ ಆತನು ಯಾವದೇ ಕುಟುಂಬದ ಒತ್ತಡಗಳಾಗಲಿ ಅಥವಾ ಗುರಿಯಿಂದ ದೃಷ್ಟಿ ತಪ್ಪಿಸುವ ಸಂಗತಿಗಳಾಗಲಿ ಆತನಿಗಿಲ್ಲದೆ ದೇವರ ಮನುಷ್ಯನೆಂಬುದಾಗಿ ತನ್ನದೇ ಆಗಿರುವ ಗುರುತನ್ನು ಸ್ಥಾಪಿಸಿಕೊಳ್ಳಬೇಕೆಂಬುದು ದೇವರ ಬಯಕೆಯಾಗಿತ್ತು. ಅಬ್ರಹಾಮನು ವಿಧೇಯತೆಯುಳ್ಳ ನಂಬಿಕೆಯಿಂದ ಆತನ ಜೀವಿತಕ್ಕಾಗಿರುವ ದೈವಿಕ ಯೋಜನೆಯು ನೆರವೇರುವದಕ್ಕೆ ಸಾಧ್ಯವಿತ್ತು - ಯೆಹೋವನಲ್ಲಿ ಭರವಸವಿಟ್ಟು ನಡೆಯುವುದು, ಇದೇ ಆತನ ದಾರಿಯ ನಕ್ಷೆ ಆಗಿತ್ತು, ಮತ್ತು ವಾಗ್ದಾನದ ದೇಶದ ತನಕ ಆತನನ್ನು ಅನುಸರಿಸುವದಾಗಿತ್ತು. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಈ ಅಭಿಪ್ರಾಯವನ್ನು ತಿಳಿಸುತ್ತಾನೆ, "ನಂಬಿಕೆಯಿಂದಲೇ ಅಬ್ರಹಾಮನು ಕರೆಯಲ್ಪಟ್ಟ ಕೂಡಲೆ

ಕರೆದಾತನ ಮಾತನ್ನು ಕೇಳಿ ತಾನು ಬಾಧ್ಯವಾಗಿ ಹೊಂದಬೇಕಾಗಿದ್ದ ಸ್ಥಳಕ್ಕೆ ಹೊರಟು ಹೋದನು" (ಇಬ್ರಿಯ 11:8).

**ವಚನ 2.** ದೇವರು ಆರು-ಭಾಗದ ವಾಗ್ದಾನದೊಂದಿಗೆ ದೈವಿಕ ಕರೆಯುವಿಕೆಗೆ ಬೆಂಬಲವನ್ನು ಒದಗಿಸುತ್ತಾನೆ, ಮತ್ತು ಆತನು ಅಬ್ರಹಾಮನಿಗೆ ಹೀಗೆ ಹೇಳುವದರೊಂದಿಗೆ ಆರಂಭಿಸಿದನು, **ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡುವೆನು** (ನೋಡಿರಿ 18:18; 21:18; 46:3). ಇದು ನಂಬುವದಕ್ಕೆ ಅತ್ಯಂಥ ಕಠಿಣವಾದ ವಾಗ್ದಾನ ಆಗಿರಬಹುದಾಗಿದೆ ಯಾಕೆಂದರೆ ಆತನು ಈಗಾಗಲೇ ಎಪ್ಪತ್ತೈದು ವಯಸ್ಸಿನವನಾಗಿದ್ದನು ಮತ್ತು ಬಂಜೆಯಾಗಿರುವ, ಅರವತ್ತೈದು ವಯಸ್ಸಿನ ಹೆಂಡತಿಯನ್ನು ಹೊಂದಿದ್ದನು; ಆಕೆಯು ಗರ್ಭಿಣಿಯಾಗಿ ಒಂದು ಮಗುವಿಗೆ ಸಹ ಜನ್ಮ ಕೊಡಲು ಅಶಕ್ತಳಾಗಿದ್ದಳು (11:30). ಈ ಕರೆಯುವಿಕೆಯಲ್ಲಿ ಎಲ್ಲದಕ್ಕೂ "ಕಣ್ಣಿಗೆ ಕಾಣದ್ದನ್ನು" (ದೇಶ) ಮತ್ತು ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ್ದನ್ನು "ನಿರೀಕ್ಷಿಸುವವುಗಳನ್ನು" ನಂಬುವುದು ಅಗತ್ಯವಿತ್ತು (ನೋಡಿರಿ ಇಬ್ರಿಯ 11:1, 6-10; NJB).

ಅಬ್ರಹಾಮನನ್ನು ಒಂದು "ದೊಡ್ಡ ಜನಾಂಗವಾಗುವಂತೆ" ಮಾಡುವೆನೆಂಬ ದೇವರ ವಾಗ್ದಾನದ ಬಳಿಕ, ಯೆಹೋವನು ಸಾಮಾನ್ಯ ಸ್ವಭಾವದ ವಾಗ್ದಾನವೊಂದನ್ನು ನೀಡಿದನು: ನಾನು ನಿನ್ನನ್ನು **ಆಶೀರ್ವದಿಸುವೆನು**. 2 ಮತ್ತು 3 ವಚನಗಳೊಳಗೆ, ಆಶೀರ್ವದಿಸುವೆನೆಂಬ ವಾಗ್ದಾನವು ಮಹತ್ವಪೂರ್ಣವಾಗಿರುತ್ತದೆ. ಈ ಪದದ ಕ್ರಿಯಾಪದವಿರಬಹುದು ಅಥವಾ ನಾಮಪದವಿರಬಹುದು, ಒಟ್ಟು ಐದು ಸಾರಿ ಅದು ಬಳಸಲ್ಪಟ್ಟಿದೆ. "ಆಶೀರ್ವದಿಸು" ಎಂಬ ಕ್ರಿಯಾಪದವು (בָּרַךְ, *ಬಾರಾಕ್)* ಹಳೆಯ ಒಡಂಬಡಿಕೆಯೊಳಗೆ ಬೇರೆ ಯಾವದೇ ಪುಸ್ತಕಕ್ಕಿಂತಲೂ ಅಧಿಕವಾಗಿ ಆದಿಕಾಂಡ ಪುಸ್ತಕದಲ್ಲಿ ಕಂಡು ಬರುತ್ತದೆ. ಸನ್ನಿವೇಶಕ್ಕನುಗುಣವಾಗಿ, ದೇವರು ತನ್ನ ಜನರನ್ನು ಅನೇಕ ವಿಧವಾದ ರೀತಿಗಳಲ್ಲಿ ಆಶೀರ್ವದಿಸಲು ಇಷ್ಟಪಡುತ್ತಾನೆ ಎಂಬುದನ್ನು ಸೂಚಿಸುತ್ತದೆ: ಸಮೃದ್ಧಿ, ಸೌಖ್ಯ, ದೀರ್ಘಾಯುಷ್ಯ, ಸಮಾಧಾನ, ಒಳ್ಳೆಯ ಸುಗ್ಗಿ, ಮಕ್ಕಳನ್ನು ಹುಟ್ಟಿಸುವದಕ್ಕೆ ಫಲವತ್ತು, ಮತ್ತು ಇತ್ಯಾದಿ.

ಎರಡನೆಯ ಆಶೀರ್ವಾದವು ಒಂದು ಜಾತಿವಿಶಿಷ್ಟವಾದದ್ದು ಆಗಿತ್ತಾದರೂ, ದೇವರು ಮುಂದುವರೆದು ಹೇಳಿದ್ದೇನೆಂದರೆ, **ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು**. ಪ್ರಾಚೀನ ಮಧ್ಯಪ್ರಾಚ್ಯದಲ್ಲಿ, ರಾಜವಂಶದ ಶಿಲಾಶಾಸನಗಳಲ್ಲಿ ಅರಸುಗಳಿಗೆ ಪ್ರಶಂಸೆ ಅಥವಾ ಖ್ಯಾತ ಹೆಸರಿನ ವಾಗ್ದಾನವು ಸರ್ವಸಾಧಾರಣವಾಗಿರುತ್ತಿತ್ತು. ಇದಕ್ಕೆ ಸಮನಾರ್ಥವೆಂದರೆ ದೇವರು ದಾವೀದನಿಗೆ ನೀಡಿದ ವಾಗ್ದಾನ: "ಲೋಕದ ಮಹಾಪುರುಷರ ಹೆಸರಿನಂತೆ ನಿನ್ನ ಹೆಸರನ್ನೂ ದೊಡ್ಡದುಮಾಡುವೆನು" (2 ಸಮುವೇಲ 7:9).

ಅಬ್ರಹಾಮನ "ಹೆಸರನ್ನು ಪ್ರಖ್ಯಾತಿಗೆ ತರುವೆನು" ಎಂಬ ದೈವಿಕ ವಾಗ್ದಾನವು ಆತನ ಹೆಸರು ಭೂಲೋಕದ ಮೂಲೆ ಮೂಲೆಗೂ - ವಿಶೇಷವಾಗಿ ಆತನನ್ನು ನಂಬಿಗಸ್ತರಿಗೆ ಪಿತೃವಾಗಿ ಕಾಣಲಿದ್ದ ಭವಿಷ್ಯದ ತಲೆಮಾರುಗಳಿಗೆ (ರೋಮಾ 4:16) - ಗೊತ್ತಾಗುವುದು. ಒಂದು ಪ್ರಖ್ಯಾತ ಹೆಸರು ಎಂಬ ವಿಚಾರವು, ಹಿಂಸೆಗೆ ಖ್ಯಾತರಾಗಿದ್ದ ಆದಿಕಾಂಡ 6:4ರಲ್ಲಿ "ಹೆಸರುಗೊಂಡ" ದುಷ್ಟ ಜನರಿಗೆ, ಮತ್ತು 11:4ರಲ್ಲಿ ದೇವರಿಗೆ ಅವಿಧೇಯರಾಗುವ ಮೂಲಕ ತಮಗೋಸ್ಕರ "ದೊಡ್ಡ ಹೆಸರನ್ನು" ಸಂಪಾದಿಸಿಕೊಳ್ಳಬೇಕೆಂದು ಅಪೇಕ್ಷಿಸಿದ ಗೋಪುರ-ನಿರ್ಮಾಣಿಕರಿಗೆ ತದ್ವಿರುದ್ಧವಾಗಿತ್ತು. ಹೇಗೂ, ಈ ಪ್ರಖ್ಯಾತ ಹೆಸರು ಅಬ್ರಹಾಮನು ದುರಾಶೆಯಿಂದ ಹಿಡಿದುಕೊಳ್ಳುವ ಅಥವಾ ತನ್ನ ಸ್ವಶಕ್ತಿಯಿಂದ ಸಾಧಿಸುವಂಥ

ಸಂಗತಿಯಾಗಿರಲಿಲ್ಲ. ಅದು ದೇವರ ವರ ಮತ್ತು ಅಬ್ರಹಾಮನನ್ನು ಆಕಾರಕ್ಕೆ ತಂದು ಉಪಯೋಗಿಸಿಕೊಳ್ಳುವದರಲ್ಲಿದ್ದ ಆತನ ಕೃಪೆಯ ಫಲಿತವಾಗಿರಲಿತ್ತು. ಆತನು "ಉತ್ತಮವಾದ ಬಳಕೆಯ" ಪಾತ್ರೆಯಾಗಿ ಮಾರ್ಪಡಲಿದ್ದನು (2 ಕೊರಿಂಥ 2:20, 21) ಮತ್ತು ಇಡೀ ಲೋಕಕ್ಕಾಗಿ ಯೆಹೋವನು ಹೊಂದಿದ್ದ ಯೋನೆಯ ಅಂತಿಮವಾದ ನೆರವೇರಿಕೆಯಲ್ಲಿ ಒಂದು ಪಾತ್ರವು ಆತನಿಗೆ ಕೊಡಲ್ಪಡಲಿತ್ತು.

ವಾಗ್ದಾನದ ಮುಂದಿನ ಭಾಗ, **ನೀನು ಆಶೀರ್ವಾದನಿಧಿಯಾಗುವಿ** ಎಂಬುದು ಸಾಮಾನ್ಯವಾಗಿ ಹಿಂದಿನ ಸಾಲಿನಿಂದ ಮುಂದುವರಿದ ಮಾತಾಗಿರುತ್ತದೆಂದು ಅರ್ಥಮಾಡಿಕೊಳ್ಳಲ್ಪಟ್ಟಿರುತ್ತದೆ. ಇದು ಹಲವಾರು ವಿಧಗಳಲ್ಲಿ ಅರ್ಥನಿರೂಪಣೆ ಮಾಡಲ್ಪಟ್ಟಿದೆ. ಕೆಲವರು ಅದರರ್ಥವು ಅಬ್ರಹಾಮನಿಗೆ ಕೊಡಲ್ಪಡುವ ಪ್ರಖ್ಯಾತ ಹೆಸರು ಭವಿಷ್ಯದಲ್ಲಿನ ಆಶೀರ್ವಾದಗಳೊಳಗೆ ಪ್ರಸ್ತಾಪಿಸಲ್ಪಡುವುದು ಎಂದು ಹೇಳುತ್ತಾರೆ (NEB). ಇನ್ನು ಕೆಲವರು ಈತನ ಮಾದರಿಯನ್ನು ಅನುರಿಸುವವರು ಸಮೃದ್ಧಿ ಮತ್ತು ಸಂತೋಷಗಳಿಗೆ ಒಂದು ಉದಾಹರಣೆಯಾಗಿ ಆತನ ಹೆಸರನ್ನು ಜ್ಞಾಪಿಸಿಕೊಳ್ಳುವರು ಎಂದು ವಾದಿಸುತ್ತಾರೆ. ಇನ್ನೊಂದು ಅಭಿಪ್ರಾಯವು, ಇದು ಕೇವಲ ಲೋಕಕ್ಕಾಗಿ ಭವಿಷ್ಯದಲ್ಲಿ ಸಿಕ್ಕಲಿದ್ದ ಆಶೀರ್ವಾದಗಳಷ್ಟೆ, 3ನೇ ವಚನದ ಕಡೆಯ ಭಾಗದಲ್ಲಿ ಯೆಹೋವನು ಏನನ್ನು ಒತ್ತಿ ಹೇಳಲಿದ್ದನೋ ಅದರ ಛಾಯೆ ಆಗಿರುತ್ತದೆ ಅಷ್ಟೆ ಎಂಬುದೆ.

ಈ ಎಲ್ಲಾ ವಿವರಣೆಗಳು ವಾಸ್ತವಿಕದಲ್ಲಿ ಇಬ್ರಿಯ ಭಾಷೆಯಲ್ಲಿ ಇದು ಮಧ್ಯಪುರುಷ ಪುಲ್ಲಿಂಗ ಏಕವಚನದ ಆಜ್ಞಾರ್ಥಕ ರೂಪದಲ್ಲಿದ್ದು ಅಬ್ರಹಾಮನಿಗೆ "ಒಂದು ಆಶೀರ್ವಾದವಾಗಿರು"[3] ಎಂದು ಹೇಳುವದಾಗಿದೆ ಎಂಬ ವಾಸ್ತವಾಂಶವನ್ನು ಅಸ್ಪಷ್ಟಗೊಳಿಸುತ್ತವೆ. ಆದದರಿಂದ, ಇದು ಅಬ್ರಹಾಮನು ಸ್ವೀಕರಿಸಲಿದ್ದ ಒಂದು ಆಶೀರ್ವಾದ (ಒಂದು ಪ್ರಖ್ಯಾತ ಹೆಸರು) ಆಗಿರುವದಿಲ್ಲ, ಅಥವಾ ಇತರರು ಆತನ ಹೆಸರಿನಲ್ಲಿ ಉಚ್ಛರಿಸುವ ಆಶೀರ್ವಾದವೆಂದು ಸಹ ದೇವರು ಪ್ರಸ್ತಾಪಿಸಲಿಲ್ಲ. ಅಷ್ಟುಮಾತ್ರವಲ್ಲದೆ, ಮುಂದೊಂದು ದಿನ ಅಬ್ರಹಾಮನ ಸಂತತಿಯವರು ಮೂಲಪಿತೃವು ಆನಂದಿಸಿದ ಸಮೃದ್ಧತೆಯನ್ನು ಜ್ಞಾಪಿಸಿಕೊಂಡು ಅದೇ ಸವಲತ್ತುಗಳನ್ನು ತಮ್ಮ ಜೀವಿತಗಳಲ್ಲಿ ಎದುರುನೋಡುವರು ಎಂಬ ಪ್ರವಾದನೆ ಆಗಿರಲಿಲ್ಲ. ಇದು ಅವನ ಸುತ್ತಲು ಇರುವವರಿಗೆ "ಆಶೀರ್ವಾದನಿಧಿಯಾಗಿರು" ಎಂಬುದಾಗಿ ಅಬ್ರಹಾಮನಿಗೆ ನೀಡಿದ ಆದೇಶವಾಗಿತ್ತು. ದೇವರು ವ್ಯಕ್ತಿಗಳನ್ನು ಅಥವಾ ದೇಶಗಳನ್ನು ಆಶೀರ್ವಾದಿಸುವಾಗ, ಆ ವರಗಳು ನಮ್ಮಲ್ಲಿಯೇ ಅಂತ್ಯಗೊಳ್ಳಬೇಕೆಂಬುದಕ್ಕಾಗಿ ಅವುಗಳನ್ನು ಸುರಿಸುವದಿಲ್ಲ; ಮತ್ತು ಆ ವರಗಳು ಅಂತರ್ಮುಖಿಯಾಗಿ ತಿರುಗಿಸಿಕೊಳ್ಳಬಾರದು. ಆಶೀರ್ವದಿಸಲ್ಪಟ್ಟಿರುವವರು ಪ್ರತಿಯಾಗಿ, ತಾವು ಜೀವನದಲ್ಲಿ ಭೇಟಿಯಾಗುವವರೆಲ್ಲರಿಗೆ "ಆಶೀರ್ವಾದನಿಧಿಯಾಗಿರಬೇಕು" ಎಂದು ಯೆಹೋವನು ಬಯಸುತ್ತಾನೆ.

**ವಚನ 3.** ಯೆಹೋವನು ಮುಂದುವರೆಸಿ ಇನ್ನೂ ಮೂರು ಹೇಳಿಕೆಗಳನ್ನು ನೀಡುತ್ತಾನೆ, ಮೊದಲನೆಯದಾಗಿ **ನಿನ್ನನ್ನು ಹರಸುವವರನ್ನು ಹರಸುವೆನು**. ಇದೇ ಮಾತುಗಳನ್ನು ಅನಂತರದಲ್ಲಿ ಇಸಾಕನು ಬಳಸುತ್ತಾನೆ, ಆತನು ತನಗೆ ಗೊತ್ತಿಲ್ಲದೆಯೇ ಏಸಾವನನ್ನು ಆಶೀರ್ವದಿಸುತ್ತಿದ್ದೇನೆ ಎಂದುಕೊಂಡು ಯಾಕೋಬನನ್ನು ಆಶೀರ್ವದಿಸಿದ್ದನು (27:29). ಈ ಮಾತುಗಳನ್ನು ಬಿಳಾಮನು ಸಹ ಬಳಸಿದನು, ಇಸ್ರಾಯೇಲ್ ಜನಾಂಗದ ಮೇಲೆ ಕೇವಲ ಆಶೀರ್ವಾದಗಳನ್ನು ಮಾತ್ರವೇ ಉಚ್ಛರಿಸುವಂತೆ ಯೆಹೋವನು ಆತನನ್ನು ಅನುಮತಿಸಿದನು (ಅರಣ್ಯಕಾಂಡ 24:9). ಈ ಕಡೆಯ ಎರಡು ಪ್ರಕರಣಗಳಲ್ಲಿ, ಆಯಾ ಆಶೀರ್ವಾದಗಳು

ವೈಯಕ್ತಿಕವಲ್ಲದವುಗಳಾಗಿದ್ದವು, "ನಿನ್ನನ್ನು ಆಶೀರ್ವದಿಸುವವರು" ಮತ್ತು "ನಿನ್ನನ್ನು ಆಶೀರ್ವದಿಸುವವನಿಗೆ" ಎಂದು ಹೆಸರಿಸುತ್ತವೆ. ಅದಕ್ಕೆ ತದ್ವಿರುದ್ಧವಾಗಿ, ದೇವರು ಅಬ್ರಹಾಮನಿಗೆ ಉತ್ತಮಪುರುಷ ಪದವನ್ನು ಬಳಸುತ್ತಾ ಹೀಗೆ ಹೇಳಿದನು, "ಹರಸುವೆನು." ದೇವರ ಮಾತುಗಳು ಸ್ವತಃ ಆತನ ಹಾಗೂ ಮೂಲಪಿತೃವಿನ ನಡುವೆ ಇದ್ದ ಸಂಬಂಧದ ನಿಕಟತೆಯನ್ನು ಒತ್ತಿ ಹೇಳುತ್ತವೆ, ಮಾತ್ರವಲ್ಲದೆ ಯೆಹೋವನು ಆತನಿಗೋಸ್ಕರ ಹೊಂದಿದ್ದ ಕಾಳಜಿಯನ್ನು ಕುರಿತು ಒತ್ತಿ ಹೇಳುತ್ತವೆ. ಯಾವನು ಅಬ್ರಹಾಮನ ಸಂಗಡ ಸಮಾಧಾನದ ಸಂಬಂಧವನ್ನು ಹೊಂದಿರುತ್ತಾನೋ ಆತನನ್ನು ದೇವರು ಆಶೀರ್ವದಿಸುವನು.

ನಂತರ, ಯೆಹೋವನು ಹೀಗೆ ಹೇಳಿದನು, **ನಿನ್ನನ್ನು ಶಪಿಸುವವರನ್ನು ಶಪಿಸುವೆನು.** ಈ ಹಿಂದಿನ ವಾಗ್ದಾನಕ್ಕೆ ವಿರುದ್ಧವಾಗಿ, ಅಬ್ರಹಾಮನನ್ನು ಯಾವನಾದರೂ ಶಪಿಸುವದಾದರೆ ಆತನು ದೇವರಿಂದ ಶಪಿಸಲ್ಪಡುವನು, ಯಾಕೆಂದರೆ ಆತನು ಇಡೀ ಲೋಕಕ್ಕೆ ಆಶೀರ್ವಾದವನ್ನುಂಟು ಮಾಡುವದಕ್ಕಾಗಿ ದೇವರಾದುಕೊಂಡ ಸಾಧನವಾಗಿರುವ ಅಬ್ರಹಾಮನೊಂದಿಗೆ ಸಮಾಧಾನದ ಸಂಬಂಧವನ್ನು ಹೊಂದಿರಲಿಲ್ಲ. ವೈರಿಗಳು ಅಬ್ರಹಾಮನನ್ನು ವಿವಿಧ ರೀತಿಗಳಲ್ಲಿ ಶಪಿಸಬಹುದು: ಆತನ ಬಗ್ಗೆ ಕೆಟ್ಟದ್ದಾಗಿ ಮಾತಾಡುವುದು ಮತ್ತು ಆತನ ಖ್ಯಾತಿಯನ್ನು ಅಸಡ್ಡೆ ಮಾಡುವುದು, ಆತನಿಗೆ ಅಡ್ಡಿಪಡಿಸುವುದು, ಆತನಿಗೆ ಹಾನಿಯನ್ನುಂಟು ಮಾಡುವುದು, ಅಥವಾ ಆತನಿಗೆ ಸೇರಿದ್ದ ವಸ್ತುವೊಂದನ್ನು (ಅಥವಾ ವ್ಯಕ್ತಿಯನ್ನು) ಕಸಿದುಕೊಳ್ಳುವುದು ಇತ್ಯಾದಿ. ಉದಾಹರಣೆಗೆ, ಫರೋಹನು ಮೂಲಪಿತೃವಿನ ಸಂಗಡ ಸಮಾಧಾನದಿಂದ ಸಂಬಂಧವಿಟ್ಟುಕೊಂಡಿರಲಿಲ್ಲ ಯಾಕೆಂದರೆ ಆತನು ಅಬ್ರಹಾಮನ ಹೆಂಡತಿಯನ್ನು ತನ್ನ ಉಪಪತ್ನಿಯನ್ನಾಗಿ ತೆಗೆದುಕೊಂಡನು (12:10-17). ಆತನು ಈ ಕೆಲಸವನ್ನು ಅಜ್ಞಾನದಿಂದಾಗಿ, ಆಕೆಗೆ ಮದುವೆಯಾಗಿದೆ ಎಂಬುದನ್ನು ತಿಳಿಯದೆ ಮಾಡಿದನಾದರೂ, ಫರೋಹನು ಅಬ್ರಹಾಮನ ವಿರುದ್ಧವಾದ ಈ ತಪ್ಪಿನಿಂದಾಗಿ ತನ್ನ ಇಡೀ ಮನೆಯವರ ಮೇಲೆ ಶಾಪಗಳನ್ನು (ವ್ಯಾಧಿಗಳು ಮತ್ತು "ಉಪದ್ರವಗಳು") ಬರಮಾಡಿಕೊಂಡನು.

ಬಳಿಕ ಯೆಹೋವನು ಆಶೀರ್ವಾದದ ಅಂತಿಮ ಭಾಗವನ್ನು ಘೋಷಿಸಿದನು, ಮತ್ತು ಅದು ಅಬ್ರಹಾಮನ ಕರೆಯುವಿಕೆಯಲ್ಲಿನ ಪರಮಾವಧಿ ಮತ್ತು ನಿರ್ದಿಷ್ಟವಾದ ಗುರಿಯಾಗಿರುತ್ತದೆ: **ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು.** 2ನೇ ವಚನದಲ್ಲಿ, ದೇವರು ಅಬ್ರಹಾಮನಿಗೆ "ಆಶೀರ್ವಾದನಿಧಿಯಾಗಿರು" ಎಂದು ಪ್ರಬೋಧಿಸಿದ್ದನು, ಮತ್ತು ಈಗ ಆತನು ಆ ಆದೇಶವನ್ನು ವಿಸ್ತರಿಸಿದನು: ಅಬ್ರಹಾಮನು ತನ್ನ ತಕ್ಷಣದ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆಲ್ಲಾ ಆಶೀರ್ವಾದದ ಒಂದು ಕಾಲುವೆಯಾಗಬೇಕಿತ್ತು. ವಾಸ್ತವಿಕದಲ್ಲಿ, ಅಂತಿಮವಾದ ವಾಗ್ದಾನವು ಮೂಕವಿಸ್ಮಿತಗೊಳಿಸುವಂಥದ್ದಾಗಿತ್ತು, ಯಾಕೆಂದರೆ ಅದರೊಳಗೆ ಭೂಮಿಯ ಎಲ್ಲಾ ಕುಟುಂಬಗಳಿಗೆ ಮತ್ತು ಜನರಿಗೆ ಪ್ರಯೋಜನವಾಗುವಂಥ - 4ರಿಂದ 11 ಅಧ್ಯಾಯಗಳೊಳಗೆ ಪ್ರಸ್ತಾಪಿಸಲ್ಪಟ್ಟಿರುವ ದುಷ್ಟ ದೇಶಗಳಿಗೆ ಸಹ, ಜೊತೆಗೆ ಅನಂತರದಲ್ಲಿ ಬರಲಿದ್ದವರಿಗೂ - ಒಂದು ಆಶೀರ್ವಾದವು ಇತ್ತು. ದೇವರು ಅನೇಕ ವರ್ಷಗಳ ನಂತರದಲ್ಲಿ ಈ ಆಶೀರ್ವಾದವನ್ನು ಅಬ್ರಹಾಮನಿಗೆ (22:18), ಬಳಿಕ ಇಸಾಕನಿಗೆ (26:4), ಮತ್ತು ಅಂತಿಮವಾಗಿ ಯಾಕೋಬನಿಗೆ ಪುನರುಚ್ಚರಿಸುತ್ತಾನೆ (28:14), ಈತನ ಹನ್ನೆರಡು ಮಂದಿ ಪುತ್ರರು ಇಸ್ರಾಯೇಲ್ ಜನಾಂಗವನ್ನು ಹುಟ್ಟಿಸಲಿದ್ದರು. ಅಬ್ರಹಾಮನ ವಿಷಯದಲ್ಲಿ ಯೆಹೋವನ ಅಂತಿಮವಾದ ಉದ್ದೇಶವು ಕಾನಾನ್ ದೇಶದ ಫಲವತ್ತತೆ ಮತ್ತು ಅದರೊಳಗೆ ವಾಸಿಸುವ ಆತನ ಸಂತತಿಯವರ ಸಮೃದ್ಧತೆಗಳನ್ನು ದಾಟಿ

ಎಷ್ಟೋ ವಿಸ್ತಾರವಾಗಿತ್ತು. ಅಬ್ರಹಾಮನು ದೈವಿಕ ಆಶೀರ್ವಾದಗಳು ಹರಿದು, ವಾಗ್ದಾನ ಮಾಡಲ್ಪಟ್ಟ "ಸಂತಾನ" (ಸಂತತಿ) ಮತ್ತು "ಲೋಕದ ರಕ್ಷಕ" ಆಗಿ ಯೇಸು ಕ್ರಿಸ್ತನ ಬರೋಣದಲ್ಲಿ ಪರಾಕಾಷ್ಠೆಗೊಳ್ಳಲಿದ್ದಂಥ ಒಂದು ಜನಾಂಗದ ಜನಕನಾಗಿರಬೇಕಾಗಿತ್ತು (ಯೋಹಾನ 4:42; ಅಪೊಸ್ತಲರ ಕೃತ್ಯಗಳು 3:25; ಗಲಾತ್ಯ 3:8; 1 ತಿಮೊಥೆ 2:3-6).

## ದೈವಿಕ ಕರೆಗೆ ಅಬ್ರಹಾಮನ ಪ್ರತಿಕ್ರಿಯೆ (12:4-9)

**4ಯೆಹೋವನು ಹೇಳಿದ ಮೇರೆಗೆ ಅಬ್ರಾಮನು ಹೊರಟುಹೋದನು; ಲೋಟನೂ ಸಂಗಡ ಹೋದನು. ಅಬ್ರಾಮನು ಖಾರಾನ್ ಪಟ್ಟಣವನ್ನು ಬಿಟ್ಟು ಹೊರಟಾಗ ಎಪ್ಪತ್ತೈದು ವರುಷದವನಾಗಿದ್ದನು. 5ಅವನು ತನ್ನ ಹೆಂಡತಿಯಾದ ಸಾರಯಳನ್ನೂ ತನ್ನ ತಮ್ಮನ ಮಗನಾದ ಲೋಟನನ್ನೂ ತಾನೂ ಲೋಟನೂ ಖಾರಾನಿನಲ್ಲಿ ಸಂಪಾದಿಸಿದ್ದ ಎಲ್ಲಾ ಸೊತ್ತನ್ನೂ ದಾಸದಾಸಿಯರನ್ನೂ ತೆಗೆದುಕೊಂಡು ಹೋಗಿ ಕಾನಾನ್ ದೇಶಕ್ಕೆ ಸೇರಿದನು. 6ಅಬ್ರಾಮನು ಆ ದೇಶದಲ್ಲಿ ಸಂಚರಿಸುತ್ತಾ ಶೆಕೆಮ್ ಕ್ಷೇತ್ರದಲ್ಲಿರುವ ಮೋರೆಯೆಂಬ ವೃಕ್ಷದ ಬಳಿಗೆ ಬಂದನು. ಆ ಕಾಲದಲ್ಲಿ ಕಾನಾನ್ಯರು ದೇಶದಲ್ಲಿದ್ದರು. 7ಅಲ್ಲಿ ಯೆಹೋವನು ಅಬ್ರಾಮನಿಗೆ ದರ್ಶನಕೊಟ್ಟು - ನಾನು ಈ ದೇಶವನ್ನು ನಿನ್ನ ಸಂತಾನಕ್ಕೆ ಕೊಡುವೆನು ಅಂದನು. ತನಗೆ ದರ್ಶನಕೊಟ್ಟ ಯೆಹೋವನಿಗೆ ಅಬ್ರಾಮನು ಯಜ್ಞವೇದಿಯನ್ನು ಕಟ್ಟಿಸಿದನು. 8ಅವನು ಅಲ್ಲಿಂದ ಹೊರಟು ಬೇತೇಲಿಗೆ ಮೂಡಲಲ್ಲಿರುವ ಗುಡ್ಡಕ್ಕೆ ಬಂದು ತನ್ನ ಗುಡಾರವನ್ನು ಹಾಕಿಸಿ ಇಳುಕೊಂಡನು; ಪಶ್ಚಿಮಕ್ಕೆ ಬೇತೇಲೂ ಪೂರ್ವಕ್ಕೆ ಆಯಿ ಎಂಬ ಊರೂ ಇದ್ದವು. ಅಲ್ಲಿಯೂ ಯೆಹೋವನಿಗೋಸ್ಕರ ಯಜ್ಞವೇದಿಯನ್ನು ಕಟ್ಟಿಸಿ ಆತನ ಹೆಸರನ್ನು ಹೇಳಿಕೊಂಡು ಆರಾಧಿಸಿದನು. ಐಗುಪ್ತದೇಶದಲ್ಲಿ ಅಬ್ರಾಮನ ಹೆಂಡತಿಯ ವಿಷಯವಾಗಿ ನಡೆದ ಸಂಗತಿ 9ತರುವಾಯ ಅಬ್ರಾಮನು ಅಲ್ಲಿಂದ ಹೊರಟು ಕಾನಾನ್‌ದೇಶದ ದಕ್ಷಿಣಸೀಮೆಗೆ ಮುಂದೆ ಮುಂದೆ ಹೋಗುತ್ತಾ ಇದ್ದನು.**

**ವಚನಗಳು 4, 5. ಖಾರಾನಿನಲ್ಲಿ** ಅನೇಕ ವರ್ಷಗಳು ಗತಿಸಿದ ಬಳಿಕ ಮತ್ತು ಮೂಲಪಿತೃವಿನ ತಂದೆಯಾದ ತೆರಹನು ಮರಣಿಸಿದ ನಂತರ (11:32), **ಯೆಹೋವನು ಹೇಳಿದ ಮೇರೆಗೆ ಅಬ್ರಾಮನು** ನಂಬಿಕೆಯಿಂದ **ಹೊರಟುಹೋದನು** (ನೋಡಿರಿ ಅಪೊಸ್ತಲರ ಕೃತ್ಯಗಳು 7:4). **ಕಾನಾನ್ ದೇಶಕ್ಕೆ** ಹೋಗಬೇಕೆಂದು ಈ ದೈವಿಕ ಕರೆಯು ಬರುವ ಹೊತ್ತಿಗೆ, ಆತನು **ಎಪ್ಪತ್ತೈದು ವರುಷದವನಾಗಿದ್ದನು**; ಆದರೆ ಸಾರಳು ಬಂಜೆಯಾಗಿದ್ದ ಕಾರಣ ಆತನಿಗೆ ಇನ್ನೂ ಮಕ್ಕಳಾಗಿರಲಿಲ್ಲ. ಮತ್ತೊಂದಾವರ್ತಿ, ಆತನು ನಂಬಿಕೆಯಿಡುವಂತೆ ಸವಾಲನ್ನು ಎದುರಿಸಿದನು. ಆತನು ತನ್ನೆಲ್ಲಾ ಕುಟುಂಬದವರನ್ನು ಹಿಂದಕ್ಕೆ ಬಿಟ್ಟು ಹೋಗಲು ಮನಸ್ಸು ಮಾಡದೆ ಇದ್ದದರಿಂದ, **ತಮ್ಮನ ಮಗನಾದ ಲೋಟನನ್ನು** ತನ್ನ ಸಂಗಡ ಕರೆದುಕೊಂಡು ಹೋದನು, ಬಹುಶಃ ಸಾರಳು ಬಂಜೆಯಾಗಿಯೇ ಉಳಿದ ಪಕ್ಷದಲ್ಲಿ ಈತನನ್ನು ದತ್ತು ಪಡೆಯುವ ಯೋಜನೆಯೊಂದು ಆತನಿಗೆ ಇದ್ದಿರಬಹುದಾಗಿದೆ. ಲೇಖಕನು ಅಬ್ರಹಾಮನ ಉದ್ದೇಶವು ಏನಾಗಿತ್ತೆಂಬುದನ್ನು ತಿಳಿಸುವದಿಲ್ಲ.

ತಾವು **ಸಂಪಾದಿಸಿದ್ದ ಎಲ್ಲಾ ಸೊತ್ತನ್ನೂ ದಾಸದಾಸಿಯರನ್ನೂ ತೆಗೆದುಕೊಂಡು**, ಅಬ್ರಹಾಮ ಮತ್ತು ಲೋಟ ಕಾನಾನ್ ದೇಶದ ಕಡೆಗೆ ತಮ್ಮ ಪ್ರಯಾಣವನ್ನು ಆರಂಭಿಸಿದರು. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೇಳಿದ್ದೇನೆಂದರೆ "ತಾನು ಹೋಗಬೇಕಾದ ಸ್ಥಳವು ಯಾವದೆಂದು ತಿಳಿಯದೆ ಹೊರಟನು" (ಇಬ್ರಿಯ 11:8). ಕಾನಾನ್ ಒಂದು ದೂರದಲ್ಲಿರುವ

ದೇಶ (ಹಾರಾನಿನಿಂದ ನೈಋತ್ಯಕ್ಕೆ ಸುಮಾರು ನಾನ್ನೂರು ಮೈಲಿಗಳಷ್ಟು) ಎಂದು ಮತ್ತು ಮೂಲಪಿತೃ ಹಾಗೂ ಆತನ ಜೊತೆಯವರಿಗೆ ಅದೊಂದು ಸುಲಭವಾದ ಪ್ರಯಾಣ ಆಗಿರಲಾರದು ಎಂದಷ್ಟೇ ಆತನಿಗೆ ಗೊತ್ತಿತ್ತು. ಸ್ಪಷ್ಟವಾಗಿರುವಂತೆ, ಅಬ್ರಹಾಮ ಮತ್ತು ಲೋಟ ಇಬ್ಬರಿಗೂ ಬಹಳಷ್ಟು ಸಂಖ್ಯೆಯಲ್ಲಿ ಸೇವಕರು (ಅಥವಾ ದಾಸರು[4]) ಜೊತೆಯಲ್ಲಿದ್ದದರಿಂದ ಅವರನ್ನು ನೋಡಿಕೊಳ್ಳಬೇಕಾಗಿತ್ತು ಮತ್ತು ಅವರ ಮಂದೆಗಳನ್ನು ಹಾಗೂ ಹಿಂಡುಗಳನ್ನು ಕಾಪಾಡಿಕೊಳ್ಳಬೇಕಿತ್ತು; ಆದರೆ ಈ ಜನರು ತರಬೇತಿ ಹೊಂದಿದ್ದ ಕಾದಾಟಗಾರರು ಸಹ ಆಗಿದ್ದು ಪರಿಸ್ಥಿತಿ ಉದ್ಭವವಾದಲ್ಲಿ ಯುದ್ಧದಲ್ಲಿ ಪಾಲ್ಗೊಳ್ಳುವಂತೆ ಕರೆಯಲ್ಪಡಬಹುದಾದವರು ಆಗಿದ್ದರು.[5]

ಹಾಗಿದ್ದರೂ, ಅಂಥ ದೀರ್ಘವಾದ ಮತ್ತು ಅಪಾಯಕರ ನಡಿಗೆಯಿಂದ ಪ್ರಯಾಣಿಸುವಂಥ ತೀರ್ಮಾನವನ್ನು ಮಾಡುವದು ಹಗುರವಾಗಿರಲಿಲ್ಲ, ಯೂಫ್ರೇಟಿಸ್ ನದಿಯ ನೀರಿನ ಪ್ರದೇಶವನ್ನು ತೊರೆದು ಅಷ್ಟಾಗಿ ಜನರು ವಾಸಿಸದಂತಹ ಪ್ರಾಂತ್ಯಗಳ ಮೂಲಕವಾಗಿ ಪ್ರಯಾಣಿಸುವದರಿಂದ ದರೋಡೆಕೋರರಿಂದ ಏಕಾಏಕಿ ದಾಳಿಗೆ ತುತ್ತಾಗುವ ಸಂಭವವಿತ್ತು. ಅವರು ಬಹುಶಃ ಹಾರಾನಿನಿಂದ ಪಶ್ಚಿಮಕ್ಕೆ ಸಾಗಿ ಅಲ್ಲಿಂದ ಕರ್ಕೆಮಿಶ್ ಕಡೆಗೆ ಮತ್ತು ಬಳಿಕ ದಕ್ಷಿಣದಲ್ಲಿನ ಅಲೆಪ್ಪೋಗೆ ಪ್ರಯಾಣಿಸಿರಬಹುದಾಗಿದೆ. ಅಲ್ಲಿಂದ ಅವರು ದಕ್ಷಿಣ ದಿಕ್ಕಿನಲ್ಲಿ ದಮಸ್ಕಕ್ಕೆ[6] ಮತ್ತು ಬಳಿಕ ಕಾನಾನಿಗೆ ಸಾಗುವ ಮುಖ್ಯ ರಸ್ತೆಯಲ್ಲಿ ಪ್ರಯಾಣಿಸುವದಕ್ಕೆ ಸಾಧ್ಯವಿತ್ತು. ಹೇಗೂ, ಇದು ಸಹ ಒಂದು ಕಷ್ಟಕರವಾದ ಪ್ರಯಾಣವಾಗಿರಲಿತ್ತು ಯಾಕೆಂದರೆ ಅವರು ಹಾರಾನಿನ ಸಮೀಪದಲ್ಲಿರುವ ಬಲಿಹ ನದಿಯ ಪ್ರಾಂತ್ಯದಲ್ಲಿನ ತಮ್ಮ ಸ್ವದೇಶದಷ್ಟು ಫಲವತ್ತಾಗಿಲ್ಲದೆ ಇರುವಂಥ ಕೆಲವು ಪ್ರಾಂತ್ಯಗಳ ಮೂಲಕವಾಗಿ ಹಾಯ್ದು ಸಾಗಬೇಕಾಗಿರುತ್ತಿತ್ತು. ಅವರು ತಲುಪಬೇಕಾದ ಸ್ಥಳಕ್ಕೆ ಬಂದು ಸೇರಿದಾಗ, ಬಹುಶಃ ಅವರು ಬಾಷಾನಿನಿಂದ (ಇಂದಿನ ಗೋಲನ್ ಹೈಟ್ಸ್) ಇಳಿದು, ಪಶ್ಚಿಮದ ಕಡೆಗೆ ಯೋರ್ದಾನ್ ನದಿಯತ್ತ ಸಾಗಿ ಅನಂತರ ಕಾನಾನ್ ದೇಶದೊಳಗೆ ಪ್ರವೇಶಿಸಿರಬಹುದಾಗಿದೆ.

**ವಚನ 6.** ದಕ್ಷಿಣದ ಕಡೆಗೆ ಪ್ರಯಾಣವನ್ನು ಮುಂದುವರೆಸಿದವನಾಗಿ, **ಅಬ್ರಾಮನು ಆ ದೇಶದಲ್ಲಿ ಸಂಚರಿಸುತ್ತಾ ಶೆಕೆಮ್ ಕ್ಷೇತ್ರ**ವನ್ನು ದಾಟಿ ಬಂದನು. ಈ ಪಟ್ಟಣವು ಎಬಾಲ್ ಮತ್ತು ಗೆರಿಜ್ಜೀಮ್[7] ಎಂಬ ಎರಡು ಪರ್ವತಗಳ ನಡುವೆ ಕಾನಾನ್ ದೇಶದ ಮಧ್ಯಭಾಗದಲ್ಲಿತ್ತು. ಇದು ಮೂಲಪಿತೃಗಳಿಗೆ ಮತ್ತು ಅನಂತರದ ಇಸ್ರಾಯೇಲ್ಯರಿಗೆ ಒಂದು ಅತ್ಯಂಥ ಪ್ರಾಮುಖ್ಯವಾದ ಸ್ಥಳವಾಗಿ ಮಾರ್ಪಟ್ಟಿತು, ಇದು ಅನೇಕ ಸಾರಿ ಪ್ರಸ್ತಾಪಿಸಲ್ಪಟ್ಟಿರುತ್ತದೆ (33:18; 35:4; 37:12, 13; ಯೆಹೋಶುವ 24:1; ನ್ಯಾಯಸ್ಥಾಪಕ 9:6; 1 ಅರಸು 12:1).

ಶೆಕೆಮಿನಲ್ಲಿ, ಅಬ್ರಹಾಮನು **ಮೋರೆಯೆಂಬ ವೃಕ್ಷದ ಬಳಿಗೆ ಬಂದನು**, ಅದು ಅನೇಕ ಓಕ್ ಮರಗಳನ್ನು ಹೊಂದಿದ್ದ ಅತ್ಯಂಥ ಪ್ರಾಮುಖ್ಯವಾದ ಪ್ರಾಂತ್ಯದಲ್ಲಿ ಸ್ಥಳವಾಗಿರಬಹುದು.[8] ಈ ಪ್ರಾಂತ್ಯವೇ ಅನಂತರದಲ್ಲಿ ಯಾಕೋಬನು ತನ್ನ ಮನೆಯವರಿಗೆ ಸೇರಿದ ವಿಗ್ರಹಗಳನ್ನು ಹೂಣಿಟ್ಟಂಥ ಸ್ಥಳವಾಗಿದೆ (35:4), ಇಲ್ಲಿಯೇ ಯೆಹೋಶುವನ ಒಂದು ಕಲ್ಲು ಕಂಬವನ್ನು ನಿಲ್ಲಿಸಿದ್ದನು (ಯೆಹೋಶುವ 24:25, 26), ಮತ್ತು ಇಲ್ಲಿಯೇ ಅಬಿಮೆಲೇಕನು ಅರಸನಾಗಿ ಮಾಡಲ್ಪಟ್ಟಿದ್ದನು (ನ್ಯಾಯಸ್ಥಾಪಕ 9:6).

ಮುಂದಿನ ಹೇಳಿಕೆಯು **ಆ ಕಾಲದಲ್ಲಿ ಕಾನಾನ್ಯರು ದೇಶದಲ್ಲಿದ್ದರು** ಎಂಬುದನ್ನು ಒಪ್ಪಿಕೊಳ್ಳುತ್ತದೆ. ಮೂಲಪಿತೃವು ಅಲ್ಲಿಗೆ ಬಂದಾಗ ದೇಶದಲ್ಲಿ ಕಾನಾನ್ಯರು ಈಗಾಗಲೇ ವಾಸಿಸುತ್ತಿದ್ದರು ಮತ್ತು ದೇವರು ಅದನ್ನು ಆತನಿಗೂ ಅವನ ಸಂತತಿಯವರಿಗೂ ಕೊಡುವೆನೆಂದು ವಾಗ್ದಾನ ಮಾಡಿದನು ಎಂಬುದಾಗಿ ಲೇಖಕನು ಕೇವಲ ಒಂದು

ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿರಬಹುದಷ್ಟೆ. ಆದದರಿಂದ, ಅಬ್ರಹಾಮನು ಏಕೆ ತಕ್ಷಣದಲ್ಲಿಯೇ ದೇಶವನ್ನು ಸ್ವಾಧೀನಪಡಿಸಿಕೊಳ್ಳಲಿಲ್ಲ ಎಂಬುದಕ್ಕೆ ಈ ವಿದ್ಯಾಮಾನವು ಕಾರಣವನ್ನು ಕೊಡಬಹುದಾಗಿದೆ. ಇನ್ನೊಂದೆಡೆಯಲ್ಲಿ, ಅಬ್ರಹಾಮನು ಅಲ್ಲಿಗೆ ಬಂದ ವೇಳೆಯಲ್ಲಿ ಕಾನಾನ್ಯರು ಪ್ರಬಲರಾಗಿದ್ದು ದೇಶವನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದರು ಎಂಬುದನ್ನು ಆದಿಕಾಂಡದ ವಾಚಕರಿಗೆ ನೆನಪಿಸುವದಕ್ಕೆ ಅನಂತರದಲ್ಲಿ ಸೇರ್ಪಡೆಗೊಳಿಸಲ್ಪಟ್ಟ ಸಂಪಾದಕೀಯ ವ್ಯಾಖ್ಯಾನ ಇದಾಗಿರಬಹುದಾಗಿದೆ. ಹೀಗಿದ್ದ ಪಕ್ಷದಲ್ಲಿ, ಇಸ್ರಾಯೇಲ್ಯರು ವಾಗ್ದಾನ ದೇಶಕ್ಕೆ ನಿಜವಾದ ಗಂಡಾಂತರವಾಗಿದ್ದ ಕಾನಾನ್ಯರನ್ನು ನಿರ್ಮೂಲನೆ ಮಾಡಿದ ನಂತರದಲ್ಲಿ, ಅನೇಕ ಕಾಲದ ಬಳಿಕ ಮೋಶೆಯ ಸಮಯದಲ್ಲಿ ಪವಿತ್ರಾತ್ಮನ ಪ್ರೇರಣೆಯಮೂಲಕ ಈ ಹೇಳಿಕೆಯು ಬರೆಯಲ್ಪಟ್ಟಿರಬಹುದಾಗಿದೆ. ಈ ಹೇಳಿಕೆಯ ನಿಖರವಾದ ಅರ್ಥವು ಏನೇ ಆಗಿದ್ದರೂ ಸರಿಯೇ ಅಥವಾ ವಾಗ್ದಾನ ದೇಶಕ್ಕೆ ಬಂದು ತಲುಪುವ ಮುನ್ನ ಅಬ್ರಹಾಮನು ಅನುಭವಿಸಿದ್ದ ನಂಬಿಕೆಯ ಹೋರಾಟಗಳ ಹೊರತಾಗಿಯೂ, ಮೂಲಪಿತೃವು ಆ ಪ್ರಾಂತ್ಯವನ್ನು ಕಾನಾನ್ಯರು ಆಕ್ರಮಿಸಿಕೊಂಡಿದ್ದಾಗ್ಯೂ ಅಚಲವಾಗಿ ಉಳಿದಿದ್ದನು.

**ವಚನ 7.** ಒಂದು ನಿರ್ಣಾಯಕವಾದ ಸಂದರ್ಭದಲ್ಲಿ **ಯೆಹೋವನು ಅಬ್ರಾಮನಿಗೆ ದರ್ಶನಕೊಟ್ಟನು**. ಆದಿಕಾಂಡದ ಚರಿತ್ರೆಯ ಪ್ರಕಾರವಾಗಿ, ಇದು ಅಬ್ರಹಾಮನು ಪಡೆದುಕೊಂಡನೆಂದು ಮೊದಲ ಬಾರಿಗೆ ಪ್ರಸ್ತಾಪಿಸಲ್ಪಟ್ಟಿರುವ ದೈವದರ್ಶನವಾಗಿರುತ್ತದೆ (ನೋಡಿರಿ 15:17; 17:1; 18:1), ಹಾಗಿದ್ದಾಗ್ಯೂ ಸ್ತೇಫನನು ಅಬ್ರಹಾಮನ ಆರಂಭಿಕ ಕರೆಯುವಿಕೆಗೆ ಸಂಬಂಧ ಪಟ್ಟಿದ್ದಂಥ ದೈವದರ್ಶನವೊಂದನ್ನು ಊರ್ ಪಟ್ಟಣದಲ್ಲಿ ಹೊಂದಿದನು ಎಂಬುದಾಗಿ ಉಲ್ಲೇಖಿಸುತ್ತಾನೆ (ಅಪೊಸ್ತಲರ ಕೃತ್ಯಗಳು 7:2).[9] ದೇವರ ಪ್ರತ್ಯಕ್ಷತೆಯು ಯಾವ ರೂಪದಲ್ಲಿ ಸಂಭವಿಸಿತು ಎಂಬುದು ಸ್ಪಷ್ಟವಾಗಿರುವದಿಲ್ಲ; ಆದರೆ, ಅದು ಏನೇ ಆಗಿದ್ದರೂ ಸರಿಯೇ, ಇದು ಮೂಲಪಿತೃವಿಗೆ ಆ ಹೊಸ ದೇಶದೊಳಗೆ ಯೆಹೋವನು ಇರುವನೆಂಬ ಪುನರಾಶ್ವಾಸನೆಯನ್ನು ನೀಡಿತ್ತು.

ಯೆಹೋವನ ಬಳಿಕ ಹೀಗೆ ವಾಗ್ದಾನ ಮಾಡಿದನು, **ನಾನು ಈ ದೇಶವನ್ನು ನಿನ್ನ ಸಂತಾನಕ್ಕೆ ಕೊಡುವೆನು**, ಆದಾಗ್ಯೂ ಆ ಸಂದರ್ಭದಲ್ಲಿ ಅಬ್ರಹಾಮನಿಗೆ ಸಂತಾನವೇ ಇರಲಿಲ್ಲ. "ಸಂತತಿಯವರು" ಎಂಬುದನ್ನು ಅನುವಾದಿಸಿರುವ ಇಬ್ರಿಯ ಪದವು זֶרַע (*ಝೆರಾ*), ಇದರ ಅಕ್ಷರಶಃ ಅರ್ಥವು "ಸಂತಾನ" ಎಂದಾಗಿರುತ್ತದೆ. ಇದು ಯಾವಾಗಲೂ ಒಂದು ಸಮುದಾಯವಾಚಕ ನಾಮಪದವಾಗಿ ಬಳಸಲ್ಪಡುತ್ತದೆ ಮತ್ತು ಬಹುವಚನದಲ್ಲಿರುವ "ಸಂತತಿಯವರು" ಎಂದು ಅನುವಾದಿಸಲ್ಪಡುತ್ತದೆ (RSV; NEB). ಈ ಸನ್ನಿವೇಶದಲ್ಲಿ, ಅಬ್ರಹಾಮನ "ಸಂತಾನ" ಎಂಬುದು ಅನಂತರದಲ್ಲಿನ ಇಸ್ರಾಯೇಲ್ಯರನ್ನು ಸೂಚಿಸುತ್ತದೆ ಎಂಬುದು ಸ್ಪಷ್ಟವಾಗಿರುತ್ತದೆ, ಅವರು ಆತನ ವಂಶದಿಂದ ಬಂದವರಾಗಿ ವಾಗ್ದಾನ ದೇಶವನ್ನು ಬಾಧ್ಯವಾಗಿ ಪಡೆಯಲಿದ್ದರು, ಮತ್ತು ಈ ಪದವು ಆದಿಕಾಂಡದ ಕಥಾನಿರೂಪಣೆಯುದ್ದಕ್ಕೂ ಸಾಗುವಂಥ ಒಂದು ಮೂಲ ಭಾವವಾಗಿರುತ್ತದೆ.[10]

ಈ ಮೇಲ್ಕಂಡ ದೈವದರ್ಶನ ಮತ್ತು ವಾಗ್ದಾನಕ್ಕೆ ಪ್ರತಿಕ್ರಿಯೆಯಾಗಿ, ಅಬ್ರಹಾಮನ ಮೊದಲ ಕ್ರಿಯೆ ಎಂದರೆ **ಯೆಹೋವನಿಗೆ ... ಯಜ್ಞವೇದಿಯನ್ನು ಕಟ್ಟಿಸಿದನು**.[11] ಆತನು ತನ್ನನ್ನು ಮೆಸಪೊತಾಮ್ಯದಿಂದ ಹಾರಾನಿಗೆ ಮತ್ತು ಅಲ್ಲಿಂದ ಕಾನಾನಿಗೆ ಆ ದೀರ್ಘವಾದ ಮತ್ತು ಗಂಡಾಂತರಗಳಿಂದ ಕೂಡಿದ್ದ ಪ್ರಯಾಣದಲ್ಲಿ ಸುರಕ್ಷಿತವಾಗಿ ಕರೆದುಕೊಂಡ ಬಂದ ಯೆಹೋವನಿಗೆ ಆತನು ತನ್ನ ಕೃತಜ್ಞತೆ ಹಾಗೂ ಸ್ತೋತ್ರವನ್ನು ವ್ಯಕ್ತಪಡಿಸಿದನು. ಈ

ಯಜ್ಞವೇದಿಯು ಒಂದು ಯಜ್ಞಗಳಿಂದ ಕೂಡಿದ ಆರಾಧನೆಯ ಕಲ್ಪನೆಯನ್ನು ಹೊಂದಿರುತ್ತದೆಂಬುದನ್ನು ಕೆಲವರು ನಿರಾಕರಿಸುತ್ತಾರಾದರೂ, ಬೇರೆ ಯಾವದೇ ಉದ್ದೇಶವು ಇಲ್ಲಿ ಸಂಶಯಾಸ್ಪದವಾಗಿರುತ್ತದೆ. ಇದು ಯಾವದೇ ಪ್ರಾಣಿಗಳ ಯಜ್ಞದ ಬಗ್ಗೆ ಪ್ರಸ್ತಾಪಿಸದೆ ಅಬ್ರಹಾಮನು ಒಂದು ಯಜ್ಞವೇದಿಯನ್ನು ಕಟ್ಟಿದ್ದರ ಕುರಿತಾದ ಮೊದಲ ಉಲ್ಲೇಖವಾಗಿರುತ್ತದಾದ್ದರಿಂದ, ತನ್ನ ಸಂತತಿಯವರು ಮುಂದೊಂದು ದಿನ ದೇವರು ವಾಗ್ದಾನ ಮಾಡಿದ ದೇಶವನ್ನು ಪಡೆದುಕೊಳ್ಳುವರೆಂಬುದಾಗಿ ಮೂಲಪಿತೃವು ಹೊಂದಿದ್ದ ನಂಬಿಕೆಗೆ ಕೇವಲ ಒಂದು ಸಂಕೇತವಾಗಿತ್ತೆಂದು ಹೇಳಲಾಗಿರುತ್ತದೆ. ಹಾಗಿದ್ದರೂ, ಆದಿಕಾಂಡದ ಆರಂಭದಿಂದ, ದೇವರಿಗೆ ಯಜ್ಞಗಳನ್ನು ಅರ್ಪಿಸಲಾಗುತ್ತಿತ್ತು ಎಂಬುದನ್ನು ನಾವು ಓದುತ್ತೇವೆ. ಹೇಬೆಲನು ದೇವರಿಗೆ ಪ್ರಾಣಿಗಳನ್ನು ಅರ್ಪಿಸಿದನು (4:4), ನೋಹನು ಪ್ರಳಯದ ನಂತರದಲ್ಲಿ ಹಾಗೆ ಮಾಡಿದನು (8:20), ಮತ್ತು ಅನಂತರದಲ್ಲಿ ಅಬ್ರಹಾಮನು ತನ್ನ ಮಗನ ಬದಲಾಗಿ ಯಜ್ಞವೇದಿಯ ಮೇಲೆ ಟಗರನ್ನು ಹೋಮ ಮಾಡಿದನು (22:13). ಅಂಥ ಸಂದೇಹವು ಹತ್ತೊಂಭತ್ತನೆಯ ಶತಮಾನದಲ್ಲಿನ ಮೊಂಡುವಾದದ ಪೂರ್ವಕಲ್ಪನೆಗಳ ಕುರಿತಾ ನಿರಾಧಾರ ಊಹೆಗಳಿಂದ ಉದ್ಭವವಾಗಿರುತ್ತದೆ, ಅದು ಬಹಳಷ್ಟು ಕಾಲದ ನಂತರದ ಯಾಜಕರು ಇಂಥ ಯಜ್ಞಗಳ ಆರಾಧನೆಯನ್ನು ಹುಟ್ಟು ಹಾಕಿದರು ಮತ್ತು ಬಳಿಕ ಅದು ಮೂಲಪಿತೃಗಳ ಕಾಲದಲ್ಲಿ ಸಂಭವಿಸಿತೆನೋ ಎಂಬಂತೆ ಸೇರಿಸಿ ಓದಲಾಗಿರುತ್ತದೆ ಎಂದು ಹೇಳುವದಾಗಿದೆ.

ಕೆಲವರು ಈ ದೈವದರ್ಶನದ ನಂತರವಷ್ಟೇ ಯೆಹೋವನು ಕೇವಲ ಇನ್ನೊಬ್ಬ ದೇವರಂತಲ್ಲ ಆದರೆ ಅನ್ಯಧರ್ಮಿಯರ ಆಯಾ ಸೀಮೆಗೆ ಸೇರಿದ ದೇವರುಗಳಿಗಿಂತಲೂ ದೊಡ್ಡವನು ಎಂಬುದನ್ನು ಗ್ರಹಿಸಿಕೊಂಡನು ಎಂದು ಊಹೆ ಮಾಡಿಕೊಳ್ಳುತ್ತಾರೆ. ಅಂತೂ, ಪ್ರಾಚೀನ ಜನರು ತಮ್ಮ ದೇವರುಗಳ ಶಕ್ತಿಯು, ಮೆಸಪೊಟಾಮ್ಯ ಅಥವಾ ಕಾನಾನ್ ಅಂತಹ ಭೌಗೋಳಿಕ ಕ್ಷೇತ್ರಗಳಿಗೆ ಮಾತ್ರವೇ ಸೀಮಿತವಾಗಿತ್ತೆಂದು ನಂಬಿದ್ದರು. ಹೇಗೂ, ಯೆಹೋವನು ತನ್ನನ್ನು, ತನ್ನ ಸೇವಕರನ್ನು, ಮತ್ತು ಆತನ ಎಲ್ಲಾ ಸ್ವತ್ತುಗಳನ್ನು ತಾನು ಹೋಗುತ್ತಿರುವ ಹೊಸ ದೇಶದಲ್ಲಿ ಕಾಪಾಡಿ ತಮಗೆ ಒದಗಿಸುವದಕ್ಕೆ ಶಕ್ತನು ಎಂಬುದಾಗಿ ಅಬ್ರಹಾಮನು ನಂಬದೆ ಹೋಗಿದ್ದಲ್ಲಿ, ಆತನು ಊರ್ ಪಟ್ಟಣದಲ್ಲಿದ್ದ ತನ್ನ ಮನೆಯನ್ನು ಬಿಟ್ಟು ಬಂದಿರುತ್ತಿರಲಿಲ್ಲ.

ಅಬ್ರಹಾಮನು ಆತನ ಕುಟುಂಬದವರು ಮಾಡುತ್ತಿದ್ದ ರೀತಿಯಲ್ಲಿಯೇ, ಯೆಹೋವನು ಆತನನ್ನು ಊರ್ ಪಟ್ಟಣದಿಂದ ಹೊರಗೆ ಬರುವಂತೆ ಕರೆಯುವದಕ್ಕೆ ಮುನ್ನ ಆತನು ಸಹ ಬೇರೆ ದೇವರುಗಳನ್ನು ಆರಾಧಿಸಿದ್ದನು ಎಂದು ಬಲ್ಲೆವು (ಯೆಹೋಶುವ 24:2, 3); ಮತ್ತು ಆತನು ಅನ್ಯಧರ್ಮಿಯ ವಿಚಾರಗಳನ್ನು ತಿರಸ್ಕರಿಸಿ ಯೆಹೋವನು ವಿಶ್ವದ ದೇವರು ಎಂಬುದಾಗಿ ವಿಶ್ವಾಸವಿಡುವದಕ್ಕೆ ಆತನಿಗೆ ಎಷ್ಟು ವರ್ಷಗಳು ಹಿಡಿದಿದ್ದವು ಎಂಬುದು ನಮಗೆ ತಿಳಿಸಲ್ಪಟ್ಟಿಲ್ಲ. ವಾಸ್ತವಿಕದಲ್ಲಿ, ಯೆಹೋವನು ನಿಜವಾಗಿಯೂ "ಸರ್ವಶಕ್ತನು" (17:1) ಮತ್ತು ಆತನಿಗೆ "ಅಸಾಧ್ಯವಾದದ್ದು" ಯಾವದೂ ಇಲ್ಲ (18:14) ಎಂಬ ಭಾವನೆಯನ್ನು ಗ್ರಹಿಸಿಕೊಳ್ಳಲು ಮೂಲಪಿತೃವಿಗೆ ಸಮಯ ಹಿಡಿದಿತ್ತು. ಇನ್ನೊಂದೆಡೆಯಲ್ಲಿ, ಇಬ್ರಿಯ 11:8 ಹೇಳುವದೇನೆಂದರೆ, "ನಂಬಿಕೆಯಿಂದಲೇ ಅಬ್ರಹಾಮನು" ತನ್ನ ಸ್ವದೇಶವನ್ನು ತೊರೆದು "ತಾನು ಬಾಧ್ಯವಾಗಿ ಹೊಂದಬೇಕಾಗಿದ್ದ ಸ್ಥಳಕ್ಕೆ ಹೊರಟು ಹೋದನು." ದೇವರಲ್ಲಿ ನಂಬಿಕೆಯಿಡುವದೆಂದರೆ ಅದಕ್ಕೆ "ಆತನು ಇದ್ದಾನೆ" ಎಂದು ವಿಶ್ವಾಸಿಸುವದು ಮಾತ್ರವೇ ಅಗತ್ಯವಿರುವದಿಲ್ಲ, ಆದರೆ ಆತನು "ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ" ಎಂದು ವಿಶ್ವಾಸಿಸುವುದು ಸಹ ಅಗತ್ಯವಿರುತ್ತದೆ (ಇಬ್ರಿಯ 11:6). ದೇವರು ತನ್ನ ವಾಗ್ದಾನವನ್ನು ಕಾಪಾಡಿಕೊಳ್ಳಲು

ಸಾಮರ್ಥ್ಯವನ್ನು ಮತ್ತು ಸತ್ಯವಂತಿಕೆಯನ್ನು ಹೊಂದಿರುತ್ತಾನೆಂಬ ದೃಢವಿಶ್ವಾಸವು ಅಬ್ರಹಾಮನಲ್ಲಿತ್ತು.

**ವಚನ 8.** ಶೆಕೆಮಿನಿಂದ, ಅಬ್ರಹಾಮನು **ಬೇತೇಲಿಗೆ ಮೂಡಲಲ್ಲಿರುವ ಗುಡ್ಡಕ್ಕೆ ಬಂದು ತನ್ನ ಗುಡಾರವನ್ನು ಹಾಕಿಸಿ ಇಳುಕೊಂಡನು**, ಅದು **ಬೇತೇಲು** ಮತ್ತು **ಆಯಿ** ಪಟ್ಟಣಗಳ ನಡುವೆ ಆಗಿತ್ತು. ಬೇತೇಲನ್ನು ಸಾಮಾನ್ಯವಾಗಿ ಬೇಯಿತಿನ್ ಎಂಬುದರೊಂದಿಗೆ ಗುರುತಿಸಲಾಗುತ್ತದೆ, ಇದು ಯೆರೂಸಲೇಮಿನಿಂದ ಉತ್ತರಕ್ಕೆ ಅಂದಾಜು ಹತ್ತು ಮೈಲಿಗಳಷ್ಟು ದೂರದಲ್ಲಿರುತ್ತದೆ, ಮತ್ತು ಆಯಿ ಎಂಬುದು ಎಟ್-ಟೆಲ್ (ಬೇಯಿತಿನ್‌ನಿಂದ ಸುಮಾರು ಎರಡು ಮೈಲಿಗಳಷ್ಟು ದೂರದಲ್ಲಿರುವುದು) ಎಂದು ಭಾವಿಸಲಾಗಿರುತ್ತದೆ, ಆದಾಗ್ಯೂ ಕೆಲವರು ಈಗಲೂ ಆ ಗುರುತಿನ ವಿಷಯದಲ್ಲಿ ವಾಗ್ವಾದ ಮಾಡುತ್ತಾರೆ.[12] ಬೇತೇಲಿನ ಮೂಲ ಹೆಸರು "ಲೂಜ್" (28:19) ಎಂದಾಗಿತ್ತು, ಆದರೆ ಲೇಖಕನು ಬದಲಾವಣೆಯನ್ನು ಮುಂದಾಗಿ ನಿರೀಕ್ಷಿಸುತ್ತಾ ಅದರ ಹೊಸ ಹೆಸರನ್ನು ಇಲ್ಲಿ ಬಳಸಿರಬಹುದಾಗಿದೆ.

ಅಬ್ರಹಾಮನು ತನ್ನ ಗುಡಾರವನ್ನು ನೆಟ್ಟ ಬಳಿಕ, ಆತನು **ಯೆಹೋವನಿಗೋಸ್ಕರ ಯಜ್ಞವೇದಿಯನ್ನು ಕಟ್ಟಿಸಿದನು**. ಮೂಲಪಿತೃವು ಎಲ್ಲಿಯೇ ಪ್ರಯಾಣಿಸಿದಾಗ್ಯೂ, ಆತನು ಎಂದಿಗೂ ಕಾನಾನ್ಯರ ಯಜ್ಞವೇದಿಯನ್ನು ಬಳಸಲಿಲ್ಲ ಎಂಬುದನ್ನು ಇಲ್ಲಿ ಒತ್ತಿ ಹೇಳುತ್ತಿರಬಹುದಾಗಿದೆ. ಆತನು ಸ್ವತಃ ಹೊಸ ಯಜ್ಞವೇದಿಯನ್ನು ನಿರ್ಮಿಸಿಕೊಂಡನು. ಅಲ್ಲದೆ ಅಬ್ರಹಾಮನು ಯೆಹೋವನ **ಹೆಸರನ್ನು ಹೇಳಿಕೊಂಡು ಆರಾಧಿಸಿದನು** ಎಂದು ಸಹ ವಾಕ್ಯವು ತಿಳಿಸುತ್ತದೆ (4:26ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಆತನು ದೇವರ ಹೆಸರನ್ನು ಹೇಳಿಕೊಂಡನು ಎಂಬ ವಾಸ್ತವಾಂಶವು ದೇಶ ಮತ್ತು ದೇವರುಗಳು ಬೇರ್ಪಡಿಸಲಾಗದವುಗಳೆಂಬ ಅನ್ಯಧರ್ಮಿಯ ಜಗತ್ತಿನಲ್ಲಿದ್ದ ಸರ್ವಸಾಧಾರಣವಾದ ಮನೋಭಾವವನ್ನು ತಿರಸ್ಕರಿಸಿದನು ಎಂಬುದನ್ನು ಒತ್ತಿ ಹೇಳುತ್ತದೆ. ದೇವರ ಹೆಸರನ್ನು ಹೇಳಿಕೊಳ್ಳುವುದು ಸಾರ್ವಭೌಮ ದೇವರು ತಾನು ಅಬ್ರಹಾಮನ ಸಂತತಿಯವರಿಗೆ ವಾಗ್ದಾನ ಮಾಡಿದ್ದ ಕಾನಾನ್ ದೇಶದ ಒಡೆಯನಾಗಿದ್ದಾನೆ ಎಂಬುದನ್ನು ಆತನು ಒಪ್ಪಿಕೊಂಡನು ಎಂಬುದನ್ನು ಸೂಚಿಸುತ್ತದೆ.

**ವಚನ 9.** ಮೂಲಪಿತೃವು ತನ್ನ ಪ್ರಯಾಣವನ್ನು ಮುಂದುವರೆಸಿದನು, ಉತ್ತರದಲ್ಲಿದ್ದ ದೇಶದಿಂದ **ದಕ್ಷಿಣಸೀಮೆಗೆ** ನೆಗೆವ್ ಕಡೆಗೆ ಸಾಗಿದನು. ನೆಗೆವ್ ವಾಗ್ದಾನ ದೇಶದ ದಕ್ಷಿಣ ಭಾಗದಲ್ಲಿದ್ದ ಒಂದು ಬೃಹತ್ ಪ್ರಾಂತ್ಯವಾಗಿದ್ದು ಅಂದಾಜಾಗಿ ಅದು ಕಾದೇಶ್‌ಬರ್ನೇಯಕ್ಕೆ ದಕ್ಷಿಣಕ್ಕೆ ಬೇರ್ಷೆಬದ ಹತ್ತಿರುವ ಯೂದಾಯದ ಬೆಟ್ಟಗಳಿಂದ ವಿಸ್ತರಿಸಲ್ಪಟ್ಟಿತ್ತು. ನೂರಾರು ವರ್ಷಗಳ ನಂತರ, ಹನ್ನೆರಡು ಗೋತ್ರಗಳಿಂದ ಒಬ್ಬೊಬ್ಬನಂತೆ ಕಾನಾನ್ ದೇಶದ ಮೇಲೆ ಗೂಢಾಚಾರ ಮಾಡುವದಕ್ಕೆ ಹೋಗಿದ್ದ ವೇಳೆ, ಇಸ್ರಾಯೇಲ್ಯರು ಕಾದೇಶಿನಲ್ಲಿ ಗುಡಾರ ಹಾಕಿಕೊಂಡಿದ್ದರು (ಅರಣ್ಯಕಾಂಡ 13:1-26). ಆ ಪ್ರಾಂತ್ಯದಲ್ಲಿ ಜನರ ವಾಸವು ವಿರಳವಾಗಿತ್ತು ಯಾಕೆಂದರೆ ಅಲ್ಲಿ ಸಹಜವಾದ ಕೃಷಿ ಚಟುವಟಿಕೆಗೋಸ್ಕರ ಸಾಕಾಗುವಷ್ಟು ಮಳೆಯಾಗುತ್ತಿರಲಿಲ್ಲ, ಪ್ರತಿ ವರ್ಷ ಸರಾಸರಿ ಎಂಟು ಇಂಚುಗಳಷ್ಟು ಮಾತ್ರವೇ ಮಳೆಯಾಗುತ್ತಿತ್ತು. ಹೇಗೂ, ಮಂದೆಗಳಿಗೆ ಮತ್ತು ಹಿಂಡುಗಳಿಗೆ ಹುಲ್ಲನ್ನು, ಕನಿಷ್ಠ ವಸಂತಕಾಲದಲ್ಲಿಯಾದರೂ ಉತ್ಪಾದಿಸುವದಕ್ಕೆ ಸಾಕಾಗುವಷ್ಟು ಇಬ್ಬನಿಯು ಬೀಳುತ್ತಿತ್ತು.

## ಐಗುಪ್ತದಲ್ಲಿ ಅಬ್ರಹಾಮ ಮತ್ತು ಸಾರಳು (12:10-20)

12:1-9 ಮತ್ತು 12:10-20ರ ವಾಕ್ಯಭಾಗದೊಳಗೆ ಬಣ್ಣಿಸಲಾಗಿರುವ ಘಟನೆಗಳ ನಡುವೆ

ಎಷ್ಟೊಂದು ಕಾಲವು ಗತಿಸಿತ್ತು ಎಂಬುದು ನಮಗೆ ಗೊತ್ತಿಲ್ಲ. ಕಾನಾನಿನ ದಕ್ಷಿಣ ಭಾಗದಲ್ಲಿ ಮಳೆಯು ಯಾವಾಗಲೂ ವಿರಳವಾಗಿರುತ್ತಿತ್ತು; ಮತ್ತು, ಖಂಡಿತವಾಗಿಯೂ, ಮಾನವರಿಗೂ ಪ್ರಾಣಿಗಳಿಗೂ ಹೊಟ್ಟೆಪಾಡಿಗೆ ಮಿತವಾಗಿ ಬಳಕೆ ಮಾಡುವುದು ಅತ್ಯಾವಶ್ಯಕವಾಗಿತ್ತು. ಮಳೆಯು ಅಷ್ಟಾಗಿ ಬರದೆ ಅಬ್ರಹಾಮನ ಸಂಗಡಿಗರ ಜೀವಿತಗಳನ್ನು ಇಕ್ಕಟ್ಟಿಗೆ ಸಿಲುಕುವಂತೆ ಮಾಡುವದಕ್ಕೆ ಮುನ್ನ, ಹಲವಾರು ತಿಂಗಳುಗಳು, ಅಥವಾ ವರ್ಷಗಳು ಗತಿಸಿದ್ದವು; ಆದರೆ ಪ್ರಯಾಣಿಕರು ಜೀವ-ಅಥವಾ-ಮರಣ ಎಂಬ ಪರಿಸ್ಥಿತಿಯನ್ನು ಎದುರಿಸುವಂಥ ಸಮಯವು ಬಂದಿತ್ತು, ಮತ್ತು ಅವರು ಕಾನಾನ್ ದೇಶವನ್ನು ತೊರೆಯಲು ನಿರ್ಧರಿಸಿದ್ದರು.

## ಐಗುಪ್ತದಲ್ಲಿ ಅಬ್ರಹಾಮನ ಮೋಸತನ (12:10-16)

**[10]ಆ ದೇಶದಲ್ಲಿ ಘೋರ ಕ್ಷಾಮವಿದ್ದದರಿಂದ ಅಲ್ಲಿರದೆ, ಐಗುಪ್ತ ದೇಶದಲ್ಲಿ ಕೆಲವು ಕಾಲ ಇರಬೇಕೆಂದು ಆ ಬೆಟ್ಟದ ಸೀಮೆಯಿಂದ ಇಳಿದುಹೋದನು. [11]ಅವನು ಐಗುಪ್ತದೇಶದ ಹತ್ತಿರಕ್ಕೆ ಬಂದಾಗ, ತನ್ನ ಹೆಂಡತಿಯಾದ ಸಾರಯಳಿಗೆ - [12]ಕೇಳು, ನೀನು ಸುಂದರಿ ಎಂದು ನಾನು ಬಲ್ಲೆ; ಐಗುಪ್ತದೇಶದವರು ನಿನ್ನನ್ನು ಕಂಡು - ಈಕೆಯು ಇವನ ಹೆಂಡತಿ ಎಂದು ನನ್ನನ್ನು ಕೊಂದು ನಿನ್ನನ್ನು ಉಳಿಸಾರು. [13]ಆದಕಾರಣ ನೀನು ನನಗೆ ತಂಗಿಯಾಗಬೇಕೆಂದು ಅವರಿಗೆ ಹೇಳು; ಹೀಗೆ ಹೇಳಿದರೆ ನಿನ್ನ ನಿಮಿತ್ತ ನನಗೆ ಹಿತವಾಗುವದು, ನಾನು ನಿನ್ನ ದೆಸೆಯಿಂದ ಸಾಯದೆ ಬದುಕುವೆನು ಎಂದು ಹೇಳಿದನು. [14]ಅಬ್ರಾಮನು ಐಗುಪ್ತದೇಶಕ್ಕೆ ಬಂದಾಗ ಐಗುಪ್ಯರು ಅವನ ಸಂಗಡ ಇದ್ದ ಸ್ತ್ರೀಯನ್ನು ನೋಡಿ ಬಹು ಸುಂದರಿಯೆಂದರು. [15]ಫರೋಹನ ಪ್ರಧಾನರು ಆಕೆಯನ್ನು ನೋಡಿ ಬಂದು ಅವನ ಮುಂದೆ ಹೊಗಳಲಾಗಿ [16]ಫರೋಹನು ಆ ಸ್ತ್ರೀಯನ್ನು ಅರಮನೆಗೆ ಕರತರಿಸಿ ಆಕೆಯ ನಿಮಿತ್ತ ಅಬ್ರಾಮನಿಗೆ ಉಪಕಾರ ಮಾಡಿದನು. ಆಗ ಅಬ್ರಾಮನಿಗೆ ಕುರಿದನಗಳೂ ಗಂಡು ಹೆಣ್ಣು ಕತ್ತೆಗಳೂ ದಾಸದಾಸಿಯರೂ ಒಂಟೆಗಳೂ ದೊರೆತವು.**

**ವಚನ 10. ಘೋರ ಕ್ಷಾಮ** ಇದ್ದ ಕಾರಣ, ಅಬ್ರಹಾಮನು ಜೊತೆಯಲ್ಲಿದ್ದ ತನ್ನ ಜನರು, ಮಂದೆಗಳು, ಮತ್ತು ಹಿಂಡುಗಳನ್ನು ಕರೆದುಕೊಂಡು **ಐಗುಪ್ತ ದೇಶದಲ್ಲಿ ಕೆಲವು ಕಾಲ ಇರಬೇಕೆಂದು ಆ ಬೆಟ್ಟದ ಸೀಮೆಯಿಂದ ಇಳಿದುಹೋದನು**. ವಲಸೆ ಹೋಗುವದಕ್ಕಿದ್ದ ಕಾರಣವು ಒತ್ತಿ ಹೇಳಲ್ಪಡುವದಕ್ಕೋಸ್ಕರ ಪುನರಾವರ್ತಿಸಲ್ಪಟ್ಟಿದೆ: ಕಾನಾನ್ ಇನ್ನು ಮೇಲೆ ಆತನ ಮನೆಯವರಿಗೆ ಜೀವನೋಪಾಯವನ್ನು ಒದಗಿಸಲಾರದು ಯಾಕೆಂದರೆ **ಆ ದೇಶದಲ್ಲಿ ಘೋರ ಕ್ಷಾಮವಿತ್ತು** (ನೋಡಿರಿ 26:1; 41:54, 56; 43:1).[13]

ಸ್ಪಷ್ಟವಾಗಿರುವಂತೆ, ಐಗುಪ್ತದಲ್ಲಿ ಸಾಕಷ್ಟು ಆಹಾರವು ಲಭ್ಯವಿರುತ್ತದೆಂದು ಅಬ್ರಹಾಮನು ಕೇಳಿಸಿಕೊಂಡಿದ್ದನು. ಸ್ವತಃ ಆ ದೇಶದಲ್ಲಿ ಮಳೆಯು ಬಹಳ ಕಡಿಮೆಯಾಗುತ್ತಿತ್ತಾದರೂ, ಮಧ್ಯ ಆಫ್ರಿಕಾದಲ್ಲಾಗುತ್ತಿದ್ದ ಮಳೆಯಿಂದಾಗಿ ಅದು ಫಲವತ್ತತೆಯನ್ನು ಪಡೆಯುತ್ತಿತ್ತು, ಅಲ್ಲಿ ಮಳೆಯಾಗುವದರಿಂದ ವಾರ್ಷಿಕವಾಗಿ ನೈಲ್ ನದಿಯು ಉಕ್ಕಿ ಹರಿಯುವಂತೆ ಮತ್ತು ನೆಲದ ಮೇಲೆ ಫಲವತ್ತಾದ ಹೊಸ ಪದರನ್ನು ಶೇಖರಿಸುವಂತೆ ಮಾಡುತ್ತಿತ್ತು. ಬಳಿಕ, ನೈಲ್ ನದಿಯ ನೀರು ನೆಲವನ್ನು ತೇವಗೊಳಿಸಿದ ನಂತರ ಕಡಿಮೆಯಾಗುವಾಗ, ಭೂಮಿಯು ಸಮೃದ್ಧಿಯಾದ ಬೆಳೆಯನ್ನು ಒದಗಿಸುತ್ತಿತ್ತು. ಅನೇಕರು ಐಗುಪ್ತನ್ನು ಮೆಡಿಟೆರ್ರೇನಿಯನ್ ಜಗತ್ತಿನ ರೊಟ್ಟಿಯ ಚೀಲ ಎಂಬುದಾಗಿ ಕಾಣುತ್ತಿದ್ದರು. ಬಹಳಷ್ಟರ ಮಟ್ಟಿಗೆ, ಇದು ಸುತ್ತಲಿನ ದೇಶಗಳ ಹಾಗೆ ಆರ್ಥಿಕವಾಗಿ ಕ್ಷಾಮಗಳಿಗೆ ಒಳಗಾಗುವ ಸಾಧ್ಯತೆಯಿರಲಿಲ್ಲ.

ಈ ಪ್ರಯೋಜನಗಳನ್ನು ಹೊರತು ಪಡಿಸಿ, ಅಬ್ರಹಾಮನು ಇನ್ನು ಕೆಲವು ವದಂತಿಗಳನ್ನು ಕೇಳಿಸಿಕೊಂಡಿದ್ದನು. ಪ್ರವಾಸಿಗಳಲ್ಲಿ ಯಾರ ಹೆಂಡತಿಯರು ಸುಂದರವಾಗಿದ್ದಾರೋ ಅವರನ್ನು ತಮ್ಮವರನ್ನಾಗಿ ಮಾಡಿಕೊಳ್ಳಲು ಅವರ ಗಂಡಂದಿರನ್ನು ಕೊಲ್ಲುವವರು ಎಂಬುದಾಗಿ ಐಗುಪ್ತರು ಹೆಸರುಗೊಂಡಿದ್ದರು. ಇದು ಅಬ್ರಹಾಮನು ಉಳಿದುಕೊಳ್ಳಬೇಕೆಂದು ಉದ್ದೇಶವಿಟ್ಟುಕೊಂಡ ಸ್ಥಳವಾಗಿರಲಿಲ್ಲ. "ಕೆಲವು ಕಾಲ ಇರಬೇಕೆಂದು" (גּוּר, *ಗುರ್*) ಎಂದರೆ ಒಬ್ಬ ಪರದೇಶಿಯಾಗಿ ಇರುವದು ಎಂದರ್ಥ. ಆತನು ಮತ್ತು ಸಾರಳು ಅವರನ್ನು ರಕ್ಷಿಸುವದಕ್ಕೆ ಯಾವದೇ ರಕ್ತಸಂಬಂಧವಾಗಲಿ ಅಥವಾ ನಾಗರೀಕ ಹಕ್ಕುಗಳಾಗಲಿ ಇಲ್ಲದೆಯೇ ಐಗುಪ್ತದಲ್ಲಿ ತಾತ್ಕಾಲಿಕ ನಿವಾಸಿಗಳಾಗಿ ಇರಲಿದ್ದರು. ಪರಿಸ್ಥಿತಿಗಳು ಮೂಲಪಿತೃವನ್ನು ಸ್ವಲ್ಪ ನಿಂತು ಯಾವ ದಾರಿಯಲ್ಲಿ ಸಾಗಬೇಕು ಎಂಬುದಾಗಿ ಯೆಹೋವನ ಮಾರ್ಗದರ್ಶನವನ್ನು ಕೇಳುವಂತೆ ಒತ್ತಾಯಿಸಿರಬಹುದಾಗಿದೆ. ಆತನ ಮುಂದಿದ್ದ ಮೊದಲನೆಯ ಆಯ್ಕೆಯು ದೇವರು ಅವನನ್ನು ನಡಿಸಿರುವಂತ ದೇಶದಲ್ಲಿ, ಕ್ಷಾಮದ ಹೊರತಾಗಿಯೂ ಉಳಿದುಕೊಳ್ಳುವುದು ಆಗಿತ್ತು. ಎರಡನೆಯ ಆಯ್ಕೆಯು ಕಾನಾನ್ ದೇಶವನ್ನು ತೊರೆದು ಐಗುಪ್ತಕ್ಕೆ ಹೋಗುವುದು. ಮತ್ತೊಂದಾವರ್ತಿ, ಅಬ್ರಹಾಮನು ತನ್ನ ನಂಬಿಕೆಯೊಂದಿಗೆ ಹೋರಾಟವನ್ನು ಅನುಭವಿಸಿರಬಹುದಾಗಿದೆ, ಯಾಕೆಂದರೆ ಆತನು ಈ ವಿಷಯವಾಗಿ ಯೆಹೋವನ ಮುಂದೆ ಪ್ರಾರ್ಥಿಸಿದನೆಂಬ ಯಾವ ಸುಳಿವೂ ನಮಗೆ ಕಾಣಿಸುವದಿಲ್ಲ. ಆತನು ತನ್ನಷ್ಟಕ್ಕೇ ತಾನೇ ದೇವರು ತನ್ನ ಸಂತತಿಯವರಿಗೆ ವಾಗ್ದಾನ ಮಾಡಿದ್ದ ದೇಶವನ್ನು (12:7) ತೊರೆದು ಬದುಕುಳಿಯುವ ತಂತ್ರವಾಗಿ ಮೋಸತನವನ್ನು ಅನುಸರಿಸಿರಬಹುದಾಗಿದೆ.

**ವಚನಗಳು 11, 12**. ಆತನ ತಂಡವು **ಐಗುಪ್ತದೇಶದ ಹತ್ತಿರಕ್ಕೆ ಬಂದಾಗ**, ಮೂಲಪಿತೃವು ತನ್ನ **ಹೆಂಡತಿಯಾದ ಸಾರಯಳಿಗೆ - ಕೇಳು, ನೀನು ಸುಂದರಿ** ಆಗಿರುವದರಿಂದ, **ಐಗುಪ್ತರು** ನಿನ್ನನ್ನು ನೋಡುವರು ಎಂಬುದಾಗಿ ಎಚ್ಚರಿಸಿದನು. ಬಳಿಕ ಆತನು ಹೀಗೆ ಹೇಳಿದನು, ಈಕೆಯು ಇವನ ಹೆಂಡತಿ ಎಂದು **ನನ್ನನ್ನು ಕೊಂದು ನಿನ್ನನ್ನು ಉಳಿಸಾರು**. ಅನೇಕ ಪ್ರಾಚೀನ ಸಮಾಜಗಳಲ್ಲಿ, ವಲಸೆ ಹೋಗುವವರು ಅನೇಕ ಸಾರಿ ಗಂಡಾಂತರದಲ್ಲಿ ಇರುತ್ತಾರೆಂಬುದು ಅಬ್ರಹಾಮನಿಗೆ ನಿಶ್ಚಿತವಾಗಿಯೂ ಗೊತ್ತಿತ್ತು. ನಾಗರೀಕರಿಗೆ ಅವರ ಸ್ವಂತ ಸ್ಥಳದಲ್ಲಿರುತ್ತಿದ್ದಂಥ ಭದ್ರತೆ ಮತ್ತು ಬೆಂಬಲಗಳ ಕೊರತೆಯು ಅವರಿಗೆ ಇರುತ್ತಿತ್ತು. ಆತನಿಗೆ ಕಾನಾನಿನಲ್ಲಿ ಸುರಕ್ಷಿತನೆಂದು ಆದರೆ ಐಗುಪ್ತದಲ್ಲಿ ಸುರಕ್ಷಿತನಲ್ಲ ಎಂಬುದಾಗಿ ಏಕೆ ಅನ್ನಿಸಿತು ಎಂಬುದು ಸ್ಪಷ್ಟವಾಗಿಲ್ಲ, ಐಗುಪ್ತರು ಹೆಂಡತಿಯರನ್ನು ಕದ್ದುಕೊಳ್ಳುತ್ತಿದ್ದರು ಮತ್ತು ನಿರ್ದಯವಾಗಿ ಕೊಲೆ ಮಾಡುತ್ತಿದ್ದರು ಎಂಬುದು ಎಲ್ಲರಿಗೂ ತಿಳಿದಿದ್ದ ವಿಚಾರವಾಗಿತ್ತು ಎಂಬ ವಾಸ್ತವಾಂಶವಷ್ಟೇ ತಿಳಿಸಲ್ಪಟ್ಟಿದೆ. ಅದರ ಜೊತೆಗೆ, ಫರೋಹ ಮತ್ತು ಆತನು ಅಧಿಕಾರಿಗಳು ಇಂಥ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು ಎಂಬುದು ಅಬ್ರಹಾಮನಿಗೆ ಗೊತ್ತಿಲ್ಲದೆ ಇದ್ದಿರಬಹುದಾದರೂ, ತನ್ನಂತಹ ಅಪರಿಚಿತನ ಮೇಲೆ ಐಗುಪ್ತರು ಅಂಥ ದೌರ್ಜನ್ಯಗಳನ್ನು ನಡಿಸುತ್ತಿದ್ದರೆ ಸರ್ಕಾರಿ ಅಧಿಕಾರಿಗಳು ಯಾವದೇ ಕ್ರಮವನ್ನು ಕೈಗೊಳ್ಳದೆ ಅಸಡ್ಡೆ ತೋರುತ್ತಿದ್ದರೆಂಬ ಸಂದೇಹವು ಆತನಲ್ಲಿ ಇದ್ದಿರಬಹುದಾಗಿದೆ.

ಸಾರಳ ಸೌಂದರ್ಯಕ್ಕೆ ಸಂಬಂಧ ಪಟ್ಟಂತೆ, ಅನೇಕ ಪ್ರಶ್ನೆಗಳು ಉದ್ಭವವಾಗಿರುತ್ತವೆ. ಕನಿಷ್ಠ ಅರವತ್ತೈದು ವರ್ಷ ವಯಸ್ಸಿನ ಒಬ್ಬ ಸ್ತ್ರೀ[14] ಪುರುಷರು ಆಕೆಗೋಸ್ಕರ ಕೊಲೆಯನ್ನು ಮಾಡುವಷ್ಟರ ಮಟ್ಟಿಗೆ ಹೇಗೆ ಅಷ್ಟೊಂದು "ಸುಂದರಿ" ಎಂಬುದಾಗಿ ಪರಿಗಣಿಸಲ್ಪಟ್ಟಿರುವದಕ್ಕೆ ಸಾಧ್ಯ? ವಿವಿಧ ವಿವರಣೆಗಳು ಕೊಡಲ್ಪಡುತ್ತವೆ, ಆದರೆ ಮೂಲಪಿತೃಗಳ ಯುಗದಲ್ಲಿ ಜನರು ದೀರ್ಘಕಾಲ ಜೀವಿಸುತ್ತಿದ್ದರು ಮತ್ತು ಇಂದು ನಮಗಾಗುವ ರೀತಿಯಲ್ಲಿ ಅಲ್ಲದೆ ಅವರು

ನಿಧಾನವಾಗಿ ವೃದ್ಧರಾಗುತ್ತಿದ್ದರು ಎಂಬುದು ಅತಿ ಸಂಭಾವ್ಯ ಕಾರಣವು ಆಗಿರಬಲ್ಲದು. ಸಾರಳು 127 ವರ್ಷಗಳ ಕಾಲ ಜೀವಿಸಿದಳಾದ್ದರಿಂದ (23:1), ಆಕೆ ಮತ್ತು ಅಬ್ರಹಾಮ ಒಟ್ಟಿಗೆ ಐಗುಪ್ತಕ್ಕೆ ಹೋಗಿದ್ದ ಕಾಲದಲ್ಲಿ ಆಕೆಯು ವಾಸ್ತವಿಕದಲ್ಲಿ ತನ್ನ ಮಧ್ಯ ಪ್ರಾಯದಲ್ಲಿ ಇದ್ದಳು.

**ವಚನ 13.** ಅಬ್ರಹಾಮನು ಸಾರಳನ್ನು ಬೇಡಿಕೊಳ್ಳುತ್ತಾ, ತಾವು ಅಣ್ಣ ಮತ್ತು **ತಂಗಿಯಾಗಬೇಕೆಂದು ಹೇಳು** ಎಂಬುದಾಗಿ ಪ್ರೋತ್ಸಾಹಿಸಿದನು. ಖಂಡಿತವಾಗಿಯೂ, ಸಾರಳು ಅಬ್ರಹಾಮನ ಹೆಂಡತಿಯಾಗಿದ್ದಳು; ಹೇಗೂ, ಆಕೆಯು ಆತನ ಮಲ-ಸಹೋದರಿ ಸಹ ಆಗಿದ್ದಳು, ಯಾಕೆಂದರೆ ಅವರಿಬ್ಬರ ತಂದೆ ಒಬ್ಬನೇ (ತೆರಹ) ಆಗಿದ್ದನು ಆದರೆ ತಾಯಿಯರು ಬೇರೆ ಆಗಿದ್ದರು (20:12). ಇಲ್ಲಿ ಪುನಃ, ಮೂಲಪಿತೃವು ತನ್ನ ನಂಬಿಕೆಯಲ್ಲಿ ಪಕ್ವವಿಲ್ಲದವನಾಗಿದ್ದನು ಎಂಬುದನ್ನು ಕಾಣುತ್ತೇವೆ ಯಾಕೆಂದರೆ ಆತನಿಗೆ ತನ್ನ ಹೆಂಡತಿಯ ಭದ್ರತೆಗಿಂತಲೂ ತನ್ನ ಸ್ವಂತ ಹಿತವೇ ಮುಖ್ಯವಾಗಿತ್ತು, ಆ ಕಾರಣದಿಂದಲೇ ಆತನು ಐಗುಪ್ತರಿಂದ ತಮ್ಮ ಸಂಬಂಧವನ್ನು ಮುಚ್ಚಿಟ್ಟುಕೊಳ್ಳಲು ಪ್ರಯತ್ನಿಸಿದನು. ಅವನ ಹೆಂಡತಿಯನ್ನು ಬೇರೊಬ್ಬನ ಹಾಸಿಗೆಗೆ ಕರೆದೊಯ್ಯಬಹುದು, ಅಥವಾ ಆಕೆಯ ಮೇಲೆ ದೌರ್ಜನ್ಯ ನಡೆಯಬಹುದು ಎಂಬುದರ ಬಗ್ಗೆ ಆತನು ಯಾವ ಕಳಕಳಿಯನ್ನೂ ತೋರಲಿಲ್ಲ. ಅಷ್ಟುಮಾತ್ರವಲ್ಲದೆ, ಆಕೆಯ ಗಂಡನ ಮೋಸತನದ ಕಾರಣದಿಂದಾಗಿ ಆಕೆಯ ಸದ್ಗುಣವನ್ನು ರಾಜಿ ಮಾಡಿಕೊಂಡರೆ ಆಕೆಯ ನಂಬಿಕೆ ಮತ್ತು ಆತ್ಮೀಕ ಜೀವಿತವು ಬದುಕುಳಿಯಬಲ್ಲದೋ ಇಲ್ಲವೋ ಎಂಬುದನ್ನು ಬಹುಶಃ ಆತನು ಯೋಚಿಸಲೇ ಇಲ್ಲ. ಅದರ ಜೊತೆಗೆ, ಈ ಪರದೇಶದಲ್ಲಿ ತನಗೆ ಹಾನಿಯನ್ನು ಮಾಡಲು ಪ್ರಯತ್ನಿಸುವ ಜನರಿಂದ ಕಾಪಾಡಬೇಕೆಂಬುದಾಗಿ ಅಬ್ರಹಾಮನು ಯೆಹೋವನನ್ನು ಕೇಳಿಕೊಳ್ಳಲಿಲ್ಲ. ಆತನು ತನ್ನ ಹೆಂಡತಿಯ ಕುರಿತು ಸುಳ್ಳು ಹೇಳುವೆನೆಂದಷ್ಟೇ ದೃಢನಿರ್ಧಾರ ಮಾಡಿಕೊಂಡಿದ್ದನು ಎಂಬುದು ಸ್ಪಷ್ಟವಾಗುತ್ತದೆ, ಆಕೆಯ ವಿಷಯದಲ್ಲಿ ಆತನಿಗೆ ತಂಗಿಯ ಮೇಲೆ ಅಣ್ಣನಿಗೆ ಇರುವ ರೀತಿಯ ಕಳಕಳಿಯಷ್ಟೇ ಇತ್ತು.

ಅಬ್ರಹಾಮನು ಸಾರಳ ಅಣ್ಣನೆಂದು ಹೇಳಿಕೊಳ್ಳುವದರಿಂದ ನಿಜಕ್ಕೂ ನಿರೀಕ್ಷಿಸಿದ್ದೇನೆಂದರೆ ವಿವಾಹಕ್ಕೆ ಹೆಣ್ಣನ್ನು ಕೇಳುವದಕ್ಕೆ ಪುರುಷರು ಬರುವದನ್ನು ಮತ್ತು ವಿವಾಹ ಪ್ರಸ್ತಾಪಗಳನ್ನು ತಡೆಯುವದಕ್ಕಾಗಿ ಆಗಿತ್ತು, ಅಂಥವುಗಳನ್ನು ತಾನು ಎಂದಿಗೂ ಅನುಮತಿಸಬೇಕಾಗಿ ಬರುವದಿಲ್ಲ ಎಂಬುದಷ್ಟೇ ಆಗಿತ್ತು ಎಂಬುದಾಗಿ ಕೆಲವರು ಆತನ ಕೃತ್ಯಗಳನ್ನು ಸಂಭಾವಿತವೆಂಬಂತೆ ತೋರುವಂತೆ ಮಾಡಲು ಪ್ರಯತ್ನಿಸುತ್ತಾರೆ. ಆತನು ಕ್ಷಾಮವು ಹೊರಟು ಹೋಗುವ ವರೆಗೂ ಅಲ್ಲಿ ಉಳಿದುಕೊಳ್ಳಬೇಕೆಂದು, ಮತ್ತು ಆ ಬಳಿಕ ತನ್ನ ಕುಟುಂಬವು ತಪ್ಪಿಸಿಕೊಂಡು ಪುನಃ ಕಾನಾನಿಗೆ ಹಿಂದಿರುಗಬಹುದೆಂದು ನಿರೀಕ್ಷಿಸಿದ್ದನು. ಹೇಗೂ, ಮೂಲಪಿತೃವಿನ ತಪ್ಪೂ ಏನೂ ಇರುವದಿಲ್ಲ ಎಂಬುದಾಗಿ ತೋರಿಸಿ ಕೊಡುವದಕ್ಕಾಗಿ ತರ್ಕವನ್ನು ಮಾಡುವದಕ್ಕೆ ವಾಕ್ಯದಲ್ಲಿ ಯಾವ ಆಧಾರವೂ ಇರುವದಿಲ್ಲ. ಅಬ್ರಹಾಮನು ತನ್ನನ್ನು ಕೊಲ್ಲುವದಕ್ಕೆ ಪ್ರಯತ್ನಿಸುವವರಿಂದ ರಕ್ಷಿಸಿಕೊಳ್ಳುವದಕ್ಕೋಸ್ಕರ ತಮ್ಮ ಸಂಬಂಧದ ಕುರಿತಾಗಿ ಸುಳ್ಳು ಹೇಳುವಂತೆ ತನ್ನ ಹೆಂಡತಿಯ ಮನವೊಲಿಸುವ ಮೂಲಕ ಹೇಡಿತನದಿಂದ ನಡೆದುಕೊಂಡನು ಎಂಬುದಾಗಿ ಚರಿತ್ರೆಯು ಸ್ಪಷ್ಟವಾಗಿ ಸೂಚಿಸುತ್ತದೆ.

**ವಚನಗಳು 14, 15.** ಅಬ್ರಹಾಮನು ಐಗುಪ್ತವನ್ನು ಪ್ರವೇಶಿಸುತ್ತಿದ್ದಂತೆ, ಆತನು ಸಂದೇಹ ಪಟ್ಟ ಪ್ರಕಾರವೇ **ಐಗುಪ್ತ್ಯರು ಅವನ ಸಂಗಡ ಇದ್ದ ಸ್ತ್ರೀಯನ್ನು ನೋಡಿ ಬಹು ಸುಂದರಿಯೆಂದರು**. **ಫರೋಹನ ಪ್ರಧಾನರು**[15] ಸಹ ಆಕೆಯ ಸೌಂದರ್ಯವನ್ನು ನೋಡಿ ಈ ಮಾಹಿತಿಯನ್ನು ಅರಸನಿಗೆ ಮುಟ್ಟಿಸಿದರು. ಅದರ ಫಲಿತವಾಗಿ, ಆಕೆಯನ್ನು **ಅರಮನೆಗೆ ಕರತರಿಸ**ಲಾಯಿತು.

ಅಬ್ರಹಾಮನ ಮನವಿಗೆ ಸಾರಳು ಏನು ಪ್ರತಿಕ್ರಿಯೆ ನೀಡಿದಳು ಎಂಬುದರ ಕುರಿತು ವಾಕ್ಯವು ಏನನ್ನೂ ನಮಗೆ ತಿಳಿಸುವದಿಲ್ಲ. ಆತನ ಮೋಸತನದ ಸಂಚಿನ ಬಗ್ಗೆ ಅವಳಿಗೆ ಏನು ಅನ್ನಿಸಿರಬಹುದು? ಆಕೆಯು ಅದನ್ನು ಅನುಮೋದಿಸಿದಳೋ ಮತ್ತು ಐಗುಪ್ತದ ಅಧಿಕಾರಿಗಳು ಆಕೆಯನ್ನು ಅರಸನ ಹೆಂಗಸರಿರುವ ಕೋಣೆಗೆ ಕರೆದು ತಂದಾಗ ಆಕೆಯು ಸಹಕರಿಸಿದಳೋ? ಆಕೆಯು ಮೌನವಾಗಿದ್ದದ್ದನ್ನು ನೋಡಿದರೆ, ಆಕೆಯು ತನ್ನ ಗಂಡನ ಪ್ರಾಣವನ್ನು ಉಳಿಸುವದಕ್ಕೋಸ್ಕರ ಈ ಕಳ್ಳಾಟದಲ್ಲಿ ಸಹಕರಿಸುವದಕ್ಕೆ ಒಪ್ಪಿದಳು ಎಂಬುದಾಗಿ ನಾವು ಯೋಚಿಸುವಂತೆ ಮಾಡುತ್ತದೆ, ಆದಾಗ್ಯೂ ತನ್ನನ್ನು ಬಳಸಿಕೊಳ್ಳಲಾಗುತ್ತಿದೆ ಎಂಬ ಅನಿಸಿಕೆ ಬಹುಶಃ ಆಕೆಗೆ ಆಗಿರಬಹುದು ಮತ್ತು ಆ ಪರಿಸ್ಥಿತಿಯಲ್ಲಿ ಆಕೆಯು ಅಸಹಾಯಕಳಾಗಿರಬಹುದು. ನಿಸ್ಸಂದೇಹವಾಗಿ, ಆಕೆಯು ಮದುವೆಯಾಗುವಂತೆ ಒತ್ತಾಯಿಸಲ್ಪಟ್ಟ ಸ್ವಲ್ಪವೂ ಪರಿಚಯವಿಲ್ಲದ ವ್ಯಕ್ತಿಯು ತನ್ನನ್ನು ಸೇರಿಕೊಳ್ಳುವದನ್ನು ಯೋಚಿಸಿದಾಗ ಆಕೆಗೆ ವೈಯಕ್ತಿಕವಾಗಿ ಹೇವರಿಕೆ ಉಂಟಾಗಿರಬಹುದು.

**ವಚನ 16.** ಈ ಮಧ್ಯದಲ್ಲಿ, ಈ ತಂಗಿ ಎಂದು ಹೇಳಿಕೊಳ್ಳುವವಳಿಗೋಸ್ಕರ,[16] ಅಬ್ರಹಾಮನಿಗೆ ಪರಿಹಾರವನ್ನು ಕೊಡುವದಕ್ಕೋಸ್ಕರ ಫರೋಹನು ಆತನಿಗೆ ದಾರಾಳವಾಗಿ **ಕುರಿದನಗಳೂ ಗಂಡು ಹೆಣ್ಣು ಕತ್ತೆಗಳೂ ದಾಸದಾಸಿಯರೂ** (ಅಥವಾ ಗುಲಾಮರನ್ನು) **ಒಂಟೆಗಳೂ** ಇವುಗಳನ್ನು ಬಹುಮಾನವಾಗಿ ಕೊಟ್ಟನು. ಇಲ್ಲಿ ಪಟ್ಟಿ ಮಾಡಲಾಗಿರುವ ಪ್ರಾಣಿಗಳು ಮತ್ತು ದಾಸರು ವೈಶಿಷ್ಟ್ಯವಾಗಿ ಶ್ರೀಮಂತ ವ್ಯಕ್ತಿಗಳಿಗೆ ಸಂಬಂಧಿಸಿದ್ದಾಗಿತ್ತು, ವಿಶೇಷವಾಗಿ ಮೂಲಪಿತೃಗಳ ಯುಗದಲ್ಲಿ ಅದು ಶ್ರೀಮಂತಿಕೆಗೆ ಸಂಬಂಧಿಸಿತ್ತು (ನೋಡಿರಿ 20:14; ಯೋಬ 1:3). ಇತಿಹಾಸದಲ್ಲಿನ ಈ ಆರಂಭಿಕ ಕಾಲದಲ್ಲಿ, ಒಬ್ಬ ವ್ಯಕ್ತಿಯ ಐಶ್ವರ್ಯವನ್ನು ನಿರ್ಧರಿಸುವಂಥ ಕಾರಣಾಂಶವು ಬ್ಯಾಂಕಿನಲ್ಲಿ ಎಷ್ಟು ಹಣವಿದೆ, ಷೇರುಗಳಲ್ಲಿ ಮತ್ತು ಬಾಂಡ್‌ಗಳಲ್ಲಿ ಹೂಡಿಕೆ ಇವುಗಳಾಗಿರಲಿಲ್ಲ. ಐಶ್ವರ್ಯವು ಪ್ರಾಥಮಿಕವಾಗಿ ಗೊರಸುಗಳಲ್ಲಿ ಇರುತ್ತಿತ್ತು; ಅಂದರೆ, ಒಬ್ಬನಲ್ಲಿ ಎಷ್ಟು ಪ್ರಾಣಿಗಳಿದ್ದವು ಮತ್ತು ಆ ಸಾಕು ಪಶುಗಳನ್ನು ಮೇಯಿಸಲು ಮತ್ತು ನೋಡಿಕೊಳ್ಳಲು ಎಷ್ಟು ಮಂದಿ ದಾಸರು ಇರುತ್ತಾರೆ ಎಂಬುದರ ಮೇಲೆ ಲೆಕ್ಕ ಮಾಡಲಾಗುತ್ತಿತ್ತು. ಇದರ ಆಧಾರದಲ್ಲಿ, ಅಬ್ರಹಾಮನು ಬಹಳ ಶ್ರೀಮಂತ ವ್ಯಕ್ತಿಯಾಗಿ ಬೆಳೆಯುತ್ತಿದ್ದನು. ಲೋಟನು ಸಹ ಶ್ರೀಮಂತನಾಗುತ್ತಲಿದ್ದನು, ಈ ಚರಿತ್ರೆಯು ಲೋಟನ ಕುರಿತು ಪ್ರಸ್ತಾಪಿಸುವದಿಲ್ಲವಾದರೂ, ಆತನು ಸಹ ಐಗುಪ್ತದಲ್ಲಿ ಅಬ್ರಹಾಮನ ಸಂಗಡ ಇದ್ದಿರಬಹುದಾಗಿದೆ (ನೋಡಿರಿ 13:1). ಮುಂದಿನ ಅಧ್ಯಾಯದಲ್ಲಿ, ಈ ಇಬ್ಬರು ವ್ಯಕ್ತಿಗಳಿಗಿದ್ದ ಮಂದೆಗಳು ಮತ್ತು ಹಿಂಡುಗಳು ಎಷ್ಟೊಂದು ದೊಡ್ಡದಾಗಿದ್ದವೆಂದರೆ ಅವುಗಳಿಗೆ ಮೇಯುವದಕ್ಕೆ ಸಾಕಾಗುವಷ್ಟು ಹುಲ್ಲು ಬೇಕು ಎನ್ನುವ ವಿಷಯವಾಗಿ ಅವರಿಬ್ಬರ ಕುರಿ ಕಾಯುವವರ ನಡುವೆ ವ್ಯಾಜ್ಯ ಉಂಟಾಗಿತ್ತು ಎಂದು ಕಂಡು ಬರುತ್ತದೆ. ಕ್ಷಾಮದ ವೇಳೆಯಲ್ಲಿ ಕಾನಾನಿನೊಳಗೆ ಅಬ್ರಹಾಮ ಮತ್ತು ಆತನ ದಾಸರಿಗೆ ಬದುಕುವದಕ್ಕೆ ಸಾಕಷ್ಟು ನೀರು ಇರಲಿಲ್ಲವಾದಲ್ಲಿ, ಆತನ ಅಣ್ಣನ ಮಗನು ಅವನೊಂದಿಗೆ ಐಗುಪ್ತಕ್ಕೆ ಹೋಗದೆಯೇ ಆತನ ಮಂದೆಗಳು, ಹಿಂಡುಗಳು, ಮತ್ತು ಜನರು ಬದುಕುಳಿದು ಅಧಿಕಗೊಂಡಿರುವದಕ್ಕೆ ಹೇಗೆ ಸಾಧ್ಯವಾಗುತ್ತಿತ್ತು?[17]

ಫರೋಹನು ಅಬ್ರಹಾಮನಿಗೆ ಕೊಟ್ಟ ಬಹುಮಾನಗಳ ಭಾಗವಾಗಿ "ಒಂಟೆಗಳು" ಇದ್ದವೆಂದು ಪ್ರಸ್ತಾಪಿಸಿರುವದನ್ನು ಬೈಬಲಿನ ಕೆಲವು ಪಂಡಿತರು ಕಾಲಾಭಾಸದಿಂದ ಕೂಡಿದೆ ಎಂದು ಅಭಿಪ್ರಾಯ ಪಡುತ್ತಾರೆ ಯಾಕೆಂದರೆ ಕ್ರಿ.ಪೂ. ಎರಡನೆಯ ಸಹಸ್ರಮಾನದ ಕಡೆಯ ಭಾಗದ ತನಕವೂ ಪ್ರಾಚೀನ ಜಗತ್ತಿನಲ್ಲಿ ಅಂಥ ಪ್ರಾಣಿಗಳು ಸಾಮಾನ್ಯ ಬಳಕೆಯಲ್ಲಿರಲಿಲ್ಲ

ಎಂಬುದೆ. ಹೇಗೂ, ಇರಾನ್‌ನಲ್ಲಿ ಕ್ರಿ.ಪೂ. 2700ರ ಹೊತ್ತಿಗೆ, ಇಂಡಸ್ ಕಣಿವೆಗಳೊಳಗೆ ಕ್ರಿ.ಪೂ. 2300ರ ಹೊತ್ತಿಗೆ, ಮತ್ತು ದಕ್ಷಿಣ ಅರಬ್ಬಿಯದಲ್ಲಿ ಕ್ರಿ.ಪೂ. ಎರಡನೆಯ ಸಹಸ್ರಮಾನದ ಆರಂಭದ ಹೊತ್ತಿಗೆ ಒಂಟೆಗಳನ್ನು ಸಾಕಲಾಗುತ್ತಿತ್ತು ಎಂಬುದಕ್ಕೆ ಈಗ ಕೆಲವು ಪುರಾವೆಗಳು ದೊರೆತಿರುತ್ತವೆ. ಅಷ್ಟುಮಾತ್ರವಲ್ಲದೆ, ಪ್ರಾಚೀನ ಕಾನಾನ್ಯರ ನೆಗೆವ್ (ದಕ್ಷಿಣ) ಪ್ರಾಂತ್ಯದೊಳಗೆ, ಅರಾದ್‌ನಲ್ಲಿ ಕ್ರಿ.ಪೂ. 2900ರಷ್ಟು ಹಿಂದಿನ ಮಾನವ ಸನ್ನಿವೇಶದಲ್ಲಿ ಒಂಟೆಗಳ ಮೂಳೆಗಳು ದೊರೆತಿರುತ್ತವೆ, ಮತ್ತು ಸುಮಾರು ಕ್ರಿ,ಪೂ. 1900ರ[18] ಕಾಲಕ್ಕೆ ಸೇರಿದ ಮೂಳೆಗಳು ಬಿರ್ ರೆಸಿಸಿಮ್ ಎಂಬಲ್ಲಿ ದೊರೆತಿವೆ. ಈ ನಂತರದ ಕಾಲದ ದಿನಾಂಕವು ಅಬ್ರಹಾಮನ ಕಾಲದ ನಂತರ ಬಹಳ ಸುದೀರ್ಘವೇನೂ ಆಗಿರುವದಿಲ್ಲ. ಆರಂಭಿಕ ಚರಿತ್ರೆಗಳೊಳಗೆ ಒಂಟೆಗಳ ಪ್ರಸ್ತಾಪವು ವಿರಳವಾಗಿರುವದಕ್ಕೆ ಕಾರಣ ಬಹುಶಃ ಅವುಗಳು ಶ್ರೀಮಂತರಿಂದ ಮಾತ್ರವೇ ಖರೀದಿಸಬಲ್ಲ ವಿಲಾಸಿ ಸಂಗತಿಗಳಾಗಿದ್ದಿರಬಹುದು. ಹಾಗಿರುವದೇ ಆಗಿರುವಲ್ಲಿ, ಆದಿಕಾಂಡದಲ್ಲಿ ಅವುಗಳನ್ನು ಆರಂಭ ಕಾಲದಲ್ಲಿಯೇ ಪ್ರಸ್ತಾಪಿಸಿರುವುದು ಮೂಲಪಿತೃಗಳಿಗಿದ್ದ ಐಶ್ವರ್ಯದ ಬಗ್ಗೆ ಒತ್ತಿ ಹೇಳುವದಾಗಿದೆ (ನೋಡಿರಿ 13:2; 24:10; 26:12–14; 31:34).

## ಮೋಸತನದ ನಿಮಿತ್ತ ಉಂಟಾದ ಪರಿಣಾಮಗಳು (12:17-20)

**[17]ಆದರೆ ಯೆಹೋವನು ಫರೋಹನಿಗೂ ಅವನ ಮನೆಯವರಿಗೂ ಅಬ್ರಾಮನ ಹೆಂಡತಿಯಾದ ಸಾರಯಳ ನಿಮಿತ್ತ ಬಹಳ ಉಪದ್ರವಗಳನ್ನು ಉಂಟುಮಾಡಿ ಬಾಧಿಸಿದನು. [18]ಆಗ ಫರೋಹನು ಅಬ್ರಾಮನನ್ನು ಕರಿಸಿ - ಯಾಕೆ ಹೀಗೆ ಮಾಡಿದೆ? ಹೆಂಡತಿಯೆಂದು ಯಾಕೆ ನನಗೆ ತಿಳಿಸಲಿಲ್ಲ? [19]ತಂಗಿಯೆಂದು ಯಾಕೆ ಹೇಳಿದೆ? ಹೀಗೆ ಹೇಳಿದ್ದರಿಂದ ಆಕೆಯನ್ನು ಹೆಂಡತಿಯಾಗಲಿಕ್ಕೆ ತೆಗೆದುಕೊಂಡೆನಲ್ಲಾ. ಇಗೋ ನಿನ್ನ ಹೆಂಡತಿ; ಕರೆದುಕೊಂಡು ಹೋಗು ಎಂದು ಹೇಳಿ [20]ಅವನ ವಿಷಯವಾಗಿ ತನ್ನ ಸೇವಕರಿಗೆ ಅಪ್ಪಣೆಕೊಡಲು ಅವರು ಅಬ್ರಾಮನನ್ನೂ ಅವನ ಹೆಂಡತಿಯನ್ನೂ ಅವನಿಗಿದ್ದ ಸರ್ವಸ್ವಸಹಿತವಾಗಿ ಸಾಗಕಳುಹಿಸಿದರು.**

**ವಚನ 17.** ಕಥೆಯಲ್ಲಿನ ಈ ಹಂತದಲ್ಲಿ, ದೇವರು ಮಧ್ಯಪ್ರವೇಶಿಸಿದನು ಮತ್ತು **ಫರೋಹನಿಗೂ ಅವನ ಮನೆಯವರಿಗೂ ... ಬಹಳ ಉಪದ್ರವಗಳನ್ನು ಉಂಟುಮಾಡಿ ಬಾಧಿಸಿದನು** ಯಾಕೆಂದರೆ ಆತನು **ಅಬ್ರಾಮನ ಹೆಂಡತಿಯಾದ ಸಾರಯಳನ್ನು** ತೆಗೆದುಕೊಂಡಿದ್ದನು. ಫರೋಹನ ಮನೆಯವರ ವಿರುದ್ಧವಾಗಿ ಯೆಹೋವನು ಬಳಸಿದ ಉಪದ್ರವಗಳು ಯಾವ ಸ್ವಭಾವದವುಗಳಾಗಿದ್ದವು ಎಂಬುದರ ಕುರಿತು ಬೈಬಲ್ ತಿಳಿಸುವದಿಲ್ಲ. ಇಬ್ರಿಯ ಪದ נֶגַע (*ನೆಗಾ*) ಎಂಬುದು ಯಾವಾಗಲೂ ಚರ್ಮರೋಗ ಅಥವಾ ಕುಷ್ಟದಂತಹ ಒಬ್ಬರಿಂದೊಬ್ಬರಿಗೆ ಹರಡುವ ವ್ಯಾಧಿಗಳನ್ನು ಸೂಚಿಸುತ್ತದೆ (ಯಾಜಕಕಾಂಡ 13; 14). ಹೇಗೂ, ಕೆಲವು ಸಾರಿ ಉಪದ್ರವಗಳು ದೈವಿಕ ದಂಡನೆಯ ನೇರವಾದ ಫಲಿತವಾಗಿ ಬರುತ್ತವೆ, ಮೋಶೆಯ ಕಾಲದ ವೇಳೆ ಐಗುಪ್ತದಲ್ಲಿ ಸಂಭವಿಸಿದಂತೆ (ವಿಮೋಚನಕಾಂಡ 11:1) ಮತ್ತು ಅರಸನಾದ ಉಜ್ಜೀಯನ ಮೇಲೆ ದೇವರು ಬರಮಾಡಿದ ಕುಷ್ಟರೋಗದ ರೀತಿಯಲ್ಲಿಯೇ (2 ಅರಸು 15:5[19]).

ಫರೋಹನು ತಾನು ಅಬ್ರಹಾಮನ ಹೆಂಡತಿಯನ್ನು ತೆಗೆದುಕೊಂಡದ್ದರಿಂದಾಗಿ ಶಾಪವನ್ನು ಬರಮಾಡುತ್ತಿರುವಂಥ ಒಬ್ಬ ದೇವರಿಂದ ಹೀಗಾಗುತ್ತಿದೆ ಎಂದು ನಂಬಿದನೆಂದು ಸ್ಪಷ್ಟವಾಗುತ್ತದೆ. ಫರೋಹನು ಸ್ವತಃ ತಾನೇ ಒಬ್ಬ ದೇವರೆಂದು ನಂಬಿದ್ದನಾದ್ದರಿಂದ,

ಅಬ್ರಹಾಮ ಹಾಗೂ ಸಾರಳರ ಕಾರಣದಿಂದಾಗಿ ಒಬ್ಬ ಶಕ್ತಿಶಾಲಿ ದೇವರು ಅವನನ್ನು ದಂಡಿಸುತ್ತಿದ್ದಾನೆಂಬ ಮನವರಿಕೆಯು ಆತನಿಗಾಗದೆ ಇದ್ದಿದ್ದರೆ ಆತನು ಅವರಿಗೆ ಸ್ಪಂದಿಸಿರುತ್ತಿರಲಿಲ್ಲ. ಈ ವಿಷಯದಲ್ಲಿ ಆತನ ಮನವರಿಕೆಯು ಸರಿಯಾಗಿಯೇ ಇತ್ತು, ಯಾಕೆಂದರೆ ದೇವರು ಅಬ್ರಹಾಮನಿಗೆ ಹೀಗೆ ವಾಗ್ದಾನ ಮಾಡಿದ್ದನು, "... ನಿನ್ನನ್ನು ಶಪಿಸುವವರನ್ನು ಶಪಿಸುವೆನು" (12:3). ಕನಿಷ್ಠ ಈ ಸನ್ನಿವೇಶದಲ್ಲಿ, ಫರೋಹನು ಅಬ್ರಹಾಮನ ಸಂಗಡ ಸಮಾಧಾನದ ಸಂಬಂಧದಲ್ಲಿರಲಿಲ್ಲ, ಯಾಕೆಂದರೆ ಅವನು ಆತನ ಹೆಂಡತಿಯನ್ನು ಕಸಿದುಕೊಂಡಿದ್ದನು. ಆದ್ದರಿಂದ ಅವನು ದೈವಿಕ ಶಾಪಗಳನ್ನು (ಉಪದ್ರವಗಳನ್ನು) ಅನುಭವಿಸಲಿದ್ದನು.

**ವಚನಗಳು 18, 19.** ವಿವರಗಳು ಕೊಡಲ್ಪಟ್ಟಿಲ್ಲವಾದರೂ, ಅರಸನು ತನ್ನ ಮನೆಯ ಮೇಲೆ ಬಂದಿರುವ ಶಾಪಗಳಿಗೆ ಜವಾಬ್ದಾರನು ಅಬ್ರಹಾಮನ ದೇವರೇ ಎಂಬ ನಿರ್ಣಯಕ್ಕೆ ಯಾವದೋ ಒಂದು ರೀತಿಯಲ್ಲಿ ಬಂದಿದ್ದನು (12:17). ಆದದರಿಂದ, **ಫರೋಹನು ಅಬ್ರಾಮನನ್ನು ಕರಿಸಿದನು.** ತನ್ನನ್ನು ಅಪರಾಧದಿಂದ ಮುಕ್ತಗೊಳಿಸಿಕೊಳ್ಳಲು ಮತ್ತು ಸಕಲ ದೋಷವನ್ನು ಮೂಲಪಿತೃವಿನ ಮೇಲೆಯೇ ಹಾಕುವದಕ್ಕೆ ಬಯಸಿದವನಾಗಿ, ಆತನು ಮೂರು ಪ್ರಶ್ನೆಗಳನ್ನು ಕೇಳಿದನು:

1. **ಯಾಕೆ ಹೀಗೆ ಮಾಡಿದೆ?**
2. **ಹೆಂಡತಿಯೆಂದು ಯಾಕೆ ನನಗೆ ತಿಳಿಸಲಿಲ್ಲ?**
3. **ತಂಗಿಯೆಂದು ಯಾಕೆ ಹೇಳಿದೆ?**

ಅಬ್ರಹಾಮನು ಈ ಪ್ರಶ್ನೆಗಳಿಗೆ ಉತ್ತರಿಸುವದಕ್ಕೆ ಪ್ರಯತ್ನಿಸಿದನೋ? ಆತನು ಪ್ರಯತ್ನಿಸಿದ್ದು ನಿಜ, ಆತನ ಉತ್ತರಗಳು ನಮಗೋಸ್ಕರ ಇಲ್ಲಿ ಬರೆಯಲ್ಪಟ್ಟಿರುವದಿಲ್ಲ.[20] ಖಂಡಿತವಾಗಿಯೂ, ಸುಳ್ಳು ಹೇಳುವಂತೆ ಆತನು ಸಾರಳ ಮನವೊಲಿಸಿದ್ದನು ಮತ್ತು ಐಗುಪ್ತದ ಅರಸನಿಗೆ ವಂಚನೆ ಮಾಡುವದರಲ್ಲಿ ಆತನು ವೈಯಕ್ತಿಕವಾಗಿ ಭಾಗಿಯಾಗಿದ್ದನು. ಇನ್ನೊಂದೆಡೆಯಲ್ಲಿ, ಈ ಸಂದರ್ಭದಲ್ಲಿ ಫರೋಹನು ಗೊತ್ತಿಲ್ಲದವನಾಗಿ ನಡೆದುಕೊಂಡನಾದರೂ, ಆತನು ಯಾವ ಅರ್ಥದಲ್ಲಿಯೂ ಈ ವಿಷಯವಾಗಿ ನಿರಪರಾಧಿಯಾಗಿರಲಿಲ್ಲ. ಫರೋಹನು ತನಗೆ ಏನೂ ಗೊತ್ತಿಲ್ಲವೇನೋ ಎಂಬಂತೆ ನಡೆದುಕೊಂಡನಾದಾಗ್ಯೂ, ಆತನು ಸಹ ಅಪರಾಧದಲ್ಲಿ ಭಾಗಿಯಾಗಿದ್ದನು. ಪ್ರಾಚೀನ ಜಗತ್ತಿನಲ್ಲಿ, ನಿರಂಕುಶವಾದಿ ಪ್ರಭುಗಳ ಇಷ್ಟಗಳನ್ನು ನಿರಾಕರಿಸುವದಕ್ಕೆ ಸಾಧ್ಯವಿರಲಿಲ್ಲ; ಮತ್ತು ಅಬ್ರಹಾಮನು ತನ್ನ ಪ್ರಾಣಕ್ಕೋಸ್ಕರ ಅಂಜಿದವನಾಗಿ ಸುಳ್ಳು ಹೇಳಿದ್ದನು. ಅಷ್ಟುಮಾತ್ರವಲ್ಲದೆ, ಅಬ್ರಹಾಮನು ಸಾರಳೊಂದಿಗಿರುವ ತನ್ನ ನಿಜವಾದ ಸಂಬಂಧವನ್ನು ತಿಳಿಸಿದ್ದರೂ ಅದು ಅವನಿಗೆ ಯಾವದೇ ಸಕಾರಾತ್ಮಕ ವ್ಯತ್ಯಾಸವನ್ನು ಮಾಡಿರಲಿಕ್ಕೆ ಸಾಧ್ಯವಿರಲಿಲ್ಲ. ಐಗುಪ್ತರು ಪರದೇಶದವರೊಂದಿಗೆ ಮತ್ತು ಅವರ ಹೆಂಡತಿಯರೊಂದಿಗೆ ಹೇಗೆ ನಡೆದುಕೊಳ್ಳುತ್ತಿದ್ದರೆಂಬುದಕ್ಕೆ ಏನಾದರೂ ಆಧಾರವಿದ್ದದ್ದೇ ಆದಲ್ಲಿ, ಮೂಲಪಿತೃವು ಫರೋಹನಿಗೆ ಭಯ ಪಡುವದು ನ್ಯಾಯಯುತವಾದದ್ದೆಂದು ಹೇಳಬಹುದು. ಸಮಸ್ಯೆಯು ಏನಾಗಿತ್ತೆಂದರೆ ಅಬ್ರಹಾಮನ ನಂಬಿಕೆಯು ಇನ್ನೂ ಬಲಹೀನತೆಯಲ್ಲಿಯೇ ಇತ್ತು; ತನ್ನ ಸಂತತಿಯವರ ಮೂಲಕವಾಗಿ ಭೂಮಿಯ ಮೇಲಿರುವ ಸಕಲ ಜನಾಂಗಗಳನ್ನು ಆಶೀರ್ವದಿಸಬೇಕೆಂಬ (12:3) ಯೆಹೋವನ ಯೋಜನೆಯನ್ನು ಭಂಗಪಡಿಸುವದರಿಂದ ಫರೋಹನನ್ನು ಆತನು ತಡೆಯಬಲ್ಲನು ಎಂಬುದಾಗಿ ಆತನು ಯೆಹೋವನಲ್ಲಿ

ಭರವಸವನ್ನಿಡುವದಕ್ಕೆ ಶಕ್ತನಾಗಲಿಲ್ಲ.

ಅಬ್ರಹಾಮನು ಫರೋಹನ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನವನ್ನು ಮಾಡಿದ್ದಾಗ್ಯೂ, ಅರಸನಿಗೆ ನೆಪಗಳನ್ನು ಕೇಳಿಸಿಕೊಳ್ಳುವ ಭಾವಸ್ಥಿತಿಯು ಇರಲಿಲ್ಲ. ಆತನು ಈಗಾಗಲೇ ಈ ಪರದೇಶದವನಿಗೆ ಮಂದೆಗಳನ್ನು, ಹಿಂಡುಗಳನ್ನು, ಮತ್ತು ದಾಸರನ್ನು ಕೊಟ್ಟು ಶ್ರೀಮಂತಗೊಳಿಸಿದ್ದನು; ಈಗ ಆತನಿಂದಾಗಿ ಇವನು ಅವಮಾನಕ್ಕೆ ಗುರಿಯಾಗಿದ್ದನು ಮತ್ತು ಆತನ ದೇವರಿಂದಾಗಿ ಉಪದ್ರವಕ್ಕೆ ಪಾತ್ರನಾಗಿದ್ದನು. ಆತನು ಅವಿನಯದಿಂದ ಹೀಗೆ ಹೇಳಿದನು, **ಇಗೋ ನಿನ್ನ ಹೆಂಡತಿ; ಕರೆದುಕೊಂಡು ಹೋಗು.** ಫರೋಹನು ಪ್ರಾಣಿಗಳನ್ನಾಗಲಿ ಮತ್ತು ದಾಸರನ್ನಾಗಲಿ ಹಿಂದಿರುಗಿಸುವಂತೆ ಅಬ್ರಹಾಮನಿಗೆ ಹೇಳಲಿಲ್ಲ, ಬಹುಶಃ ದೇವರಿಂದ ಇನ್ನಷ್ಟು ಉಪದ್ರವಗಳು ಬರಬಹುದೆಂಬ ಹೆದರಿಕೆಯ ಕಾರಣದಿಂದ ಆಗಿರಬಹುದು.

**ವಚನ 20. ಫರೋಹ**ನ ಪ್ರಕಾರವಾಗಿಯಾದರೋ, ಉತ್ತಮವಾದ ಕ್ರಮವೆಂದರೆ ಅಬ್ರಹಾಮನನ್ನು ಆದಷ್ಟು ಶೀಘ್ರದಲ್ಲಿ ಐಗುಪ್ತದಿಂದ ಹೊರಗೆ ಕಳುಹಿಸುವದೇ ಆಗಿತ್ತು. ಆದದರಿಂದ, ಆತನು **ತನ್ನ ಸೇವಕರಿಗೆ ಅಪ್ಪಣೆಕೊಡಲು** ಅವರು ಮೂಲಪಿತೃವನ್ನು **ಅವನ ಹೆಂಡತಿಯನ್ನೂ ಅವನಿಗಿದ್ದ ಸರ್ವಸ್ವಸಹಿತವಾಗಿ** ದೇಶದಿಂದ ಹೊರಕ್ಕೆ **ಸಾಗಕಳುಹಿಸಿದರು**. ಅಬ್ರಹಾಮನ ಸ್ವತ್ತುಗಳಲ್ಲಿ ಆತನು ಫರೋಹನಿಂದ ಪಡೆದುಕೊಂಡಿದ್ದ ಸಮೃದ್ಧಿಯಾದ ಬಹುಮಾನಗಳು ಸೇರಿದ್ದವು (12:16).

# ಅನ್ವಯಿಸುವಿಕೆ

## ದೇವರು ಅಬ್ರಹಾಮನನ್ನು ಕರೆದದ್ದು (12:1-9)

ಗಲಾತ್ಯ 3:8ರಲ್ಲಿ ಅಪೊಸ್ತಲನಾದ ಪೌಲನು ಹೇಳಿದ್ದೇನೆಂದರೆ "ಶಾಸ್ತ್ರವು ಮೊದಲೇ ಕಂಡು ಅಬ್ರಹಾಮನಿಗೆ ... ಶುಭವರ್ತಮಾನವನ್ನು ಮುಂಚಿತವಾಗಿಯೇ ತಿಳಿಸಿತು." ಯೇಸುವು ಲೋಕಕ್ಕೆ ಬರುವ ತನಕವೂ "ಶುಭವಾರ್ತೆ"ಯೇ ಇಲ್ಲದಿರುವಾಗ ಇದು ಹೇಗೆ ಸಾಧ್ಯ? ಉತ್ತರವು "ಶುಭವಾರ್ತೆ" ಎಂಬುದರ ಮೂಲಭೂತ ಅರ್ಥದಲ್ಲಿರುತ್ತದೆ. ಗ್ರೀಕ್ ಪದವು εὐαγγελίζομαι *(ಇವಾಂಜೆಲ್ಯೆಝೋಮಾಯ್)* ಎಂದಾಗಿದ್ದರೆ, ಅದಕ್ಕೆ ಸಂಬಂಧಿಸಿದ ಇಬ್ರಿಯ ಪದವು בָּשַׂר (*ಬಾ ಸಾರ್*); ಇವೆರಡೂ ಪದಗಳು ಶುಭ ಸುದ್ದಿ ಅಥವಾ ಸಂತೋಷದ ಸುದ್ದಿ ಸಾರುವದನ್ನು ಸೂಚಿಸುತ್ತವೆ.[21]

ಹಳೆಯ ಒಡಂಬಡಿಕೆಯ ಲೌಕಿಕವಾದ ಸನ್ನಿವೇಶಗಳಲ್ಲಿ, *ಬಾ ಸಾರ್* ಪದವು ಸಾಮಾನ್ಯವಾಗಿ ಯುದ್ಧವೊಂದರಲ್ಲಿ ಜಯ ಗಳಿಸಿದ್ದರ ಶುಭ ಸುದ್ದಿಯನ್ನು ಸೂಚಿಸುತ್ತದೆ (1 ಸಮುವೇಲ 31:9; 2 ಸಮುವೇಲ 1:20; 18:19, 20). ಹೇಗೂ, ದೈವಶಾಸ್ತ್ರೀಕ ಸನ್ನಿವೇಶದಲ್ಲಿ, ದೇವರು ಯಾರು ಮತ್ತು ಆಶೀರ್ವದಿಸಲು, ರಕ್ಷಿಸಲು, ಮತ್ತು ಬಾಧೆಗೊಳಗಾಗಿರುವ ತನ್ನವರನ್ನು, ನಾಶನದಲ್ಲಿರುವ, ಪಾಪಭರಿತ ನರನ್ನು ವಿಮೋಚಿಸುವದಕ್ಕೆ ಏನು ಮಾಡುತ್ತಾನೆ ಎಂಬುದರ ಶುಭವಾರ್ತೆಯಾಗಿರುತ್ತದೆ (ಯೆಶಾಯ 52:7; 61:1).

ದೇವರು ಅಬ್ರಹಾಮನಿಗೆ ಶುಭವಾರ್ತೆಯನ್ನು (ಸುವಾರ್ತೆಯನ್ನು) ಸಾರಿದಾಗ, ಸಂದೇಶವು ಮೂಲಪಿತೃವಿಗೆ, ಆತನ ಸಂತತಿಯವರಿಗೆ, ಮತ್ತು ಅಂತಿಮವಾಗಿ ಲೋಕದಲ್ಲಿರುವ ಸಕಲ ಜನಾಂಗಗಳಿಗೆ ವಾಗ್ದಾನ ಮಾಡಿದ ಆಶೀರ್ವಾದಗಳಿಗೆ ಸಂಬಂಧ ಪಟ್ಟಿತ್ತು (12:2, 3). ಅಬ್ರಹಾಮನಿಗೆ ಸಾರಸಲ್ಪಟ್ಟ ಸುವಾರ್ತೆಯ ಯಾವ ಅಂಶಗಳು ಯಾವವು

ಆಗಿದ್ದವು?

*ದೇವರ ಕರೆಯುವಿಕೆಯು ಕೃಪೆಯಿಂದ ಆಗಿತ್ತು.* ದೇವರು ಅಬ್ರಹಾಮನನ್ನು ಆತನು ದೇವಭಕ್ತಿಯುಳ್ಳವನು ಮತ್ತು ಭೂಮಿಯ ಮೇಲೆ ನೀತಿವಂತನಾಗಿದ್ದನು ಎಂಬುದಕ್ಕೋಸ್ಕರ ಕರೆದಿರಲಾರನು. ಈ ಕರೆಯುವಿಕೆಯು ಮೂಲಪಿತೃವು, ಮೋಶೆಯ ಧರ್ಮಶಾಸ್ತ್ರವು ಸೀನಾಯಿ ಪರ್ವದಲ್ಲಿ ಇಸ್ರಾಯೇಲ್ಯರಿಗೆ ಕೊಡಲ್ಪಡುವದಕ್ಕೆ ನೂರಾರು ವರ್ಷಗಳ ಮುಂಚೆಯೇ ಅದನ್ನು ಸಂಪೂರ್ಣವಾಗಿ ಕೈಕೊಂಡು ನಡೆದಿದ್ದನು ಎಂಬ ಕಾರಣಕ್ಕಾಗಿಯೂ ಆಗಿರಲಿಲ್ಲ.

ದಾಖಲೆಯು ಸ್ಪಷ್ಟವಾಗಿರುತ್ತದೆ: ಅಬ್ರಹಾಮನಿಗಾಗಲಿ ಆತನ ಕುಟುಂಬಕ್ಕಾಗಿ ಸತ್ಯ ದೇವರ ಕುರಿತು ಅಥವಾ ಆತನ ಧರ್ಮಶಾಸ್ತ್ರದ ಕುರಿತು ಏನೂ ಗೊತ್ತಿರಲಿಲ್ಲ. ವಾಸ್ತವಿಕದಲ್ಲಿ, ಯೆಹೋಶುವನು ಯೂಫ್ರೇಟಿಸ್ ನದಿಯ ಆಚೆಯ ಸೀಮೆಗಳಲ್ಲಿ ವಾಸಿಸುತ್ತಿದ್ದ ಇಸ್ರಾಯೇಲ್ಯರ ಪೂರ್ವಜರನ್ನು ಉಲ್ಲೇಖಿಸುವ ವೇಳೆಯಲ್ಲಿ, ಆತನು ಹೀಗೆ ಹೇಳಿದನು, "ಅಬ್ರಹಾಮ್, ನಾಹೋರ್ ಎಂಬವರ ತಂದೆಯಾದ ತೆರಹ ಮೊದಲಾದ ನಿಮ್ಮ ಮೂಲ ಪುರುಷರು ... ಅನ್ಯದೇವತೆಗಳನ್ನು ಪೂಜಿಸುತ್ತಿದ್ದರು" (ಯೆಹೋಶುವ 24:2). ಸರಳವಾಗಿ ಹೇಳುವದಾದರೆ, ಅವರು ಸಹ ದಕ್ಷಿಣ ಮೆಸಪೋತಾಮ್ಯದಲ್ಲಿ ಅವರ ಸುತ್ತಲಿರುವ ಮಿಕ್ಕ ಎಲ್ಲಾ ಜನರ ಹಾಗೆಯೇ ವಿಗ್ರಹಾರಾಧಕರಾಗಿದ್ದರು. ಆದದರಿಂದ, ಯೆಹೋವನು ಆತನನ್ನು ಕರೆದದ್ದು ಕೇವಲ ಕೃಪೆಯ (ಅರ್ಹವಲ್ಲದಿದ್ದರೂ ಸಿಕ್ಕ ಕಟಾಕ್ಷ) ಮೇಲೆ ಮಾತ್ರವೇ ಆಧಾರವಾಗಿತ್ತು; ಅದು ಅಬ್ರಹಾಮನು ಏನಾಗಿದ್ದನು ಅಥವಾ ದೇವರ ವಿಶೇಷ ಕಟಾಕ್ಷವನ್ನು ಪಡೆಯಲಿಕ್ಕೆ ಏನು ಮಾಡಿದ್ದಾನೆ ಎಂಬುದರ ಫಲಿತವಾಗಿರಲಿಲ್ಲ (ರೋಮಾ 4:1-5). ಅಬ್ರಹಾಮನು ತನ್ನ ಕೃಪೆ ಮತ್ತು ಆಶೀರ್ವಾದಗಳಿಂದಾಗಿ ಮುಂದೆ ಯಾವ ರೀತಿಯಲ್ಲಿ ಮಾರ್ಪಟ್ಟು ತನ್ನ ವಂಶದವರಿಗೆ ಕಲಿಸಿ ಹಸ್ತಾಂತರಿಸುವನು ಎಂಬುದು ದೇವರಿಗೆ ಗೊತ್ತಿತ್ತು (18:19).

ಹಾಗೆಯೇ ಈ ದಿನವೂ ಇರುತ್ತದೆ: ದೇವರು ಪಾಪಿಗಳನ್ನು ಕರೆಯುವುದು ಆತನ ಕೃಪೆಯ ಮೂಲಕವೇ ಆಗಿದೆ (2 ಥಸಲೋನಿಕ 2:13, 14), ಮತ್ತು ನಾವು ಯಾರು ಅಥವಾ ಏನು ಮಾಡಿದ್ದೇವೆ ಎಂಬ ಯಾವದೇ ಅರ್ಹತೆಯ ಮೇಲೆ ಆಧಾರವಾಗಿರುವದಿಲ್ಲ. ಅದು ಕಡ್ಡಾಯವಾಗಿ ನಂಬಿಕೆಯ ಮೂಲಕ ಕೃಪೆಯಿಂದಲೇ ಬರುವದಾಗಿದೆ (ಎಫೆಸ 2:8, 9), ಹೀಗೆ ನಾವು ಕ್ರಿಸ್ತನ ಸಾರೂಪ್ಯವುಳ್ಳವರಾಗಿ ರೂಪಾಂತರಗೊಳ್ಳುವೆವು (2 ಕೊರಿಂಥ 3:18). ಕ್ರಿಸ್ತನಲ್ಲಿರುವ ನೂತನ ಸೃಷ್ಟಿಗಳಾಗಿ (2 ಕೊರಿಂಥ 5:17), ನಾವು ಲೋಕಕ್ಕೆ ಆಶೀರ್ವಾದದ ಸಾಧನಗಳಾಗಿರಬೇಕು, ಕರ್ತನ ಬೆಳಕು ನಮ್ಮ ಮೂಲಕ ಪ್ರಕಾಶಿಸಬೇಕು ಮತ್ತು ಜನರು ದೇವರನ್ನು ಮಹಿಮೆ ಪಡಿಸುವಂತೆ ನಡಿಸುವ ಹಾಗೆ ಸತ್ಕಾರ್ಯಗಳನ್ನು ಮಾಡುವವರಾಗಿರಬೇಕು (ಮತ್ತಾಯ 5:16; ಎಫೆಸ 2:10).

*ದೇವರ ಕರೆಯುವಿಕೆಯು ನಂಬಿಕೆಯನ್ನು ಹುಟ್ಟಿಸಿತು.* ಇಬ್ರಿಯರಿಗೆ ಪತ್ರಿಕೆಯ ಲೇಖಕನು ಘೋಷಿಸಿದ್ದೇನೆಂದರೆ "ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ" (ಇಬ್ರಿಯ 11:6). ಅಬ್ರಹಾಮನಿಗೆ ಒಬ್ಬನೇ ಸತ್ಯ ದೇವರು ಪ್ರತ್ಯಕ್ಷನಾಗಿ ಆತನನ್ನು, ಆತನ ಸಂತತಿಯವರನ್ನು, ಮತ್ತು ಅಂತಿಮವಾಗಿ ಆತನ ಮೂಲಕವಾಗಿ ಇಡೀ ಲೋಕವನ್ನು ಸಮೃದ್ಧಿಯಾಗಿ ಆಶೀರ್ವದಿಸುವೆನು ಎಂದು ಘೋಷಿಸಿದ ವೇಳೆ, ಇದು ನಂಬಿಕೆಯನ್ನು ಹುಟ್ಟಿಸಿದ ಆಧಾರವಾಗಿತ್ತು (ನೋಡಿರಿ ಗಲಾತ್ಯ 3:8). ಈ ನಂಬಿಕೆಯೇ ಆತನನ್ನು ಊರ್ ಪಟ್ಟಣ ತೊರೆದು ವಾಗ್ದಾನದ ನೂತನ ದೇಶದ ಕಡೆಗೆ ಪ್ರಯಾಣವನ್ನು ಆರಂಭಿಸುವಂತೆ ಮಾಡಿತ್ತು.

ಅದೇ ರೀತಿಯಲ್ಲಿಯೇ, ಹೊಸ ಒಡಂಬಡಿಕೆಯಲ್ಲಿ ಪೌಲನು ಹೀಗೆ ಹೇಳಿದನು, "ಆದಕಾರಣ ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ" (ರೋಮಾ 10:17). ದೇವರು ಯೇಸು ಕ್ರಿಸ್ತನ ಮೂಲಕವಾಗಿ ಮಾನವರಿಗೋಸ್ಕರ ಮಾಡಿರುವ ಮತ್ತು ಮಾಡಲಿರುವ ಕಾರ್ಯದ ವಿಷಯವಾಗಿರುವ ದೇವರ ವಾಕ್ಯವನ್ನು ಸುವಾರ್ತೆ, ಶುಭರ್ವತಮಾನವಾಗಿ ಕೇಳಿಸಿಕೊಳ್ಳುವದರಿಂದ ನಂಬಿಕೆ ಬರುತ್ತದೆ.

ದೇವರು ಪ್ರೀತಿಯುಳ್ಳವನಾಗಿ ತನ್ನನ್ನು ಅಬ್ರಹಾಮನಿಗೆ ಪ್ರಕಟಿಸಿಕೊಂಡನು ಮತ್ತು ತಾನು ಯಾರು (ಏಕ ಸತ್ಯ ದೇವರು) ಮತ್ತು ಮೂಲಪಿತೃವಿಗೆ ತಾನೇನು ಮಾಡುವನು ಎಂಬುದರ ಕುರಿತ ಸುವಾರ್ತೆಯನ್ನು (ಶುಭವಾರ್ತೆ) ಸಾರಿದನು. ಯೆಹೋವನು ಅಬ್ರಹಾಮನನ್ನು "ದೊಡ್ಡ ಜನಾಂಗವಾಗುವಂತೆ" ಮಾಡುವೆನು, ಆತನನ್ನು "ಆಶೀರ್ವದಿಸಿ," ಆತನ "ಹೆಸರನ್ನು ಪ್ರಖ್ಯಾತಿಗೆ" ತರುವೆನು, ಆತನನ್ನು "ಹರಸಿ[ದವರನ್ನು] ಹರಸುವೆನು" ಮತ್ತು ಆತನನ್ನು "ಶಪಿಸಿ[ದವರನ್ನು] ಶಪಿಸುವೆನು," ಮತ್ತು ಆತನ ಮೂಲಕವಾಗಿ "ಭೂಲೋಕದ ಎಲ್ಲಾ ಕುಲದವರಿಗೂ" ಆಶೀರ್ವದಿಸುವೆನು ಎಂದು ವಾಗ್ದಾನ ಮಾಡಿದನು (12:2, 3). ಅಂತಿಮವಾಗಿ, ಅಬ್ರಹಾಮನಿಗೆ ಕಾನಾನ್ ದೇಶವನ್ನು ಕೊಡುವೆನೆಂಬ ವಾಗ್ದಾನವು, 11:31 ಮತ್ತು 12:1ರಲ್ಲಿ ಸುಳಿವು ಕೊಡಲ್ಪಟ್ಟಿದ್ದು, 12:7 ಮತ್ತು 13:14-17ರಲ್ಲಿ ಆತನಿಗೆ ಹಾಗೂ ಆತನ ಸಂತತಿಯವರಿಗೆ ಖಾತ್ರಿ ಪಡಿಸಲ್ಪಟ್ಟಿತು.

ಹೊಸ ಒಡಂಬಡಿಕೆಯಲ್ಲಿ, ಅಪೊಸ್ತಲರು ಪ್ರಥಮ ಶತಮಾನದೊಳಗೆ ಸುವಾರ್ತೆಯನ್ನು (ಶುಭವರ್ತಮಾನ) ಸಾರುವ ವೇಳೆ, ಅವರ ಸಂದೇಶದ ವಿಷಯವು ಯಾವಾಗಲೂ ಲೋಕವನ್ನು ರಕ್ಷಿಸುವದಕ್ಕೋಸ್ಕರ ದೇವರು ಯೇಸುವಿನ ಮುಖಾಂತರವಾಗಿ ಮಾಡಿದ ಕಾರ್ಯವೇ ಆಗಿರುತ್ತಿತ್ತು. ಅವರು ಯೇಸುವಿನ ಜೀವನ, ಪಾಪಪರಿಹಾರ್ಥವಾದ ಆತನ ಮರಣ, ಮತ್ತು ಆತನ ಹೂಣಲ್ಪಡುವಿಕೆ, ಆತನ ಪುನರುತ್ಥಾನ, ಮತ್ತು ಪರಲೋಕಾರೋಹಣ ಇವುಗಳೆಲ್ಲವೂ ಹಳೆಯ ಒಡಂಬಡಿಕೆಯ ಪ್ರವಾದನೆಗಳನ್ನು ನೆರವೇರಿಸಿತು ಎಂದು ಒತ್ತಿ ಹೇಳುತ್ತಿದ್ದರು. ಈ ಎಲ್ಲಾ ಘಟನೆಗಳು ಸೂಚಿಸಿದ್ದೇನೆಂದರೆ ದೇವರು ಆತನನ್ನು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ (ಮೆಸ್ಸೀಯನು) ಮಾಡಿದ್ದಾನೆ ಎಂಬುದೆ. ಪಂಚಾಶತ್ತಮ ದಿನದಂದು ಪೇತ್ರನು ಸಾರಿದ ಸಂದೇಶವು ನಿಜಕ್ಕೂ "ದೇವರ ಬಲಸ್ವರೂಪಿಯಾಗಿದ್ದು ... ರಕ್ಷಣೆ ಉಂಟುಮಾಡುವಂಥದಾಗಿದೆ" (ರೋಮಾ 1:16) ಯಾಕೆಂದರೆ ಅದು ತಮ್ಮ ಮೆಸ್ಸೀಯನನ್ನು ತಿರಸ್ಕರಿಸಿ ಪಾಪ ಮಾಡಿದೆವೆಂಬ ಮನವರಿಕೆಯನ್ನು ಜನರಲ್ಲಿ ಹುಟ್ಟಿಸಿತ್ತು, ಮತ್ತು ಅವರ ಹೃದಯಗಳಲ್ಲಿ (ಅಪೊಸ್ತಲರ ಕೃತ್ಯಗಳು 2:14-36) ನಂಬಿಕೆಯನ್ನುಂಟು ಮಾಡಿತ್ತು (ರೋಮಾ 10:17). ಜನರು "ಸಹೋದರರೇ, ನಾವೇನು ಮಾಡಬೇಕು" (ಅಪೊಸ್ತಲರ ಕೃತ್ಯಗಳು 2:37) ಕೂಗಿಕೊಂಡಾಗ, ಪೇತ್ರನು ಅವರಿಗೆ ಪ್ರತ್ಯುತ್ತರವಾಗಿ ಹೀಗೆ ಹೇಳಿದನು, "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ" ಮತ್ತು "ಪವಿತ್ರಾತ್ಮದಾನವನ್ನು ಹೊಂದಲು" "... ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನಮಾಡಿಸಿಕೊಳ್ಳಿರಿ" (ಅಪೊಸ್ತಲರ ಕೃತ್ಯಗಳು 2:38).

ಪಶ್ಚಾತ್ತಾಪ ಮತ್ತು ದೀಕ್ಷಾಸ್ನಾನಗಳು ಸುವಾರ್ತೆಯಲ್ಲಿ; ಅವುಗಳು ಸುವಾರ್ತೆಯನ್ನು ಕೇಳಿ ಮನವರಿಕೆಗೊಂಡಿರುವವರಿಗೆ ಮತ್ತು ಅದಕ್ಕೆ ನಂಬಿಕೆಯಿಂದ ಹೇಗೆ ಪ್ರತಿಕ್ರಿಯಿಸಬೇಕೆಂಬುದನ್ನು ತಿಳಿಯುವ ಅಗತ್ಯವಿರುವವರಿಗೆ ಕೊಡಲಾಗಿರುವ ಆಜ್ಞೆಗಳಷ್ಟೇ ಆಗಿರುತ್ತವೆ. ರಕ್ಷಣೆಯುಂಟು ಮಾಡುವ ನಂಬಿಕೆಯು ಯಾವಾಗಲೂ ವಿಧೇಯತೆಯುಳ್ಳ ನಂಬಿಕೆಯಾಗಿರುತ್ತದೆ; ಪಾಪಿಗಳು ಪಶ್ಚಾತ್ತಾಪ ಪಟ್ಟು ದೇವರು ತನ್ನ ಮಗನಾದ ಯೇಸು

ಕ್ರಿಸ್ತನ ಮುಖಾಂತರವಾಗಿ ಮಾನವರಿಗೋಸ್ಕರ ಏನು ಮಾಡಿದ್ದಾನೆಂಬುದರ ಕುರಿತಾದ ಶುಭವರ್ತಮಾನವನ್ನು ಆಲಿಸಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮೂಲಕ ಪ್ರತಿಕ್ರಿಯಿಸುತ್ತಾರೆ. ರಕ್ಷಣೆಯು ಕ್ರಿಯೆಗಳ ಅರ್ಹತೆಯ ಮೇಲೆ ಬರುವದಿಲ್ಲ; ಪೌಲನು ಅದನ್ನು ಜನರ ಪಾಪಗಳನ್ನು ನಿವಾರಿಸುವದಕ್ಕಾಗಿ ಕ್ರಿಸ್ತನು ಮಾಡಿರುವ ಕಾರ್ಯದ ಮೇಲಿಟ್ಟಿರುವ "ನಂಬಿಕೆಯೆಂಬ ವಿಧೇಯತ್ವ" (ರೋಮಾ 1:5) ಎಂದು ಕರೆದನು.

*ದೇವರ ಕರೆಯುವಿಕೆಯು ವೈಯಕ್ತಿಕವಾಗಿತ್ತು, ಮತ್ತು ಅದಕ್ಕೆ ವಿಧೇಯತೆಯ ಅಗತ್ಯವಿತ್ತು.* ಅಬ್ರಹಾಮನಿಗೆ ಮೊದಲ ಕರೆಯು ಊರ್ ಪಟ್ಟಣದಲ್ಲಿರುವ ವೇಳೆ ಬಂದಿತ್ತು (ದಕ್ಷಿಣ ಮೆಸಪೋತಾಮ್ಯ; 15:7). ಅದು ದೇವರ ಮೌಖಿಕ ವಾಕ್ಯವು ಮಾತ್ರವೇ ಅಲ್ಲ, ಆದರೆ ಅಪೊಸ್ತಲರ ಕೃತ್ಯಗಳು 7:2ರಲ್ಲಿರುವ ಸ್ತೆಫನನ ಹೇಳಿಕೆಯ ಪ್ರಕಾರವಾಗಿ, ಅದರೊಳಗೆ ಆತನ ಮಹಿಮೆಯ ಪ್ರತ್ಯಕ್ಷತೆಯೊಂದು (ದೈವದರ್ಶನ) ಸಹ ಸೇರಿತ್ತು. ಇದು ಅವಶ್ಯಕವಾಗಿತ್ತು ಯಾಕೆಂದರೆ ಅದರೊಳಗೊಂದು ಕಠಿಣವಾದ ಆಜ್ಞೆಯು ಇತ್ತು: ದೇವರು ಅಬ್ರಹಾಮನಿಗೆ ಆತನ ಮನೆ, ದೇಶ, ಕುಟುಂಬ, ಮತ್ತು ಬಂಧುಗಳನ್ನು ತೊರೆದು ಬಿಟ್ಟು ತಾನು ಆತನಿಗೆ ತೋರಿಸುವ ಒಂದು ಅಪರಿಚಿತವಾದ ಹಾಗೂ ದೂರದಲ್ಲಿರುವ ದೇಶವೊಂದಕ್ಕೆ ಹೋಗಬೇಕೆಂದು ಹೇಳಿದನು (ಅಪೊಸ್ತಲರ ಕೃತ್ಯಗಳು 7:3; ನೋಡಿರಿ ಆದಿಕಾಂಡ 12:1). ಅಬ್ರಹಾಮನು ಆ ಸಮಯದಲ್ಲಿ ಅನೇಕ ದೇವರುಗಳನ್ನು ಪೂಜಿಸುತ್ತಿದ್ದನಾದ್ದರಿಂದ, ಯೆಹೋವನು ಆತನಿಗೆ ತನ್ನನ್ನು ಒಬ್ಬನೇ ಸತ್ಯ ದೇವರಾಗಿ ತೋರ್ಪಡಿಸಿಕೊಳ್ಳುವುದು ಪ್ರಾಮುಖ್ಯವಾಗಿತ್ತು, ಆತನು ಅವನನ್ನು ಗತಕಾಲದಿಂದ ಸಂಪೂರ್ಣವಾಗಿ ಸಂಬಂಧವನ್ನು ಮುರಿದುಕೊಂಡು ನಂಬಿಕೆಯ ನಡೆಯನ್ನು ಆರಂಭಿಸಬೇಕೆಂದು ನಾಟಕೀಯವಾದ ವಿಧದಲ್ಲಿ ಕರೆಯುವದರಲ್ಲಿದ್ದನು. ಮೂಲಪಿತೃವಿಗೆ ಅವನ ಮನಸ್ಸು ಎಲ್ಲೋ ಅವನಲ್ಲಿ ತಂತ್ರವನ್ನು ಮಾಡುತ್ತಿದೆ ಮತ್ತು ಇದೊಂದು ವಂಚನೆ ಅಥವಾ ಒಂದು ಭ್ರಾಂತಿ ಅಲ್ಲ ಎಂಬುದನ್ನು ಆತನು ಗ್ರಹಿಸಿಕೊಳ್ಳುವುದು ಅವಶ್ಯಕವಾಗಿತ್ತು.[22]

ಹಾಗಿದ್ದರೂ, ಅಬ್ರಹಾಮನು ನಂಬಿಕೆ ಮತ್ತು ವಿಧೇಯತೆಗಳಲ್ಲಿ ಬೆಳೆಯಬೇಕಾಗಿತ್ತು. ಆತನ ನಂಬಿಕೆಯು ದೃಢಗೊಂಡು ಬೆಳೆಯಬೇಕಾದರೆ ಮತ್ತು ವಿಧೇಯತೆಯ ಮೂಲಕ ಪರಿಪೂರ್ಣವಾಗಿರಬೇಕಾದರೆ ಅನೇಕ ವರ್ಷಗಳ ಅನುಭವಗಳು - ಪ್ರಗತಿಗಳು ಮತ್ತು ಸೋಲುಗಳು ಎರಡನ್ನೂ ಒಳಗೊಂಡ - ಹಿಡಿಯಲಿದ್ದವು (ರೋಮಾ 4:20; ಯಾಕೋಬ 2:22). ಆತನು ಊರ್ ಪಟ್ಟಣದಲ್ಲಿದ್ದ ವೇಳೆ, ವಾಗ್ದಾನ ದೇಶದ ಕಡೆಗೆ ಸುದೀರ್ಘವಾದ ಪ್ರಯಾಣವನ್ನು ಆರಂಭಿಸುವದಕ್ಕೆ ಸಾಕಾಗುವಷ್ಟು ನಂಬಿಕೆಯು ಆತನಲ್ಲಿತ್ತು. ಆತನಲ್ಲಿದ್ದ ನಂಬಿಕೆಯು ನಡೆಯುವಂತೆ ಆತನ ಕಾಲಗಳಿಗೆ ಚಲನೆಯನ್ನು ನೀಡಿತ್ತು; ಆದರೆ ಆತನಿಗೆ ತನ್ನ ಕುಟುಂಬವನ್ನು ಹಿಂದಕ್ಕೆ ಬಿಟ್ಟು ಹೋಗುವಷ್ಟು ನಂಬಿಕೆಯಿರಲಿಲ್ಲ, ಆತನ ನಂಬಿಕೆಯು ಆತನನ್ನು ಕಾನಾನ್ ದೇಶದ ತನಕವೂ ಕರೆದೊಯ್ಯುವಷ್ಟು ದೃಢವಾದದ್ದೂ ಆಗಿರಲಿಲ್ಲ. ಆತನು ಹಾಗೂ ಆತನ ಜೊತೆಯ ಪ್ರಯಾಣಿಕರು ಅವರ ಪ್ರಯಾಣದ ಅರ್ಧದಲ್ಲಿಯೇ ಒಂದು ಸ್ಥಳದಲ್ಲಿ ಇಳಿದುಕೊಂಡರು, ಮತ್ತು ಅವರು ಉತ್ತರ ಮೆಸಪೋತಾಮ್ಯದಲ್ಲಿನ ಹಾರಾನ್ ಎಂಬ ಸ್ಥಳದಲ್ಲಿ ನೆಲೆಗೊಂಡರು.

ತಾನು ವಾಗ್ದಾನ ದೇಶದ ಕಡೆಗೆ ಮಾಡುತ್ತಿರುವ ಪ್ರಯಾಣವನ್ನು ನಿಲ್ಲಿಸಿ ಗುರಿಯನ್ನು ಮುಟ್ಟುವದಕ್ಕೆ ನಾನ್ನೂರು ಮೈಲಿಗಳಷ್ಟು ಹಿಂದಕ್ಕೆ ಇರುವ ಸ್ಥಳದಲ್ಲಿ ನೆಲೆಗೊಳ್ಳುವಂತೆ ಅನುಮತಿ ನೀಡಬೇಕು ಎಂಬುದಾಗಿ ಅಬ್ರಹಾಮನು ಯೆಹೋವನನ್ನು ಕೇಳಿಕೊಂಡನು ಎಂಬುದಕ್ಕೆ ಶಾಸ್ತ್ರದಲ್ಲಿ ಯಾವ ಸೂಚನೆಯೂ ಇರುವದಿಲ್ಲ. ಆತನು ಮತ್ತು ಆತನ ಕುಟುಂಬವು ಹಾರಾನಿನಲ್ಲಿ ಎಷ್ಟೊಂದು ವರ್ಷಗಳ ಕಾಲ ವಾಸಿಸಿದ್ದರೆಂದರೆ ಅದು ಅವರ ಸ್ವದೇಶವಾಗಿ

ಮಾರ್ಪಟ್ಟಿತ್ತು (12:1); ಮತ್ತು ಮೂಲಪಿತೃವಿನ ತಂದೆಯಾದ ತೆರಹನು ಮರಣಿಸಿದ ಬಳಿಕವಷ್ಟೇ, ಪುನಃ ಯೆಹೋವನು ಆತನನ್ನು ಅವನ ಸ್ವದೇಶ, ಬಂಧು ಬಳಗ, ಮತ್ತು ಕುಟುಂಬವನ್ನು ತೊರೆದು ಕಾನಾನ್ ದೇಶಕ್ಕೆ ಹೋಗಬೇಕೆಂದು ಕರೆದನು (12:1, 5). ಅಬ್ರಹಾಮನು ಎಪ್ಪತ್ತೈದು ವರ್ಷದವನಾಗುವ ಹೊತ್ತಿಗೆ, ಸಾರಳು ಹತ್ತು ವರ್ಷ ಕಿರಿಯವಳಾಗಿದ್ದಳು (12:4; 17:17). ದೇವರು ಅಬ್ರಹಾಮನನ್ನು ಊರ್ ಪಟ್ಟಣದಲ್ಲಿರುವ ವೇಳೆ ಕರೆದಾಗ ಆತನಿಗೆ ಎಷ್ಟು ವಯಸ್ಸಾಗಿತ್ತೆಂಬುದು ನಮಗೆ ತಿಳಿಯದು, ಆದರೆ ಅವನು ಮೂವತ್ತು ಅಥವಾ ನಾಲ್ವತ್ತು ವಯಸ್ಸಿನವನಾಗಿದ್ದಿರಬಹುದು ಎಂದು ಕೆಲವರು ಯೋಚಿಸುತ್ತಾರೆ. ಹಾಗಿದ್ದ ಪಕ್ಷದಲ್ಲಿ, ಆತನು ತನ್ನ ಜೀವನದ ಅರ್ಧ ಭಾಗವನ್ನು ತಪ್ಪಾದ ಸ್ಥಳದಲ್ಲಿ (ಹಾರಾನ್) ಕಳೆದಿದ್ದನು ಎಂದರ್ಥವಾಗುತ್ತದೆ.

12:1-3ರಲ್ಲಿ ಕರೆಯನ್ನು ಪಡೆದುಕೊಂಡ ಮೇಲೆ, ಅಬ್ರಹಾಮನ ನಂಬಿಕೆಯು ಪುನಃ ಎದ್ದು ನಿಂತುಕೊಂಡಿತು, ಆದ್ದರಿಂದ ಅವನು ಪುನಃ ಕಾನಾನಿನ ಕಡೆಗೆ ಪ್ರಯಾಣವನ್ನು ಆರಂಭಿಸಿದನು. ಮತ್ತೊಂದಾವರ್ತಿ, ಆತನು ತನ್ನ ಕುಟುಂಬವನ್ನು ಹಿಂದಕ್ಕೆ ಬಿಟ್ಟು ಬಿಡದೆ ಸಂಗಡ ಕರೆದುಕೊಂಡು ಹೊರಟನು (12:4, 5). ಸಾರಳು ಈಗಲೂ ಬಂಜೆಯಾಗಿದ್ದಳು, ಮತ್ತು ಅಬ್ರಹಾಮನಿಗೆ ಮಗನಾಗಲಿ ಅಥವಾ ವಾರಸುದಾರನಾಗಲಿ ಇರಲಿಲ್ಲ. ಆತನು ತನ್ನ ಸಂಗಡ ಸಹೋದರನ ಮಗನಾದ ಲೋಟನನ್ನು ಮತ್ತು ಅವರೆಲ್ಲಾ ದಾಸರನ್ನು (ಬಹುಶಃ ಗುಲಾಮರನ್ನು) ಕರೆದುಕೊಂಡು ಹೊರಟನು, ಮಾತ್ರವಲ್ಲದೆ ಬೃಹತ್ ಸಂಖ್ಯೆಯಲ್ಲಿ ಮಂದೆಗಳು ಹಾಗೂ ಹಿಂಡುಗಳು ಸಹ ಜೊತೆಗೂಡಿ ಪ್ರಯಾಣ ಆರಂಭಿಸಿದ್ದವು.

ನಂಬಿಕೆಯಿಂದಲೇ ಅಬ್ರಹಾಮ ಮತ್ತು ಆತನ ಪರಿವಾರದವರು ಅಂತಿಮವಾಗಿ ಕಾನಾನ್ ದೇಶಕ್ಕೆ ಬಂದು ಸೇರಿದರು (ಇಬ್ರಿಯ 11:8). ಮೂಲಪಿತೃವು ನಂಬಿಕೆ, ವಿಧೇಯತೆ, ಕೃಪೆ, ಮತ್ತು ಸತ್ಯದ ಜ್ಞಾನಗಳಲ್ಲಿ ಬೆಳೆಯಬೇಕಾಗಿತ್ತು, ಕರ್ತನ ಅಪೊಸ್ತಲರು ಸಹ ಹಾಗೆಯೇ ಬೆಳೆಯುವವರಾಗಿದ್ದರು (ಮತ್ತಾಯ 17:20; ಮಾರ್ಕ 4:40; ಲೂಕ 17:5, 6). ದೇವರ ಎಲ್ಲಾ ಜನರು, ಈ ದಿನಗಳಲ್ಲಿ ಸಹ ಇದೇ ಸವಾಲನ್ನು ಎದುರಿಸುತ್ತಾರೆ. ಸುವಾರ್ತೆಯ ಕರೆಗೆ ವಿಧೇಯರಾಗಿ ಕ್ರೈಸ್ತನಾಗುವ ಪ್ರತಿಯೊಬ್ಬನು ಕರ್ತನೊಂದಿಗಿನ ನಡೆಯನ್ನು ಆರಂಭಿಸಬೇಕು ಮತ್ತು ನಂಬಿಕೆಯಲ್ಲಿ ಬೆಳೆಯುವದಕ್ಕೆ ಪ್ರಯಾಸ ಪಡಬೇಕು (ಮತ್ತಾಯ 28:19, 20; ಮಾರ್ಕ 16:15, 16; 1 ಪೇತ್ರ 2:1, 2; 2 ಪೇತ್ರ 3:18).

*ದೇವರು ಅಬ್ರಹಾಮನಿಗೆ ನೀಡಿದ ಕರೆಯನ್ನು ಕಾನಾನಿನಲ್ಲಿ ಮತ್ತೊಮ್ಮೆ ಪುನರುಚ್ಚರಿಸುತ್ತಾನೆ, ಮತ್ತು ಅದು ಆತನಿಗೆ ಆರಾಧನೆಯ ಬಗ್ಗೆ ಇನ್ನಷ್ಟು ಅಧಿಕವಾಗಿ ಕಲಿಸಿತು.* ಅಬ್ರಹಾಮನು ವಾಗ್ದಾನ ದೇಶಕ್ಕೆ ಬಂದು ಸೇರಿ ಶೆಕೆಮಿನ ಕಡೆಗೆ (ಕಾನಾನಿನ ಮಧ್ಯಭಾಗ) ಹೊರಟ ವೇಳೆ, ದೇಶದ ಬಹಳಷ್ಟು ಭಾಗವು ಕಾನಾನ್ಯರ ನಿಯಂತ್ರಣದಲ್ಲಿದೆ ಎಂಬುದನ್ನು ಕಂಡುಕೊಂಡನು (12:6). ಆತನು ಈ ದೇಶವು ಎಂದಾದರೂ ಹೇಗೆ ನನ್ನ ಸಂತತಿಯವರು ಸ್ವಂತವಾಗಲಿದೆಯೋ ಎಂಬುದಾಗಿ ಚಕಿತಗೊಳ್ಳುತ್ತಾ ಆತ್ಮದಲ್ಲಿ ಕುಗ್ಗಿ ಹೋದನು. ಆತನ ನಂಬಿಕೆಯನ್ನು ಹೆಚ್ಚಿಸಿ ಅವನಿಗಿರುವ ಚಿಂತೆಗಳನ್ನು ನಿವಾರಿಸುವದಕ್ಕಾಗಿ, ಮೂಲಪಿತೃವಿಗೆ "ಯೆಹೋವನು ದರ್ಶನ ಕೊಟ್ಟನು" ಮತ್ತು ಅವನಿಗೆ ಶುಭವರ್ತಮಾನವನ್ನು ಮತ್ತೊಂದಾವರ್ತಿ ಸಾರಿದನು, ಕಾನಾನ್ ದೇಶವನ್ನು ಆತನ "ಸಂತತಿಯವರಿಗೆ" ಕೊಡುವೆನೆಂದು ವಾಗ್ದಾನ ಮಾಡಿದನು. ಇದು ಆತನಿಗೆ ಪ್ರೋತ್ಸಾಹ ನೀಡಿತು ಮತ್ತು ಆತನ ನಂಬಿಕೆಯನ್ನು ಎಷ್ಟರ ಮಟ್ಟಿಗೆ ಬಲಗೊಳಿಸಿತ್ತೆಂದರೆ ಆತನು "ತನಗೆ ದರ್ಶನಕೊಟ್ಟ ಯೆಹೋವನಿಗೆ ಅಬ್ರಾಮನು ಯಜ್ಞವೇದಿಯನ್ನು ಕಟ್ಟಿಸಿದನು" (12:7). ಆತನ ಈ ಧೈರ್ಯದ

ಕೃತ್ಯವು ಆರಾಧನೆಗೋಸ್ಕರ ಆತನು ಶೆಕೆಮಿನಲ್ಲಿರುವ ಅನ್ಯಧರ್ಮಿಯ ಯಜ್ಞವೇದಿಯ ಬಳಿಗೆ ಹೋಗುವದಿಲ್ಲ,[23] ಆದರೆ ಮೆಸಪೋತಾಮ್ಯವನ್ನು ಬಿಟ್ಟು ಈ ಪರದೇಶಕ್ಕೆ ಬರುವಂತೆ ಕರೆದಿದ್ದ ಯೆಹೋವನನ್ನು ಮಾತ್ರವೇ ಆರಾಧಿಸುವನು ಎಂಬುದನ್ನು ತೋರಿಸಿ ಕೊಟ್ಟಿತ್ತು.

ಅಬ್ರಹಾಮನು ದೇಶದಲ್ಲಿ ಮುಂದಕ್ಕೆ ಸಾಗಿದ ಹಾಗೆ, ಆತನು ಬೇತೇಲ್ ಮತ್ತು ಆಯಿ ಪಟ್ಟಣಗಳ ನಡುವೆ "ತನ್ನ ಗುಡಾರವನ್ನು ಹಾಕಿಕೊಂಡನು" ಮತ್ತು ದೇವರಿಗೆ ಇನ್ನೊಂದು ಯಜ್ಞವೇದಿಯನ್ನು ಕಟ್ಟಿದನು, ಅಲ್ಲಿ ಆತನು ಯೆಹೋವನ "ಹೆಸರನ್ನು ಹೇಳಿಕೊಂಡು" ಆರಾಧನೆಯನ್ನು ಮಾಡಿದನು (12:8). ಮೂಲಪಿತೃವು ಪ್ರಯಾಣಿಸಿದ ಸ್ಥಳಗಳಲ್ಲೆಲ್ಲಾ, ಆತನು ರೂಢಿಯಂತೆ ತನ್ನ ಗುಡಾರವನ್ನು ಹಾಕಿಸುತ್ತಿದ್ದನು ಮತ್ತು ಆರಾಧನೆಗೋಸ್ಕರ ಒಂದು ಯಜ್ಞವೇದಿಯನ್ನು ಕಟ್ಟಿಸುತ್ತಿದ್ದನು (12:7, 8; 13:3, 4, 18). ಗುಡಾರವು ಆತನು "ಅನ್ಯದೇಶದಲ್ಲಿ ಇದ್ದವನಂತೆ ಡೇರೆಗಳಲ್ಲಿ ಇದ್ದುಕೊಂಡು ಪ್ರವಾಸಿಯಾಗಿ ಬದುಕಿದನು" (ಇಬ್ರಿಯ 11:8, 9); ಆತನು ತನ್ನ ಕುಟುಂಬಕ್ಕೋಸ್ಕರ ಒಂದು ಮನೆಯಾಗಿ ಶಾಶ್ವತವಾದ ಕಟ್ಟಡವನ್ನು ಕಟ್ಟಿಕೊಳ್ಳಲಿಲ್ಲ ಯಜ್ಞವೇದಿಯು ಯೆಹೋವನಲ್ಲಿ ಆತನಿಗಿದ್ದ ನಂಬಿಕೆ ಮತ್ತು ತನ್ನನ್ನು ಮೆಸಪೋತಾಮ್ಯದಿಂದ ಹಾಗೂ ತಾನು ಬೆಳೆಯುತ್ತಿರುವ ವರ್ಷಗಳಲ್ಲಿ ತನಗೆ ಗೊತ್ತಿದ್ದ ಏಕೈಕ ಅನ್ಯಧರ್ಮಿಯ ಸಂಸ್ಕೃತಿಯೊಳಗಿಂದ ಹೊರಗೆ ಬರುವಂತೆ ಕರೆದಿದ್ದ ಯೆಹೋವನ ಕಡೆಗೆ ಹೊಂದಿದ್ದ ಆತನ ಕೃತಜ್ಞಾಭಾವಕ್ಕೆ ಸಾಕ್ಷಿಯಾಗಿತ್ತು.

ಮೂಲಪಿತೃವಿನ ಕಾನಾನ್ಯ ನೆರೆಯವರು ಈತನು ಆರಾಧನೆಗೋಸ್ಕರ ಯಜ್ಞವೇದಿಯನ್ನು ಕಟ್ಟಿರುತ್ತಾನೆ ಆದಾಗ್ಯೂ ಯಾವ ವಿಗ್ರಹಗಳೂ ಇರುವದಿಲ್ಲ ಎಂಬುದನ್ನು ಗಮನಿಸಿರಬಹುದಾಗಿದೆ. ಆತನಿಗೆ ಯಾವ ಒಂದು ಸ್ಥಳವಾಗಲಿ ಸಹ ಅಷ್ಟೊಂದು ಪವಿತ್ರವಾಗಿರಲಿಲ್ಲ; ಆದರೆ ಆತನು ಎಲ್ಲೆಲ್ಲಿ ತನ್ನ ಗುಡಾರವನ್ನು ಹಾಕಿಕೊಂಡು ಯಜ್ಞವೇದಿಯನ್ನು ಕಟ್ಟಿದನೋ, ಅಲ್ಲಿ ಆತನು ಯೆಹೋವನ ಹೆಸರನ್ನು ಹೇಳಿಕೊಂಡು ಆರಾಧಿಸಿದನು. ಇದು ಯೆಹೋವನು, ಕಾನಾನ್ಯರು ಗ್ರಹಿಸಿಕೊಂಡ ಪ್ರಕಾರವಾಗಿ ಕಾಲ ಹಾಗೂ ಸ್ಥಳಕ್ಕೆ ಸೀಮಿತನಾಗಿರುವ ಕೇವಲ ಒಬ್ಬ ಸ್ಥಳೀಯ ದೈವವಲ್ಲ ಎಂಬುದನ್ನು ಸೂಚಿಸುವದಾಗಿತ್ತು. ಯಾವದೇ ಸ್ಥಳದಲ್ಲಿ ಮುಕ್ತವಾಗಿ ದೇವರನ್ನು ಆರಾಧಿಸುವ ಸಾಮರ್ಥ್ಯವು ಯೆಹೋವನ ನಿಜವಾದ ಆತ್ಮೀಕ ಸ್ವಭಾವವನ್ನು ಲೋಕಕ್ಕೆ ಸಾರುವದಾಗಿತ್ತು. ಅಬ್ರಹಾಮನ ಶ್ರೇಯಸ್ಸು ಏನೆಂದರೆ, ಅನ್ಯಧರ್ಮಿಯರು ಆತನನ್ನು ನೋಡುತ್ತಿರಲು ಆತನು ತೆರೆದ ಸ್ಥಳದಲ್ಲಿ ದೇವರನ್ನು ಆರಾಧಿಸುವದಕ್ಕೆ ಅಬ್ರಹಾಮನು ನಾಚಿಕೊಳ್ಳಲಿಲ್ಲ. ಆತನ ಕೃತ್ಯಗಳು ಅವನನ್ನು ಕರೆದಂಥ, ಆತನನ್ನು ಆಶೀರ್ವದಿಸುವೆನೆಂದು ವಾಗ್ದಾನ ಮಾಡಿದ್ದ ಹಾಗೂ ಕಾನಾನ್ಯರು ನೆಲೆಸಿದ್ದ ದೇಶದಲ್ಲಿ ಒಂದು ಹೊಸ ಆರಂಭವನ್ನು ಮತ್ತು ಗಮ್ಯತೆಯನ್ನು ಒದಗಿಸಿದ್ದ ದೇವರಲ್ಲಿ ಆತನಿಗಿರುವ ನಂಬಿಕೆಗೆ ಸಾಕ್ಷಿಯಾಗಿತ್ತು.

ಇಂದು ನಮ್ಮ ಬಂಧುಗಳನ್ನು ತೊರೆದು ದೂರದ ದೇಶಗಳಿಗೆ ಹೋಗಿ ಅಬ್ರಹಾಮನ ಹಾಗೆ ಅಲ್ಲಿ "ಪರದೇಶದವರೂ ಪ್ರವಾಸಿಗಳೂ" ಆಗಿ ಜೀವಿಸುವಂತೆ ಯೆಹೋವನಿಂದ ನಾವು ಕರೆಯಲ್ಪಡುವದಿಲ್ಲ (ಇಬ್ರಿಯ 11:13). ನಾವು ಎಲ್ಲಿಯೇ ಜೀವಿಸಿದಾಗ್ಯೂ ಈ ಲೋಕಕ್ಕೆ ಸೇರಿದವರಲ್ಲ ಎಂಬುದನ್ನು ನೆನಪಿಟ್ಟುಕೊಳ್ಳುವಂತೆ (2 ಥೆಸಲೋನಿಕ 2:14), ಸುವಾರ್ತೆಯ ಮೂಲಕವಾಗಿ ಯೆಹೋವನಿಂದ ಕರೆಯಲ್ಪಟ್ಟಿದ್ದೇವೆ; ಇದು ಶಾಶ್ವತವಾದ ಮನೆಯಲ್ಲ. ನಾವು ನಮ್ಮನ್ನು ಮತ್ತು ನಮ್ಮೊಂದಿಗೆ ಬೇರೆಯವರನ್ನು ಕೆಳಕ್ಕೆ ಎಳೆಯುವಂತಹ ಶರೀರಭಾವದ ಶೋಧನೆಗಳಿಂದ ಮತ್ತು ಲೌಕಿಕ ಆಕಾಂಕ್ಷೆಗಳ ಬೆನ್ನತ್ತುವದರಿಂದ ದೂರವಿರಬೇಕು. ನಾವು "ಪರಿಪೂರ್ಣವಾದ ತಿಳುವಳಿಕೆಗೆ ಸಾಗುತ್ತಾ" ಹೋಗಬೇಕು (ಇಬ್ರಿಯ 6:1) ಮತ್ತು "ನಮಗೆ

ಅಭ್ಯಂತರ ಮಾಡುವ ಎಲ್ಲಾ ಭಾರವನ್ನೂ ಹತ್ತಿಕೊಳ್ಳುವ ಪಾಪವನ್ನೂ ನಾವು ಸಹ ತೆಗೆದಿಡಬೇಕು" (12:1). ಅಬ್ರಹಾಮನ ಹಾಗೆಯೇ, ನಾವು ಇಲ್ಲಿಯೇ ಹಾಯಾಗಿರಬೇಕೆಂದು ಎಂದುಕೊಂಡು "ಇಹಲೋಕದ ನಡವಳಿಕೆಯನ್ನು ಅನುಸರಿಸುವವರು" ಆಗುವದರಿಂದ ದೂರವಿರಬೇಕು (ರೋಮಾ 12:2). ಒಂದು ಪರದೇಶವನ್ನು ಹಾದುಕೊಂಡು ಪ್ರಯಾಣಿಸುತ್ತಿರುವ "ಪ್ರವಾಸಿಗಳೂ ಪರದೇಶಸ್ಥರೂ" ಆಗಿದ್ದು (1 ಪೇತ್ರ 2:11), ನಾವು ನಮ್ಮ ನಿಜವಾದ ನಿವಾಸ ಮತ್ತು ಬಾಧ್ಯತೆಯು "ಪರಲೋಕದಲ್ಲಿ" ಇದೆ ಎಂಬುದನ್ನು ನೆನಪಿಟ್ಟುಕೊಳ್ಳತಕ್ಕದ್ದು (ಫಿಲಿಪ್ಪಿ 3:20; ಇಬ್ರಿಯ 11:10, 15, 16).

## ನಂಬಿಕೆಯ ಮನುಷ್ಯನಿಗೆ ಎದುರಾದ ಸಂಕಷ್ಟಗಳು (12:10-20)

ಅಬ್ರಹಾಮನಿಗೆ ತನ್ನ ನಂಬಿಕೆಯಲ್ಲಿ ಒಂದು ಆಳವಾಗುವಂಥ ಸಮರ್ಪಣೆಯನ್ನು ಬೆಳೆಸಿಕೊಳ್ಳಲು ಕಾಲಾವಕಾಶವು ಅಗತ್ಯವಿತ್ತು. ನಾವು ಆತನ ವಿಧೇಯತೆಯನ್ನು ಕಂಡಿದ್ದೇವೆ, ಅದು - ಭಾಗಶಃ ಆಗಿರುತ್ತದಾದರೂ - ಹೆಚ್ಚು ಸ್ಥಿರಗೊಳ್ಳುತ್ತಾ ಸಾಗುತ್ತಲಿತ್ತು. ಹೇಗೂ, ಇದೇ ಮನುಷ್ಯನು ಸಂಕಷ್ಟ, ಶೋಧನೆ, ಭಯ, ಮತ್ತು ನೈತಿಕ ಲೋಪ ಇವುಗಳಿಗೆ ಒಳಗಾದಾಗ, ಆತನಿಗೆ ದೇವರಲ್ಲಿ ಭರವಸವಿಲ್ಲ ಎಂಬುದನ್ನು ತೋರಿಸಿ ಕೊಟ್ಟಿತ್ತು. ಅಬ್ರಹಾಮನು ನಂಬಿಕೆಯಿಂದ ನಡೆದು ಸಾಗಿದನು, ಅಂತಿಮವಾಗಿ ಅನೇಕ ವರ್ಷಗಳ ಬಳಿಕ ವಾಗ್ದಾನ ದೇಶಕ್ಕೆ ಬಂದು ತಲುಪಿದನು. ಆತನು ಊರ್ ಮತ್ತು ಹಾರಾನ್ ಬಿಟ್ಟು ಬರುವದರಿಂದಾಗಿ ತನ್ನ ಕುಟುಂಬದೊಳಗೆ ದಾಟಿಕೊಂಡು ಬಂದ ಬಹಳಷ್ಟು ಸಮಸ್ಯೆಗಳು, ಮಾತ್ರವಲ್ಲದೆ ಕಾನಾನಿನ ಕಡೆಗೆ ಮಾಡಿದ ಸುದೀರ್ಘವಾದ ಹಾಗೂ ಪ್ರಯಾಸದ ಪ್ರಯಾಣ ಇವೆಲ್ಲವೂ ಅಂತಿಮವಾಗಿ ತೀರಿ ಹೋಗಿವೆ ಎಂದು ಯೋಚಿಸಿಕೊಂಡಿರಬಹುದು. ಹೇಗೂ, ಅದು ಈ ರೀತಿಯಾಗಿರಲಿಲ್ಲ ಎಂಬುದು ಶೀಘ್ರವೇ ಅವನಿಗೆ ತಿಳಿದು ಬರಲಿತ್ತು. ಕಾನಾನ್ ದೇಶವನ್ನು ತೊರೆದು ಹೋಗುವಂತೆ ಆತನನ್ನು ಶೋಧಿಸುವದಕ್ಕೆ ಮತ್ತು ಆತನ ಹೆಂಡತಿಯಾದ ಸಾರಳ ವಿಷಯದಲ್ಲಿ ಆತನ ಮೋಸದಾಟದ ಮೂಲಕವಾಗಿ ಅವನ ಮುಂದಿನ ಸಂತಾನವನ್ನು ಸಹ ಇಕ್ಕಟ್ಟಿಗೆ ಸಿಲುಕಿಸುವಂಥ ಹೊಸ ಸಮಸ್ಯೆಗಳು ಉದ್ಭವವಾದವು.

ಅನೇಕ ಸಾರಿ, ಯೆಹೋವನು ತನ್ನ ಜನರಿಗೆ ಕಷ್ಟಗಳನ್ನು ಮತ್ತು ಸಂಕಷ್ಟಗಳನ್ನು ಹಾದು ಹೋಗುವಂತೆ ಅನುಮತಿಸುತ್ತಾನೆ ಎಂಬುದು ದೇವರ ಮಕ್ಕಳನ್ನು ಅಸ್ತವ್ಯಸ್ತಗೊಳಿಸುತ್ತದೆ. ಯೆಹೋವನಲ್ಲಿ ನಂಬಿಕೆಯನ್ನು ಇಡುವ ವ್ಯಕ್ತಿಯು ಕೆಲವೊಮ್ಮೆ ಸಮಸ್ಯೆಯನ್ನು ಅನುಭವಿಸಿದರೆ, ಭಕ್ತಿಹೀನರು ಸಮೃದ್ಧಿಯಾಗುವಂತೆ ಕಾಣಿಸುತ್ತದಲ್ಲಾ ಎಂಬುದಾಗಿ ಕೀರ್ತನೆಗಾರನಿಗೆ ಗೊಂದಲವುಂಟಾಗಿತ್ತು (ಕೀರ್ತನೆ 73:2-14; ನೋಡಿರಿ ಯೋಬ 1:1-3:26). ಶಾಸ್ತ್ರಗಳಲ್ಲಿರುವ ಹಲವಾರು ಉದಾಹರಣೆಗಳು ದೃಷ್ಟಾಂತಪಡಿಸುವದೇನೆಂದರೆ ಆತ್ಮೀಕವಾಗಿ ಉಚ್ಛ ಕಾರ್ಯಗಳನ್ನು ಅನುಭವಿಸುವವರು - ದೇವರು ತನ್ನನ್ನು ತೋರ್ಪಡಿಸುವವನಾಗಿ ಅವರಲ್ಲಿ ನಾಟಕೀಯವಾಗಿ ಕಾರ್ಯಪ್ರವೃತ್ತನಾಗುವುದು, ಅವರ ಹಕ್ಕುಗಳನ್ನು ಸಮರ್ಥಿಸುವುದು, ಅಥವಾ ಅವರನ್ನು ದೊಡ್ಡ ಅಪಾಯದಿಂದ ತಪ್ಪಿಸಿ ಕಾಪಾಡುವುದು - ಸಂಕಷ್ಟ ಮತ್ತು ಪರಿಶೋಧನೆಗಳ ಕಠಿಣ ಸಮಯಗಳನ್ನು ಸಹ ಅನುಭವಿಸುತ್ತಾರೆ.

ವಿಮೋಚನಕಾಂಡವು ಈ ನಮೂನೆಗೆ ಇಸ್ರಾಯೇಲ್ಯರನ್ನು ಐಗುಪ್ತದ ದಾಸತ್ವದಿಂದ ಬಿಡುಗಡೆಗೊಳಿಸುವದರಲ್ಲಿ ಒಂದು ಪ್ರಧಾನ ಉದಾಹರಣೆಯನ್ನು ದಾಖಲಿಸುತ್ತದೆ. ದೇವರು ಇಸ್ರಾಯೇಲ್ಯರನ್ನು ಐಗುಪ್ತದ ಸೈನ್ಯದಿಂದ ಬಿಡಿಸಿ ಅವರನ್ನು ಕೆಂಪು ಸಮುದ್ರದ ಮೂಲಕವಾಗಿ ಸುರಕ್ಷತೆಯೊಂದಿಗೆ ಕರೆದುಕೊಂಡು ಬಂದ ತಕ್ಷಣದಲ್ಲಿಯೇ, ಆ ರಕ್ಷಿತ ಅನುಭವದ ಆನಂದವು

ಅರಣ್ಯದಲ್ಲಿ ಒಂದು ಪರೀಕ್ಷೆಯ ಕಾಲಕ್ಕೆ ದಾರಿಯನ್ನು ಮಾಡಿತ್ತು. ಮೊದಲನೆಯದಾಗಿ, ಅವರಿಗೆ ಕುಡಿಯಲು ಕೇವಲ ಕಹಿಯಾದ ನೀರು ಮಾತ್ರವೇ ಸಿಕ್ಕಿತ್ತು (ವಿಮೋಚನಕಾಂಡ 15:22-27), ಬಳಿಕ ಅವರಿಗೆ ಹಸಿವು ಉಂಟಾಗಿತ್ತು (ವಿಮೋಚನಕಾಂಡ 16:1-36), ಮತ್ತು ಅಂತಿಮವಾಗಿ, ಅವರಿಗೆ ಸ್ವಲ್ಪವೂ ನೀರು ಸಿಕ್ಕಲಿಲ್ಲ (ವಿಮೋಚನಕಾಂಡ 17:1-7). ಇಸ್ರಾಯೇಲ್ಯರು ಒಂದು ಪರೀಕ್ಷೆಯ ಸಮಯವನ್ನು ಎದುರಿಸಿದಾಗಲೆಲ್ಲಾ, ಯೆಹೋವನು ಅವರಿಗೆ ಒದಗಿಸಬಲ್ಲನು ಎಂಬ ಭರವಸವು ಅವರಿಗೆ ಆತನಲ್ಲಿ ಇರಲಿಲ್ಲ ಎಂಬುದನ್ನು ತೋರಿಸಿ ಕೊಡುತ್ತಿದ್ದರು. ಅವರು ದೇವರ ಪ್ರತಿನಿಧಿಯಾಗಿರುವ ಮೋಶೆಗೆ ವಿರುದ್ಧವಾಗಿ ಗುಣಗುಟ್ಟುವ ಮೂಲಕ ದೇವರಿಗೆ ವಿರುದ್ಧವಾಗಿ ಪಾಪ ಮಾಡಿದರು (ನೋಡಿರಿ ಅರಣ್ಯಕಾಂಡ 14:22).[14] ಅವರ ಪ್ರಯಾಣಗಳ ಕುರಿತಾದ ವಿವಿಧ ಕಥನಗಳಲ್ಲಿ, ಪರೀಕ್ಷಿಸುವಿಕೆಯು ವಿಶ್ವಾಸಿಗಳ ಮೇಲೆ ವಿವಿಧ ದಾರಿಗಳಲ್ಲಿ ಬರುತ್ತದೆಂಬುದನ್ನು ನಾವು ಗಮನಿಸಬಹುದು.

*ಪ್ರತಿಕೂಲ ಪರಿಸ್ಥಿತಿಗಳ ಪರೀಕ್ಷೆ.* ಮೂಲಪಿತೃವು ಕಾನಾನ್ ದೇಶದಲ್ಲಿ ನೆಲೆಗೊಂಡ ಸ್ವಲ್ಪ ಕಾಲದಲ್ಲಿಯೇ ಕ್ಷಾಮವು ಒಂದು ಆತನನ್ನು ಪರೀಕ್ಷಿಸಿರಬಹುದಾಗಿದೆ. ಈ ಕ್ಷಾಮದಿಂದ ಆತನ ಜೊತೆಯ ಪ್ರಯಾಣಿಕರಿಗೆ ನೀರಿನ ಕೊರತೆಯನ್ನುಂಟು ಮಾಡಿತ್ತು, ಮಾತ್ರವಲ್ಲದೆ ಆತನ ಮಂದೆಗಳಿಗೂ ಹಿಂಡುಗಳಿಗೂ ನೀರು ಇರಲಿಲ್ಲ. ಅಬ್ರಹಾಮನು ಊರ್ ಪಟ್ಟಣದಲ್ಲಾಗಲಿ ಅಥವಾ ಹಾರಾನಿನಲ್ಲಾಗಲಿ ಇಂಥ ಪರಿಸ್ಥಿತಿಯನ್ನು ಎಂದಾದರೂ ಎದುರುಗೊಂಡಿದ್ದನೋ ಎಂಬುದರ ಕುರಿತು ಶಾಸ್ತ್ರವು ಯಾವದೇ ಸುಳಿವು ನೀಡುವದಿಲ್ಲ; ಆದರೆ ಈಗಲಾದರೋ ದೇವರು ನಡಿಸಿಕೊಂಡು ಬಂದಿದ್ದ ದೇಶದಲ್ಲಿ ಆತನು ವಾಸಿಸುತ್ತಿದ್ದಾನೆ, ಆದರೆ ಬಿಕ್ಕಟ್ಟು ಎದುರಾಗಿತ್ತು.

ಈ ಕ್ಷಾಮವು ಎಷ್ಟೊಂದು ಘೋರವಾಗಿತ್ತು ಅಥವಾ ಎಷ್ಟು ವರ್ಷ ಕಾಲ ಇತ್ತು ಎಂಬುದು ನಮಗೆ ತಿಳಿಸಲ್ಪಟ್ಟಿಲ್ಲ. ಅನಂತರದಲ್ಲಿ, ಯಾಕೋಬನು ತನ್ನ ಕುಟುಂಬ ಹಾಗೂ ಪಶುಗಳ ಸಮೇತವಾಗಿ ಐಗುಪ್ತದಿಂದ ಬಂದ ಪರಿಹಾರ ಸಾಮಗ್ರಿಗಳಿಂದ ಕಾನಾನಿನಲ್ಲಿ ಎರಡು ವರ್ಷಗಳ ಕಾಲ ಜೀವನ ಸಾಗಿದ ನಂತರ ತನ್ನ ಸಿಮೆಯೋನನು ಸೆರೆಮನೆಯಿಂದ ಬಿಡುಗಡೆಗೊಳ್ಳುವಂತಾಗಲೆಂದು ಬೆನ್ಯಾಮೀನನನ್ನು ತನ್ನ ಪುತ್ರರೊಂದಿಗೆ ಪುನಃ ಐಗುಪ್ತಕ್ಕೆ ಕಳುಹಿಸಿ ಕೊಟ್ಟನು (41:56-43:23). ಅವರು ಐಗುಪ್ತಕ್ಕೆ ಹಿಂದಿರುಗುವ ಹೊತ್ತಿಗೆ, ಅವರು ಈಗಾಗಲೇ ಒಂದು ಘೋರವಾದ ಕ್ಷಾಮವನ್ನು ಅನುಭವಿಸಿ ಬಂದಿದ್ದಾಗ್ಯೂ, ಅಜ್ಞಾತವೇಷದಲ್ಲಿದ್ದ ಧೊರೆಯಾದ ಯೋಸೇಫನಿಗೋಸ್ಕರ ಸಾಕಷ್ಟು ಬಹುಮಾನಗಳನ್ನು ಹೊತ್ತುಕೊಂಡು ಬರುವದಕ್ಕೆ ಶಕ್ತರಾಗಿದ್ದರು. ಅವರು ಆತನಿಗೆ ತೈಲ, ದ್ರಾಕ್ಷಾರಸದ ಕಾಕಂಬಿ, ಹಾಲುಮಡ್ಡಿ, ರಕ್ತಬೋಳ, ಆಕ್ರೋಡು, ಬಾದಾಮಿ ಇವುಗಳನ್ನು ಕೊಟ್ಟರು (43:11). ಅವರು ಈ ವಸ್ತುಗಳನ್ನು ಹೊಂದಿರುವುದು ಸೂಚಿಸುವದೇನೆಂದರೆ ಕಾನಾನ್ ದೇಶದಲ್ಲಿ ಇನ್ನೂ ಸ್ವಲ್ಪ ಆಹಾರವು ಲಭ್ಯವಿತ್ತು ಎಂಬುದೆ; ಹೇಗೂ, ರೊಟ್ಟಿಗಾಗಿ ಧಾನ್ಯವಿಲ್ಲದ್ದರಿಂದ, ಯಾಕೋಬನು ಬದುಕುಳಿಯುವದಕ್ಕೆ ಅಂತಹ ಆಹಾರವಸ್ತುಗಳು ಸಾಕಾಗುವದಿಲ್ಲವೆಂಬುದಾಗಿ ಯೋಚಿಸಿದಂತೆ ಕಾಣುತ್ತದೆ. ಅಬ್ರಹಾಮನ ಕಾಲದಲ್ಲಿ ಕ್ಷಾಮಕ್ಕೆ ಹೋಲಿಸಿದರೆ ಈ ಕ್ಷಾಮವು ಹೇಗೆ ಇತ್ತು? ಅದು ನಮಗೆ ತಿಳಿಸಲ್ಪಟ್ಟಿರುವದಿಲ್ಲ.

ಕಾನಾನ್ ದೇಶಕ್ಕೆ ಬಂದ ಬಳಿಕ, ಅಬ್ರಹಾಮನು ತನ್ನ ಜನರಿಗೋಸ್ಕರ ಆಹಾರ ಮತ್ತು ನೀರು ಹಾಗೂ ತನ್ನ ಪಶುಗಳಿಗೆ ಹುಲ್ಲನ್ನು ಕಂಡುಕೊಂಡಿದ್ದನು - ಆದರೆ ಈಗ ಆತನು ಜೀವಿಸುವದಕ್ಕೆ ಅತ್ಯಾವಶ್ಯಕವಾದ ಅಂಥ ವಸ್ತುಗಳನ್ನು ಎಲ್ಲಿ ಕಂಡುಕೊಳ್ಳಬಹುದಿತ್ತು? ಖಂಡಿತವಾಗಿಯೂ, ಕ್ಷಾಮವು ಎಲ್ಲಾ ಕಡೆಗಳಲ್ಲಿಯೂ ವ್ಯಾಪಿಸಿಕೊಂಡಿದ್ದರೆ ಮತ್ತು

ದೀರ್ಘಕಾಲದ ವರೆಗೂ ಇದ್ದಿದ್ದರೆ, ಅಂತಹ ಆಪತ್ತು ಅವನ ಐಶ್ವರ್ಯ, ಜೀವನೋಪಾಯ, ಹಾಗೂ ಭವಿಷ್ಯಕ್ಕೆ ಒಂದು ಅಪಾಯವನ್ನೊಡ್ಡಿರಬಹುದಾಗಿದೆ. ಆತನು ಏನು ಮಾಡಬೇಕು? ಆತನು ಈ ವಿಷಯವನ್ನು ಯೆಹೋವನ ಮುಂದೆ ತೆಗೆದುಕೊಂಡು ಹೋಗಿ ಆತನ ಮಾರ್ಗದರ್ಶನ ನೀಡುವಂತೆ ವಿನಂತಿಸಿಕೊಂಡನು, ಅಥವಾ ಕ್ಷಾಮವನ್ನು ಅಂತ್ಯಗೊಳಿಸಿ ಮಳೆಯನ್ನು ಕಳುಗಿಸಿ ಕೊಡುವಂತೆ ಪ್ರಾರ್ಥಿಸಿದನು ಎಂಬುದಕ್ಕೆ ಯಾವ ಸುಳಿವೂ ಇರುವದಿಲ್ಲ. ಬಹುಶಃ ಅಬ್ರಹಾಮನು "ತಮಗೆ ತಾವೇ ಸಹಾಯ ಮಾಡಿಕೊಳ್ಳುವವರಿಗೆ ಯೆಹೋವನು ಸಹಾಯ ಮಾಡುತ್ತಾನೆ"[25] ಎಂಬ ತತ್ವದ ಪ್ರಕಾರ ಕೆಲಸ ಮಾಡುವಂತ ಮನುಷ್ಯನಾಗಿದ್ದಿರಬಹುದು; ಅತ್ಯಂಥ ತಾರ್ಕಿಕವಾದ ನಿರ್ಣಯವನ್ನು ತಾನೇ ಮಾಡುವೆನೆಂದು ಯೋಚಿಸಿಕೊಂಡನು: ವಾಗ್ದಾನ ದೇಶವನ್ನು ಬಿಟ್ಟು ಹೋಗಿ ಐಗುಪ್ತದಲ್ಲಿ ನೆಲೆಸುವುದು. ಹೇಗೂ, ಈತನ ತೀರ್ಮಾನವು ಅನೇಕ ವರ್ಷಗಳ ನಂತರದಲ್ಲಿ ಜ್ಞಾನಿಯು ತಿಳಿಸುವಂಥ ಅಭಿಪ್ರಾಯವು ನೆನಪಿಗೆ ತರುತ್ತದೆ: "ಮನುಷ್ಯದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು. ಅದು ಕಟ್ಟಕಡೆಗೆ ಮರಣಮಾರ್ಗವೇ" (ಜ್ಞಾನೋಕ್ತಿ 14:12). ಕಾನಾನ್ ದೇಶವನ್ನು ತೊರೆದು ಐಗುಪ್ತಕ್ಕೆ ಹೋಗಬೇಕೆಂಬ ಅಬ್ರಹಾಮನ ನಿರ್ಣಯವು ಆತನಿಗಾಗಲಿ ಅಥವಾ ಬೇರೆ ಯಾರಿಗಾಗಲಿ ಮರಣವನ್ನುಂಟು ಮಾಡಲಿಲ್ಲವಾದರೂ, ಯೆಹೋವನು ಹಸ್ತಕ್ಷೇಪವನ್ನು ಮಾಡದೆ ಹೋಗಿದ್ದಲ್ಲಿ ಅದು ಖಚಿತವಾಗಿಯೂ ಸಂಭವಿಸಿರುತ್ತಿತ್ತು (ನೋಡಿರಿ 12:17).

ಸಹಜವಾದ ಪ್ರಶ್ನೆಯು ಉಳಿಯುತ್ತದೆ: ದೇವರು ಏಕೆ ತನ್ನ ಜನರ ಮೇಲೆ ಸಂಕಷ್ಟಗಳು ಬರುವಂತೆ ಅನುಮತಿಸುತ್ತಾನೆ? ನಮ್ಮ ನಂಬಿಕೆಯನ್ನು ಪರಿಶೋಧಿಸುವ ಅಗ್ನಿಗಳು ಕುಲುಮೆಯಲ್ಲಿ ಬಂಗಾರವನ್ನು ಅಶುದ್ಧತೆಯೊಳಗಿಂದ ಪ್ರತ್ಯೇಕಿಸುವಂಥ ಜ್ವಾಲೆಗಳಿದ್ದಂತೆ ಎಂಬುದಾಗಿ ಅಪೊಸ್ತಲನಾದ ಪೇತ್ರನು ಹೇಳುತ್ತಾನೆ (1 ಪೇತ್ರ 1:7). ಸಂಕಷ್ಟಗಳನ್ನು ಅನುಮತಿಸುವದರಲ್ಲಿ ದೇವರಿಗಿರುವ ಉದ್ದೇಶವು ನಮ್ಮ ನಂಬಿಕೆಯನ್ನು ಪ್ರಾಮಾಣೀಕರಿಸುವದು ಮಾತ್ರವೇ ಅಲ್ಲ, ಆದರೆ ಅದನ್ನು ಶುದ್ಧೀಕರಿಸಿ ಅದರೊಳಗಿಂದ ಅಶುದ್ಧತೆಯನ್ನು (ಅಪನಂಬಿಕೆ) ತೆಗೆದು ಹಾಕುವುದೇ ಆಗಿರುತ್ತದೆ. ಒಬ್ಬ ಮನುಷ್ಯನು ಒಂದು ಸಂದರ್ಭದಲ್ಲಿ ಯೇಸುವಿಗೆ ಹೀಗೆ ಹೇಳಿದನು, "ನಂಬುತ್ತೇನೆ, ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು" (ಮಾರ್ಕ 9:24). ಕೆಲವರ ಅಭಿಪ್ರಾಯಗಳಿಗೆ ತದ್ವಿರುದ್ಧವಾಗಿ, ಅಪನಂಬಿಕೆಯು ನಂಬಿಕೆಯುಳ್ಳವರ ಹೃದಯಗಳಲ್ಲಿ ಇರಬಲ್ಲದು ಮತ್ತು ಇರುತ್ತದೆ. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೀಗೆ ಹೇಳುತ್ತಾನೆ, "ನಂಬಿಕೆಯಿಂದಲೇ ಇಸ್ರಾಯೇಲ್ಯರು ಕೆಂಪುಸಮುದ್ರವನ್ನು ಒಣಭೂಮಿಯನ್ನು ದಾಟುವಂತೆ ದಾಟಿದರು" (ಇಬ್ರಿಯ 11:29); ಆದಾಗ್ಯೂ ಎಷ್ಟು ಶೀಘ್ರವಾಗಿ ಅರಣ್ಯದಲ್ಲಿ ಅವರ ಅಪನಂಬಿಕೆಯು ತೋರಿ ಬಂದಿತು! ದೇವರಲ್ಲಿ ಅವರಿಗಿರುವ ವಿಶ್ವಾಸದ ಕೊರತೆಯು ಕಾನಾನ್ ದೇಶದ ಗಡಿಯ ತನಕವೂ ಮುಂದುವರೆದಿತ್ತು (ಅರಣ್ಯಕಾಂಡ 14:11). ಅದೇ ರೀತಿಯಲ್ಲಿಯೇ, ಯೇಸುವಿನ ಶಿಷ್ಯರು ಆತನಲ್ಲಿ ನಂಬಿಕೆಯಿಟ್ಟಿದ್ದರು ಮತ್ತು ತಮ್ಮ ಬಲೆಗಳನ್ನು ಹಾಗೂ ಅವರ ವೃತ್ತಿಗಳನ್ನು ತೊರೆದು ಬಿಟ್ಟು ಆತನನ್ನು ಹಿಂಬಾಲಿಸಿದರು; ಆದಾಗ್ಯೂ ಅಪನಂಬಿಕೆಯ ವಿಷಯಗಳು ಸಹ ಅವರ ಹೃದಯಗಳೊಳಗೆ ಇದ್ದವು. ಆತನನ್ನು ಬಂಧಿಸಿದ ವೇಳೆಯಲ್ಲಿ ಈ ಸಂದೇಹಗಳು ಮೇಲ್ಗಡೆಯಲ್ಲಿ ಕಾಣಿಸಿಕೊಂಡವು, ಪೇತ್ರನು ಆತನನ್ನು ಅಲ್ಲಗಳೆಯುವಂತೆ ಮತ್ತು ಬೇರೆಯವರು ಕತ್ತಲೆಯೊಳಗೆ ಓಡಿ ಹೋಗುವಂತೆ ಮಾಡಿದ್ದವು (ಮತ್ತಾಯ 26:56; ಮಾರ್ಕ 14:66-72).

ನಂಬಿಕೆಯು ಬೆಳೆಯುವಂಥದ್ದು ಶಾರೀರಿಕ ಸ್ನಾಯುಗಳಂತೆಯೇ ಆಗಿರುತ್ತದೆ.

ಸ್ನಾಯುಗಳು ಬೆಳೆಯುವದಕ್ಕೆ ಇರುವ ಒಂದೇ ದಾರಿಯೆಂದರೆ ಯಾವದಾದರೂ ಭಾರವಾದ ಅಥವಾ ಕಷ್ಟಕರವಾದ ವಸ್ತುವಿನೊಂದಿಗೆ ವ್ಯಾಯಾಮ ಮಾಡುವದೇ ಆಗಿರುತ್ತದೆ, ಮತ್ತು ನಂಬಿಕೆಯ ಆತ್ಮೀಕ ಸ್ನಾಯುಗಳು ಬೆಳೆಯುವದಕ್ಕೆ ಏಕೈಕ ದಾರಿಯೆಂದರೆ ಜೀವನದ ಕಠಿಣ ಪರಿಸ್ಥಿತಿಗಳೊಂದಿಗೆ ವ್ಯಾಯಾಮ ಮಾಡುವದೇ ಆಗಿರುತ್ತದೆ. ಕೆಲವು ಜನರು ಒಂದು ಕ್ಲುಪ್ತ ಕಾಲದಲ್ಲಿಯೇ ದೃಢವಾದ ನಂಬಿಕೆಯನ್ನು ಬೆಳೆಸಿಕೊಳ್ಳುತ್ತಾರೆ; ಹೇಗೂ, ಅಬ್ರಹಾಮನಂತೆಯೇ, ನಮ್ಮಲ್ಲಿ ಬಹಳಷ್ಟು ಜನರಿಗಾದರೋ "ಕೆಡುಕನ ಅಗ್ನಿ ಬಾಣಗಳ" (ಎಫೆಸ 6:16) ವಿರುದ್ಧ ರಕ್ಷಣೆಯನ್ನು ಒದಗಿಸುವಂಥ ಗುರಾಣಿ ರೀತಿಯ ನಂಬಿಕೆಯನ್ನು ಬೆಳೆಸಿಕೊಳ್ಳುವದಕ್ಕೆ ಅನೇಕಾನೇಕ ವರ್ಷಗಳು ಬೇಕಾಗುತ್ತವೆ.

*ತನ್ನನ್ನು ಕಾಪಾಡಿಕೊಳ್ಳುವದಕ್ಕೆ ಸುಳ್ಳು ಹೇಳಬೇಕೆಂಬ ಶೋಧನೆ.* ಮೂಲಪಿತೃವು ಒಂದು ಕ್ಷಾಮದ ಸಮಸ್ಯೆಯಿಂದ ದೂರವಾಗಿ ಹೋಗಬೇಕೆಂಬುದಕ್ಕಾಗಿ ಕಾನಾನ್ ದೇಶವನ್ನು ತೊರೆದನು. ಅದು ಎಷ್ಟು ಘೋರವಾಗಿತ್ತು ಮತ್ತು ಎಷ್ಟು ವರ್ಷಗಳ ಕಾಲ ಇತ್ತು ಎಂಬುದು ಮುಖ್ಯವಲ್ಲ, ಒಂದು ಅರ್ಥದಲ್ಲಿ, ಆತನು ಒಂದು ಸಮಸ್ಯೆಯೊಳಗಿಂದ ಓಡಿ ಹೋಗಿ ಇನ್ನೂ ಘೋರವಾದ ಸಮಸ್ಯೆಯೊಂದರಲ್ಲಿ ಸೇರಿಕೊಂಡನು. ಒಬ್ಬ ವ್ಯಕ್ತಿಯು ಯಾವಾಗೆಲ್ಲಾ ಒಂದು ಪರೀಕ್ಷೆಯಿಂದ ತಪ್ಪಿಸಿಕೊಂಡು, ಅದನ್ನು ಎದುರಿಸುವದಕ್ಕೆ ನಿರಾಕರಿಸಿ ಓಡಿ ಹೋಗುತ್ತಾನೋ, ಬೇರೆ ಪರೀಕ್ಷೆಗಳು ಹೇಗಾದರೂ ಸಂಭವಿಸಿಯೇ ಆಗುತ್ತವೆ. ಅಬ್ರಹಾಮನು ಈ ವಿಷಯವಾಗಿ ಯೆಹೋವನಲ್ಲಿ ವಿಚಾರಿಸಿದನೆಂಬುದು ಪ್ರಸ್ತಾಪಿಸಲ್ಪಟ್ಟಿಲ್ಲವಾದ್ದರಿಂದ, ಬಹುಶಃ ಆತನು ಐಗುಪ್ತದಲ್ಲಿ ಸಾಕಷ್ಟು ಆಹಾರವಿದೆ ಎಂಬುದಾಗಿ ತನಗೆ ಹೇಳಿದ ಪ್ರಯಾಣಿಕರ ಸಲಹೆಯನ್ನು ಅನುಸರಿಸಿರಬಹುದು. ಆತನು ಐಗುಪ್ತಕ್ಕೆ ಸಮೀಪವಾಗುತ್ತಿದ್ದ ಹಾಗೆ, ಆತನನ್ನು ಭಯವು ಆವರಿಸಿಕೊಂಡಿತ್ತು; ಯಾಕೆಂದರೆ ದೂರದ ದೇಶಗಳಿಂದ ಬರುವ ಪರದೇಶಸ್ಥರನ್ನು ಐಗುಪ್ತರು ದುರ್ಬಳಕೆ ಮಾಡಿಕೊಳ್ಳುತ್ತಾರೆ, ಅವರನ್ನು ಕೊಂದು ಅವರ ಹೆಂಡತಿಯರನ್ನು ಅಪಹರಿಸುತ್ತಾರೆ ಎಂಬ ಸುದ್ದಿಯನ್ನು ಸಹ ಆತನು ಕೇಳಿಸಿಕೊಂಡಿದ್ದನು. ಈ ಕಾರಣದಿಂದಲೇ ಅಬ್ರಹಾಮನು ಸಾರಳನ್ನು ಐಗುಪ್ತರಿಗೆ ತನ್ನ ತಂಗಿ ಎಂಬುದಾಗಿ ಪರಿಚಯಿಸಲು ನಿರ್ಧರಿಸಿದ್ದನು. ಇದು ಅರೆ-ಸತ್ಯವಾಗಿತ್ತಾದರೂ (ನೋಡಿರಿ 20:1, 2, 12, 18), ಅದು ಇಚ್ಛಾಪೂರ್ವಕವಾಗಿ ಮಾಡಿದ ವಂಚನೆ ಆಗಿತ್ತು ಮತ್ತು ದೇವರ ವಾಗ್ದಾನದ ಮಗುವಾದ, ಇಸಾಕನ ಜನನವನ್ನು ಸಹ ತಡೆಗಟ್ಟಿರಬಹುದಾದಂಥ ಅಸಹ್ಯಕರವಾದ ಕಳ್ಳಾಟವಾಗಿತ್ತು. ಅದರ ಜೊತೆಗೆ, ಇದು ಮೂಲಪಿತೃವಿನ ಸ್ವಾರ್ಥದಿಂದ ಕೂಡಿದ ಮನೋಭಾವವನ್ನು ತೋರಿಸಿ ಕೊಟ್ಟಿತು. ಎಂಥಾ ಸಂದರ್ಭ ಬಂದಾಗ್ಯೂ ತನ್ನ ಹೆಂಡತಿಯನ್ನು ಪ್ರೀತಿಸಿ, ಅಮೂಲ್ಯವೆಂದೆಣಿಸಿಕೊಂಡು, ಮತ್ತು ಆಕೆಯನ್ನು ಕಾಪಾಡುವದಕ್ಕೆ ವಿಫಲನಾದನು (ನೋಡಿರಿ ಎಫೆಸ 5:25-29), ಅಬ್ರಹಾಮನು ತನ್ನ ಪ್ರಾಥಮಿಕ ಕಾಳಜಿಯನ್ನು ವ್ಯಕ್ತಪಡಿಸಿದನು, "... ನಿನ್ನ ನಿಮಿತ್ತ ನನಗೆ ಹಿತವಾಗುವದು, ನಾನು ನಿನ್ನ ದೆಸೆಯಿಂದ ಸಾಯದೆ ಬದುಕುವೆನು [ನಿನಗೆ ಏನೇ ಸಂಭವಿಸಿದರೂ ಚಿಂತೆಯಿಲ್ಲ]" (12:13).

ಸಾರಳಿಗೆ ಬದುಕಿರುವ ತಂದೆಯಿರಲಿಲ್ಲ ಮತ್ತು ಅಬ್ರಹಾಮನು ಆಕೆಯ ಅಣ್ಣನೆಂದು ಹೇಳಿಕೊಂಡದ್ದರಿಂದ, ಪ್ರಾಚೀನ ಜಗತ್ತಿನ ಪದ್ಧತಿಗಳ ಪ್ರಕಾರ ಆಕೆಯನ್ನು ಹೆಂಡತಿಯನ್ನು ತೆಗೆದುಕೊಳ್ಳುವ ಯಾವದೇ ವ್ಯಕ್ತಿಯು ಮೂಲಪಿತೃವಿಗೆ ವದುವಿನ ಬೆಲೆಯನ್ನು ಸಂದಾಯ ಮಾಡಬೇಕಾಗಿತ್ತು. ಅಬ್ರಹಾಮನ ಸ್ವಾರ್ಥ ಕೃತ್ಯದ ಮತ್ತೊಂದು ಕವಲು ಆಗಿತ್ತು: ಮೊದಲನೆಯದಾಗಿ, ಅಬ್ರಹಾಮನ ಪ್ರಾಣವು ಉಳಿಸಲ್ಪಡುವುದು; ಎರಡನೆಯದಾಗಿ, ಈ ವ್ಯವಹಾರದಿಂದ ಆತನು ಶ್ರೀಮಂತನಾಗಲಿದ್ದನು. ಖಂಡಿತವಾಗಿಯೂ, ಫರೋಹನು

ಸಾರಳನ್ನು ತನ್ನ ಉಪಪತ್ನಿಯನ್ನಾಗಿ ತೆಗೆದುಕೊಂಡಾಗ ಸರಿಯಾಗಿ ಹೀಗೆಯೇ ಸಂಭವಿಸಿತ್ತು: ಆತನು ಮೂಲಪಿತೃವಿಗೆ ಕುರಿಗಳನ್ನು, ಎತ್ತುಗಳನ್ನು, ಕತ್ತೆಗಳನ್ನು, ಒಂಟೆಗಳನ್ನು, ಮತ್ತು ದಾಸರನ್ನು ಬಹುಮಾನವಾಗಿ ಕೊಟ್ಟನು (12:16).

ಫರೋಹನ ಮನೆಯವರ ಮೇಲೆ ಉಪದ್ರವಗಳ ಬಂದು ತಾನು ವಂಚಿಸಲ್ಪಟ್ಟಿದ್ದೇನೆಂಬುದನ್ನು ಗ್ರಹಿಸಿಕೊಂಡಾಗಲೇ, ಆತನು ಅಬ್ರಹಾಮನನ್ನು ಆತನ ಅಪ್ರಾಮಾಣಿಕತೆಗಾಗಿ ಗದರಿಸಿದನು ಮತ್ತು ಆತನನ್ನು ಐಗುಪ್ತದಿಂದ ಹೊರಕ್ಕೆ ಕಳುಹಿಸಿದನು. ತಾನು ಒಬ್ಬ ಸ್ವಾರ್ಥಿಯಾದ ಕಪಟಿ ಎಂಬುದು ಬಯಲಿಗೆ ಬಂದಾಗ ಮತ್ತು ಒಬ್ಬ ಅನ್ಯಧರ್ಮಿಯ ಅರಸನಿಂದ ಸುಳ್ಳುಗಾರನೆಂದು ಗದರಿಸಲ್ಪಟ್ಟಾಗ ಅಬ್ರಹಾಮನಿಗೆ ಬಹಳ ಅವಮಾನವಾಗಿರಬಹುದು. ಅದೊಂದು ನೋವುಕರವಾದ ಘಟನಾವಳಿ ಆಗಿತ್ತು, ಆದರೆ ತನ್ನ ಸ್ವಂತ ಸಂಕಲ್ಪಗಳ ಬದಲಾಗಿ ಯೆಹೋವನ ಮೇಲೆಯೇ ಆಧಾರವಾಗಿರುವದರಲ್ಲಿ ನಂಬಿಗಸ್ತನಾಗಿರುವಂತೆ ಭವಿಷ್ಯದ ಪಿತೃವಿಗೆ ಕಲಿಸಿ ಕೊಡುವದು ಅಗತ್ಯವಾಗಿತ್ತೆಂದು ಸ್ಪಷ್ಟವಾಗುತ್ತದೆ.

ಇಂತಹ ಕಥೆಗಳು ವಿಶ್ವಾಸಿಗಳಿಗೆ ಅನೇಕ ಸಾರಿ ಮುಜುಗರವನ್ನುಂಟು ಮಾಡಿರುತ್ತವೆ. ನಾವು ವೀರರನ್ನು ಒಂದು ಉನ್ನತವಾದ ಮಟ್ಟದಲ್ಲಿಡುವ ಪ್ರವೃತ್ತಿ ಹೊಂದಿರುತ್ತೇವೆ, ಅವರ ಹೊಳೆಯುವ ಆಯುಧದಲ್ಲಿ ಯಾವದೇ ಆತ್ಮೀಕ ಬಿರುಕುಗಳಿಲ್ಲ ಎಂಬಂತೆ ಭಾವಿಸುತ್ತೇವೆ. ಹೇಗೂ, ಯೆಹೋವನು ಯಾವ ವ್ಯಕ್ತಿಗಳನ್ನು ತನ್ನ ಸೇವಕರಾಗಿರಬೇಕೆಂದು ಕರೆದಿದ್ದನೋ ಅವರ ಜೀವಿತಗಳಲ್ಲಿರುವ ಪಾಪಗಳ ಕುರಿತು ಬೈಬಲ್ ಬಹಳ ಸ್ಪಷ್ಟವಾಗಿ ಮಾತಾಡುತ್ತದೆ. ಅದು ಅವರ ವಿಫಲತೆಗಳನ್ನು ಮುಚ್ಚಿ ಅವುಗಳನ್ನು ಥಳಿಥಳಿಸುವಂತೆ ಕಾಣುವ ಹಾಗೆ ಮಾಡುವದೇ ಇಲ್ಲ. ನಾವು ಮೋಶೆಯ ದುರ್ಬಲತೆಗಳ ಬಗ್ಗೆ ಓದುತ್ತೇವೆ (ಅರಣ್ಯಕಾಂಡ 20:1-13), ದಾವೀದನ (2 ಸಮುವೇಲ 11:1-12:14), ಸೊಲೊಮೋನನ (1 ಅರಸು 11:1-43), ಮತ್ತು ಅಪೊಸ್ತಲರ ದುರ್ಬಲತೆಗಳ ಬಗ್ಗೆ ಓದುತ್ತೇವೆ. ಬೈಬಲಿನಲ್ಲಿರುವ ವ್ಯಕ್ತಿಗಳ ಬಲಗಳ ಹಾಗೂ ಬಲಹೀನತೆಗಳೆರಡನ್ನೂ ದಾಖಲಿಸುತ್ತದೆಂಬ ವಾಸ್ತವಾಂಶವು ಅದರ ಚರಿತ್ರೆಗಳಿಗೆ ವಿಶ್ವಾಸರ್ಹತೆಯನ್ನು ಒದಗಿಸುತ್ತದೆ. ಒಬ್ಬ ಮನುಷ್ಯನ ಪಾಪಗಳನ್ನು ಮತ್ತು ದೋಷಗಳನ್ನು ಮಿತಿಗೊಳಿಸುವ ಅಥವಾ ನಿರ್ಮೂಲಗೊಳಿಸುವಂಥ ಏಕಪಕ್ಷೀಯವಾದ ಅಭಿಪ್ರಾಯವನ್ನು ಮಾತ್ರವೇ ದೇವರ ವಾಕ್ಯವು ತಿಳಿಸುವದಿಲ್ಲ.

ಅದರ ಜೊತೆಗೆ, ಶಾಸ್ತ್ರಗಳು ಪ್ರತಿಯೊಂದು ತಲೆಮಾರಿನಲ್ಲಿರುವ ವಿಶ್ವಾಸಿಗಳಿಗೆ ಎಚ್ಚರಿಕೆಗಳನ್ನು ನೀಡುವದಕ್ಕಾಗಿ ಬೈಬಲಿನ ವ್ಯಕ್ತಿಗಳ ಬಗ್ಗೆ ಪ್ರಾಮಾಣಿಕವಾದ ಚಿತ್ರಣವನ್ನು ನೀಡುತ್ತವೆ. ದೇವರ ಜನರು ಕೆಲವು ಸಾರಿ ಅತಿಯಾದ ಆತ್ಮವಿಶ್ವಾಸದಿಂದ ಕೂಡಿದವರಾಗಿ, ತಾವು ಶೋಧನೆಯೊಳಗೆ ಬೀಳದಷ್ಟು ಅಥವಾ ಗಂಭೀರವಾದ ಪಾಪಕ್ಕೆ ದಾಸನಾಗದಷ್ಟು ಬಲಿಷ್ಠನು ಅಥವಾ ಆತ್ಮೀಕವಾಗಿರುವವನು ಎಂದು ಭಾವಿಸಿಕೊಳ್ಳುತ್ತಾರೆ. ಮತ್ತಾಯ 26ರಲ್ಲಿ, ಯೇಸುವು "ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡುಕೊಡುವನು" ಎಂದು ಹೇಳುವದನ್ನು ಶಿಷ್ಯರು ಕೇಳಿಸಿಕೊಂಡಾಗ (ಮತ್ತಾಯ 26:21, 22), ತಾವು ಅಂಥ ಕೃತ್ಯವನ್ನು ಮಾಡಿದ ಅಪರಾಧಕ್ಕೊಳಗಾಗಲು ಸಾಧ್ಯವಿರುತ್ತದೆಂಬುದನ್ನು ಅವರು ಅಲ್ಲಗಳೆದರು. ಅಪೊಸ್ತಲರೊಳಗೆ ಪ್ರಮುಖನಾಗಿದ್ದ ಪೇತ್ರನು ಹೀಗೆ ಘೋಷಿಸಿದನು, "ಎಲ್ಲರೂ ನಿನ್ನ ವಿಷಯದಲ್ಲಿ ದಿಗಿಲುಪಟ್ಟು ಹಿಂಜರಿದರೂ ನಾನು ಎಂದಿಗೂ ಹಿಂಜರಿಯುವದಿಲ್ಲ"; ಆದರೆ ಯೇಸುವು ಉತ್ತರಿಸಿ ಹೀಗೆ ಹೇಳಿದನು, "... ಇದೇ ರಾತ್ರಿಯಲ್ಲಿ ಕೋಳಿಕೂಗುವದಕ್ಕಿಂತ ಮುಂಚೆ ನೀನು ನನ್ನ ವಿಷಯದಲ್ಲಿ - ಅವನನ್ನು ಅರಿಯೆನೆಂಬದಾಗಿ ಮೂರು ಸಾರಿ ಹೇಳುವಿ" (ಮತ್ತಾಯ 26:33, 34).

ಅಂತಿಮವಾಗಿ, "ಪೇತ್ರನು ಆತನಿಗೆ - ನಾನು ನಿನ್ನ ಸಂಗಡ ಸಾಯಬೇಕಾದರೂ ನಿನ್ನನ್ನು ಅರಿಯೆನೆಂಬದಾಗಿ ಹೇಳುವದೇ ಇಲ್ಲ ಎಂದು ಹೇಳಿದನು" (ಮತ್ತಾಯ 26:35). ಯೇಸುವಿನ ಸಂಗಡ ಮೂರು ವರ್ಷಗಳ ಕಾಲವಿದ್ದ ಈ ಶಿಷ್ಯರಿಂದಾದ ಈ ವಿಫಲತೆಯ ಕುರಿತು ದುಃಖಕರ ಕಥೆಯನ್ನು ತಿಳಿಸುವದರಲ್ಲಿನ ಕಾರಣವು ಏನೆಂದರೆ, ದೇವರ ಜನರು ಶೋಧನೆಯ ಶಕ್ತಿಯನ್ನು ಎಂದಿಗೂ ಹಗುರವಾಗಿ ಪರಿಗಣಿಸಬಾರದು ಎಂಬುದನ್ನು ತಿಳಿಸುವದೇ ಆಗಿರುತ್ತದೆ. ಇಂಥ ಹಿಡಿತಗಳಿಗೆ ಒಳಗಾಗದೆ ಇರುವದಕ್ಕೆ ಯಾರೊಬ್ಬರಿಂದಲೂ ಸಾಧ್ಯವಿಲ್ಲ.

ಇದೇ ರೀತಿಯ ಎಚ್ಚರಿಕೆಯನ್ನು ಪೌಲನು ಕೊರಿಂಥದ ಸಭೆಗೆ ಕೊಟ್ಟಿರುತ್ತಾನೆ, ಅವರು ತಮ್ಮ ಆತ್ಮೀಕ ವರಗಳ ಹೊಳಪಿನಲ್ಲಿ ಹಾಯಾಗಿದ್ದ ಕಾರಣದಿಂದ ಶೋಧನೆಗೆ ಒಳಗಾಗುವ ಸಾಧ್ಯತೆ ಇತ್ತೆಂಬುದು ಆತನ ಯೋಚನೆಯಾಗಿತ್ತು. ಅದಕ್ಕೆ ತದ್ವಿರುದ್ಧವೇನೆಂದರೆ, ಅವರು "ದೇವರಾತ್ಮನಿಂದ ನಡಿಸಿಕೊಳ್ಳುವವರು" ಸಹ ಆಗಿರಲಿಲ್ಲ. ಅವರು "ಪ್ರಾಪಂಚಿಕರೂ," "ಕ್ರಿಸ್ತನ ವಿಷಯದಲ್ಲಿ ಎಳೆಗೂಸುಗಳೂ" ಮಾತ್ರವೇ ಆಗಿದ್ದರು (1 ಕೊರಿಂಥ 3:1). ಅವರೊಳಗೆ ತೋರಿ ಬರುತ್ತಿದ್ದ "ಹೊಟ್ಟೇಕಿಚ್ಚು ಜಗಳಗಳು" ಇದ್ದವು ಎಂಬುದೇ ಅವರು ಆತ್ಮೀಕವಾಗಿ ಅಪರಿಪಕ್ವರು ಎಂಬುದಕ್ಕೆ ಪುರಾವೆ ಆಗಿತ್ತು (1 ಕೊರಿಂಥ 3:2, 3). ಅವರು "ಒಬ್ಬ ಬೋಧಕನನ್ನು ವಿರೋಧಿಸಿ ಮತ್ತೊಬ್ಬನ ಪಕ್ಷವನ್ನು ಹಿಡಿದುಕೊಂಡು ಉಬ್ಬಿ"ಕೊಂಡವರು (1 ಕೊರಿಂಥ 4:6) ಮತ್ತು "ಗರ್ವಿಷ್ಠರು" (KJV) ಆಗಿದ್ದರು.

ಅಪೊಸ್ತಲನು ಈ ದೇವರ ಮಕ್ಕಳಿಗೆ ಅವರ ಆತ್ಮೀಕ ಮೂಲಪಿತೃಗಳಿಗೆ ಏನು ಸಂಭವಿಸಿತು ಎಂಬುದನ್ನು ನೆನಪಿಸಿಕೊಳ್ಳಿರಿ ಎಂದು ಕರೆ ಕೊಟ್ಟನು, ಅವರು "ಮೇಘದ ನೆರಳಿನಲ್ಲಿದ್ದರು; ಅವರೆಲ್ಲರೂ ಸಮುದ್ರವನ್ನು ದಾಟಿಹೋದರು; ಅವರೆಲ್ಲರೂ ಮೋಶೆಯ ಶಿಷ್ಯರಾಗುವದಕ್ಕಾಗಿ ಮೇಘದಲ್ಲಿಯೂ ಸಮುದ್ರದಲ್ಲಿಯೂ ದೀಕ್ಷಾಸ್ನಾನವನ್ನು ಹೊಂದಿದರು" (1 ಕೊರಿಂಥ 10:1, 2). ಆತನು ವಾದಿಸಿದ್ದೇನೆಂದರೆ ಅವರು "ಅವರೆಲ್ಲರೂ ದೈವಿಕವಾದ ಒಂದೇ ನೀರನ್ನು ಕುಡಿದರು; ಹೇಗಂದರೆ ಅವರ ಹಿಂದೆ ಹೋಗುತ್ತಿದ್ದ ದೈವಿಕವಾದ ಬಂಡೆಯೊಳಗಿಂದ ಬಂದ ನೀರನ್ನು ಕುಡಿಯುತ್ತಿದ್ದರು; ಆ ಬಂಡೆ ಕ್ರಿಸ್ತನೇ" (1 ಕೊರಿಂಥ 10:3, 4). ಬಳಿಕ ಪೌಲನು ಕೊರಿಂಥದವರಿಗೆ ಯೆಹೋವನು ಇಸ್ರಾಯೇಲ್ಯರ ವಿಷಯದಲ್ಲಿ ಅಸಮಾಧಾನಗೊಂಡನು ಎಂಬುದನ್ನು ಜ್ಞಾಪಿಸುವ ಮೂಲಕ ಬುದ್ಧಿವಾದ ಹೇಳುತ್ತಾನೆ. ಆತನು ಹೇಳಿದ್ದೇನೆಂದರೆ, "ಆದರೂ ಅವರೊಳಗೆ ಬಹುಮಂದಿಯ ವಿಷಯದಲ್ಲಿ ದೇವರು ಸಂತೋಷಿಸಲಿಲ್ಲ. ಅವರು ಅಡವಿಯಲ್ಲಿ ಸಂಹರಿಸಲ್ಪಟ್ಟರೆಂದು ಬರೆದದೆಯಷ್ಟೆ. ಅವರು ಕೆಟ್ಟ ವಿಷಯಗಳನ್ನು ಆಶಿಸಿದಂತೆ ನಾವು ಆಶಿಸುವವರಾಗಬಾರದೆಂಬದಕ್ಕಾಗಿ ಈ ಸಂಗತಿಗಳು ನಮಗೆ ನಿದರ್ಶನಗಳಾಗಿವೆ" (1 ಕೊರಿಂಥ 10:5, 6). ಅಪೊಸ್ತಲನು ಕೊರಿಂಥದವರನ್ನು ಅರಣ್ಯದಲ್ಲಿ ಇಸ್ರಾಯೇಲ್ಯರು ಮಾಡಿದ ರೀತಿಯಲ್ಲಿ ನೀವು ಅನುಕರಣೆ ಮಾಡದಿರಿ ಎಂದು ಎಚ್ಚರಿಸಿದನು, ಮತ್ತು ಈ ಸನ್ನಿವೇಶದಲ್ಲಿಯೇ ಆತನು ಆ ಕ್ರೈಸ್ತರಿಗೆ "ಬೀಳದಂತೆ" ಅವರು "ಎಚ್ಚರಿಕೆಯಾಗಿರಲಿ" ಎಂದು ಕಲಿಸಿದನು (1 ಕೊರಿಂಥ 10:12).

ಅಬ್ರಹಾಮನ ಪಾಪವು ಇಂದು ನಮಗೆ ಒಂದು ನಕಾರಾತ್ಮಕ ಉದಾಹರಣೆಯನ್ನು ಒದಗಿಸುತ್ತದೆ. ಒಟ್ಟಾರೆಯಾಗಿ, ದೇವರ ವಾಕ್ಯವು ನಮಗೆ ಹೀಗೆ ಹೇಳುತ್ತಿದೆ, "ಸ್ವಾರ್ಥಿಗಳಾಗಿರದಿರಿ, ನೀವು ಪ್ರೀತಿಸಬೇಕಾಗಿರುವ, ಅಮೂಲ್ಯರೆಂದೆಣಿಸಿಕೊಳ್ಳಬೇಕಾದ, ಮತ್ತು ಕಾಪಾಡಬೇಕಾದ ಬೇರೆಯವರ ಬಗ್ಗೆ ಕಾಳಜಿಯೇ ಇಲ್ಲದಂತೆ, ನಿಮ್ಮನ್ನು ರಕ್ಷಿಸಿಕೊಳ್ಳಬೇಕೆಂಬುದಕ್ಕೋಸ್ಕರ ಸುಳ್ಳುಗಳ ಮತ್ತು ಮೋಸದ ಬಲೆಯನ್ನು ಹೆಣೆಯದಿರಿ."

## ಅಡಿಟಿಪ್ಪಣಿಗಳು

[1]Kenneth A. Mathews, *Genesis 11:27—50:26*, The New American Commentary, vol. 1B (Nashville: Broadman & Holman Publishers, 2005), 109. [2]Gordon J. Wenham, *Genesis 1—15*, Word Biblical Commentary, vol. 1 (Waco, Tex.: Word Books, 1987), 274. [3]NASBಯೊಳಗೆ 12:2ರಲ್ಲಿ ಇಬ್ರಿಯ ಪರಿಚ್ಛೇದದ ಅಕ್ಷರಶಃ ಅರ್ಥವು ಇರುತ್ತದೆ: "ನೀನು ಒಂದು ಆಶೀರ್ವಾದವಾಗಿರಬೇಕು." ಹೇಗೂ, ಬಹುಪಾಲು ಅನುವಾದಗಳು, ಬದಿಯ ವ್ಯಾಖ್ಯಾನಗಳು, ಮತ್ತು ಅಡಿಟಿಪ್ಪಣಿಗಳು ಈ ಹೇಳಿಕೆಯು ವಾಸ್ತವಿಕದಲ್ಲಿ ಒಂದು ಆಜ್ಞಾರ್ಥಕವಾಗಿದೆ ಎಂಬುದನ್ನು ಸೂಚಿಸುವದಿಲ್ಲ. [4]ಇದೇ ಪದವು ಇಬ್ರಿಯ ಭಾಷೆಯಲ್ಲಿ (עֶבֶד, *ಎಬೆದ್*) "ಸೇವಕ" ಅಥವಾ "ಗುಲಾಮ" ಎಂಬ ಅರ್ಥವನ್ನು ಕೊಡುತ್ತದೆ; ಹೇಗೂ, ಮೇಲಿನ ಸನ್ನಿವೇಶದಲ್ಲಿ, ಅದು ಗುಲಾಮರನ್ನು ಸೂಚಿಸುವಂತೆ ಕಾಣಿಸುತ್ತದೆ ಯಾಕೆಂದರೆ 14:14ರಲ್ಲಿ, ಅಬ್ರಹಾಮನಿಗೆ ಸೇರಿದ 318 ಹೋರಾಟಗಾರರು ಆತನ "ಮನೆಯಲ್ಲೇ ಹುಟ್ಟಿ" ಬೆಳೆದಿದ್ದರು ಎಂದು ಹೇಳಲಾಗಿರುತ್ತದೆ. [5]ಅಬ್ರಹಾಮನ ಬಳಿಯಲ್ಲಿ ಕುದುರೆ-ವೀರರಾಗಿದ್ದ ಅಷ್ಟೊಂದು ಬೃಹತ್ ಸಂಖ್ಯೆಯ ಸೇವಕರು/ಗುಲಾಮರು ಇದ್ದರಾದ್ದರಿಂದ (14:14), ಹೆಂಡತಿಯರು ಮತ್ತು ಮಕ್ಕಳು ಸೇರಿದಂತೆ ಆತನ ಪರಿವಾರದಲ್ಲಿ ಒಂದು ಸಾವಿರಕ್ಕೂ ಅಧಿಕ ಜನರು ಇದ್ದರೆಂದು ಅಂದಾಜು ಮಾಡಲಾಗುತ್ತದೆ. [6]ಅಬ್ರಹಾಮನು ಹಾರಾನಿನಿಂದ ಕಾನಾನ್ ದೇಶಕ್ಕೆ ಪ್ರಯಾಣಿಸುವ ಮಾರ್ಗದಲ್ಲಿ ದಮಸ್ಕವನ್ನು ಹಾದು ಹೋಗುವಾಗ, ದಮಸ್ಕದ ಎಲೀಯೆಜರನನ್ನು ದಾಸನಾಗಿ ಸಂಪಾದಿಸಿಕೊಂಡಿರಬಹುದಾಗಿದೆ (15:2). [7]ಹೊಸ ಒಡಂಬಡಿಕೆಯ ಕಾಳಗಳಲ್ಲಿ, ಸುಖರ ಎಂಬ ಊರು ಪ್ರಾಚೀನ ಶೆಕೆಮಿನ ಸ್ಥಳದಲ್ಲಿ ಇದ್ದಿರಬಹುದಾಗಿದೆ (ಯೋಹಾನ 4:5). ಇಂದು, ನಬ್ಲೂಸ ಪಟ್ಟಣವು ಈ ಸ್ಥಳದಲ್ಲಿ ಕಂಡು ಬರುತ್ತದೆ. [8]ಬಹುವಚನದಲ್ಲಿ ವ್ಯಕ್ತಪಡಿಸುವ ಇದೇ ಇಬ್ರಿಯ ಪದವು ಧರ್ಮೋಪದೇಶಕಾಂಡ 11:30ರಲ್ಲಿ ಬಳಸಲ್ಪಟ್ಟಿದೆ: "ಮೋರೆ ಎಂಬ ವೃಕ್ಷ." [9]ದೇವರು ಈ ಮುಂಚೆ ಸಹ ಹಾರಾನಿನಲ್ಲಿ ಅಬ್ರಹಾಮನ ಸಂಗಡ ಮಾತಾಡಿದ್ದನು (12:1, 4), ಆದರೆ ಅಲ್ಲಿ ಪ್ರತ್ಯಕ್ಷತೆಯ ಕುರಿತು ಯಾವ ಪ್ರಸ್ತಾಪವೂ ಮಾಡಲ್ಪಟ್ಟಿಲ್ಲ. [10]ನೋಡಿರಿ 13:15, 16; 15:18; 17:7-10, 12, 19; 22:17, 18; 24:7; 26:3; 28:4, 13.

[11]ಮೂಲಪಿತೃಗಳಿಂದ ಹಲವಾರು ಯಜ್ಞವೇದಿಗಳು ಕಟ್ಟಲ್ಪಟ್ಟವು: ಶೆಕೆಮಿನಲ್ಲಿ (12:7), ಬೇತೇಲ್ (12:8), ಹೆಬ್ರೋನ್ (13:18), ಮತ್ತು ಮೊರೀಯ ಪರ್ವತಗಳಲ್ಲಿ ಅಬ್ರಹಾಮನು ಕಟ್ಟಿದನು (22:9); ಬೇರ್ಷೆಬದಲ್ಲಿ ಇಸಾಕನು (26:25); ಮತ್ತು ಶೆಕೆಮ (33:20) ಮತ್ತು ಬೇತೇಲ್ (35:7) ಇವುಗಳಲ್ಲಿ ಯಾಕೋಬನು ಕಟ್ಟಿಸಿದನು. [12]ಆಯಿ ಪಟ್ಟಣದ ಗುರುತಿನ ಕುರಿತಾದ ಒಂದು ಚರ್ಚೆಗಾಗಿ, ನೋಡಿರಿ R. K. Harrison, "Ai," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1979), 1:81–84. [13]ಬೈಬಲಿನ ಹೊರತಾದ ಪ್ರಾಚೀನ ದಾಖಲೆಗಳು ಬರಗಾಲ/ಕ್ಷಾಮದಿಂದ ಬದುಕುಳಿಯುವದಕ್ಕೋಸ್ಕರ ಜನರು ಐಗುಪ್ತಕ್ಕೆ ಬರುತ್ತಿದ್ದರು ಎಂಬುದನ್ನು ವರದಿ ಮಾಡುತ್ತವೆ. ಉದಾಹರಣೆಗೆ, ಏದೋಮ್ಯಕ್ಕೆ ಸೇರಿದ ಬೆದೋವಿನ್ ಗೋತ್ರದವರನ್ನು "ಅವರನ್ನು ಹಾಗೂ ಅವರ ಪಶುಗಳನ್ನು ಜೀವಂತವಾಗಿರಿಸಿಕೊಳ್ಳಲು" ಐಗುಪ್ತದೊಳಗೆ ಪ್ರವೇಶಿಸಲು ಹಾಗೂ ನೀರಿನ ಹೊಂಡಗಳಿಂದ ನೀರು ತೆಗೆದುಕೊಳ್ಳಲು ಅನುಮತಿಸಲಾಗುತ್ತಿತ್ತು. (John A. Wilson, trans., "The Report of a Frontier Official," in *Ancient Near Eastern Texts Relating to the Old Testament*, 3d ed., ed. James B. Pritchard [Princeton, N.J.: Princeton University Press, 1969], 259.) [14]ಹಾರಾನಿನಿಂದ ಹೊರಟ ವೇಳೆ ಅಬ್ರಹಾಮನು ಎಪ್ಪತ್ತೈದು ವಯಸ್ಸಿನವನಾಗಿದ್ದನು (12:4), ಮತ್ತು ಸಾರಳು ಆತನಿಗಿಂತ ಹತ್ತು ವರ್ಷ ಕಿರಿಯವಳಾಗಿದ್ದಳು (17:17). [15]ಐಗುಪ್ತದ ಭಾಷೆಯಲ್ಲಿ, "ಫರೋಹ" ಎಂಬ ಪದದ ಮೂಲ ಅರ್ಥವು "ದೊಡ್ಡ ಮನೆ" ಎಂದಾಗಿರುತ್ತದೆ, ಇದು ಅರಸನ ಅರಮನೆಯನ್ನು ಸೂಚಿಸುವದಾಗಿದೆ. ಕಾಲವು ಗತಿಸಿದಂತೆ, ಅದು ಸ್ವತಃ ಅರಸನ ಬಿರುದಾಗಿ ಬಳಕಗೆ ಬಂದಿತು. [16]ಈ ಹಣ ಸಂದಾಯವನ್ನು ಒಂದು "ವಧು ದಕ್ಷಿಣೆ" (מֹהַר, *ಮೊಹರ್)* ಎಂದು ಅರ್ಥಮಾಡಿಕೊಳ್ಳತಕ್ಕದ್ದು (ನೋಡಿರಿ 34:11, 12; ವಿಮೋಚನಕಾಂಡ 22:16; 1 ಸಮುವೇಲ 18:22-27). ಸಾರಳ ತಂದೆಯು ಈಗ ಬದುಕಿರಲಿಲ್ಲವಾದ್ದರಿಂದ (11:32), ವಧು ದಕ್ಷಿಣೆಯನ್ನು ಆಕೆಯ ಅಣ್ಣನಾದ ಅಬ್ರಹಾಮನಿಗೆ ಕೊಡತಕ್ಕದ್ದಾಗಿತ್ತು. [17]ಅಬ್ರಹಾಮನು ಕ್ಷಾಮದ ಕಾರಣದಿಂದಾಗಿ ಕಾನಾನ್ ದೇಶವನ್ನು ತೊರೆದು ಐಗುಪ್ತಕ್ಕೆ ಹೋಗಬೇಕಾಗಿ ಬಂದಿದ್ದಲ್ಲಿ, ಆತನ ಸಂಗಡ ಲೋಟ ಮತ್ತು ಎಲ್ಲಾ ಜನರು, ಜೊತೆಗೆ ಆತನ ಪ್ರಾಣಿಗಳೆಲ್ಲಾ ಸಹ ಆಹಾರ ಹಾಗೂ ನೀರು ಕಂಡುಕೊಳ್ಳಲು ಹೋಗಿರಬೇಕು ಎಂಬುದು ತಾರ್ಕಿಕವಾಗಿರುತ್ತದೆ. [18]Juris Zarins, "Camel," in *The Anchor Bible Dictionary*, ed. David Noel Freedman (New York: Doubleday, 1992), 1:825–26. [19]*ನೆಗಾ* ಎಂಬುದರ ಕ್ರಿಯಾಪದ ರೂಪವು 2 ಅರಸು 15:5ರಲ್ಲಿ ಬಳಸಲ್ಪಟ್ಟಿದೆ, ಅದು ಹೇಳುವದೇನೆಂದರೆ "ಯೆಹೋವನು ಇವನನ್ನು ... *ಬಾಧಿಸಿದನು"* (ಒತ್ತಿ ಹೇಳಿದ್ದು ನನ್ನದು). [20]ಹೇಗೂ, ಇದೇ ರೀತಿಯ ಪರಿಸ್ಥಿತಿಯೊಂದಲ್ಲಿ ಆತನ ಪ್ರತಿಕ್ರಿಯೆಯು ಏನಾಗಿತ್ತದೆಂಬುದು 20:11-13 ದಾಖಲಿಸಲ್ಪಟ್ಟಿದೆ.

[21]Gerhard Friedrich, "εὐαγγελίζομαι," in *Theological Dictionary of the New Testament*, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1964), 2:707–8. [22]ಬೈಬಲಿನಲ್ಲಿರುವ ಪ್ರಾಮುಖ್ಯರಾದ ವ್ಯಕ್ತಿಗಳನ್ನು ಅವರ ಹಳೆಯ ಜೀವಿತಗಳನ್ನು ತೊರೆದು

ಒಂದು ಅಪಾಯಕಾರಿ ನಿಯೋಗಗಳನ್ನು ನೆರವೇರಿಸುವದಕ್ಕೆ ಹೊರಡಬೇಕೆಂದು ಕರೆದಾಗ ಯೆಹೋವನು ಅವರಿಗೆ ದೈವದರ್ಶನದ ಮೂಲಕವಾಗಿ ತನ್ನನ್ನು ತೋರ್ಪಡಿಸಿಕೊಂಡನು. ಗಮನಾರ್ಹವಾದ ಉದಾಹರಣೆಗಳೆಂದರೆ ಮೋಶೆ (ವಿಮೋಚನಕಾಂಡ 3:1-4:17), ಯೆಶಾಯ (ಯೆಶಾಯ 6:1-13), ತಾರ್ಸದ ಸೌಲ (ಅಪೊಸ್ತಲರ ಕೃತ್ಯಗಳು 9:3-20). [23]ಉತ್ಖನನಶಾಸ್ತ್ರಜ್ಞರು ಪ್ರಾಚೀನ ಶೆಕೆಮಿನಲ್ಲಿ ಅತ್ಯಂಥ ಆರಂಭಿಕ ನಿವಾಸಗಳು ಕ್ರಿ.ಪೂ. 4500ರಷ್ಟು ಹಿಂದಿನ ಕಾಲದವುಗಳೆಂಬುದನ್ನು ಕಂಡು ಹಿಡಿದಿರುತ್ತಾರೆ, ಮತ್ತು ಅಬ್ರಹಾಮನ ಕಾಲಕ್ಕೆ ಹತ್ತಿರದಲ್ಲಿ ಅದಾಗಿರುತ್ತದೆ, ಅಲ್ಲಿ ಆ ಸ್ಥಳದಲ್ಲಿ ಉತ್ತಮವಾಗಿ ಸಂಘಟಿತಗೊಂಡ ಬೃಹತ್ ಸಮುದಾಯವು ವಾಸವಾಗಿತ್ತು. ನೋಡಿರಿ Lawrence E. Toombs, "Shechem (Place)," in *The Anchor Bible Dictionary*, ed. David Noel Freedman (New York: Doubleday, 1992), 5:1178–79. [24]1 ಅರಸು 18:16-19:18ರಲ್ಲಿನ ಎಲೀಯನ ಅನುಭವದೊಂದಿಗೆ ಹೋಲಿಕೆ ಮಾಡಿರಿ. [25]ಆದಿಕಾಂಡದೊಳಗೆ ಹಲವಾರು ಪ್ರಕರಣಗಳಲ್ಲಿ ಅಂಥ ಒಂದು ಮನೋಭಾವವು ಅಬ್ರಹಾಮನಲ್ಲಿ ಕಂಡು ಬರುತ್ತದೆ, ಉದಾಹರಣೆಗೆ ಆತನು ದಮಸ್ಕದ ಎಲೀಯೆಜರನನ್ನು ತನ್ನ ಬಾಧ್ಯಸ್ಥನನ್ನಾಗಿ ದತ್ತು ಪಡೆದುಕೊಳ್ಳಲು ನೋಡಿದನು (15:2-4) ಮತ್ತು ಆತನು ಸಾರಳ ದಾಸಿಯಾದ ಹಾಗರಳ ಮೂಲಕ ಮಗುವನ್ನು ಪಡೆಯುವದಕ್ಕೆ ಒಪ್ಪಿಗೆಯನ್ನು ಸೂಚಿಸಿದಾಗ ಕಂಡು ಬರುತ್ತವೆ (16:1-4). ಸಾರಳಿಗೆ ಆಕೆಯ ವೃದ್ಧಾಪ್ಯದಲ್ಲಿ ಮಗುವೊಂದನ್ನು ಹಡೆಯಬಹುದು ಎಂಬುದನ್ನು ಕೇಳಿ ಆತನು ನಕ್ಕನು ಮತ್ತು ಇಸ್ಮಾಯೇಲನನ್ನು ವಾಗ್ದಾನ ಮಾಡಲ್ಪಟ್ಟ ಬಾಧ್ಯಸ್ಥನನ್ನಾಗಿ ಮಾಡಿಕೊಳ್ಳಲು ಅನುಮತಿಸಬೇಕೆಂದು ದೇವರನ್ನು ಬೇಡಿಕೊಂಡ ವೇಳೆಯಲ್ಲಿ ಈ ಮನೋಭಾವವು ಪುನಃ ಕಾಣಿಸುತ್ತದೆ (17:15-18). ಅಂತಿಮವಾಗಿ, ಆತನು ಐಗುಪ್ತದಲ್ಲಿ ಮಾಡಿದ್ದ ಪ್ರಕಾರವೇ, ಪುನಃ ಸುಳ್ಳು ಹೇಳಿದ ವೇಳೆ ಈ ಮನೋಭಾವ ಕಾಣಿಸುತ್ತದೆ, ಗೆರಾರಿನ ಅರಸನ ಮುಂದೆ ಸಾರಳು ತನ್ನ ತಂಗಿ ಎಂಬುದಾಗಿ ವಾದಿಸುತ್ತಾನೆ (20:1, 2).